ಸಮಾಜ ವಿಜ್ಞಾನ
SOCIAL SCIENCE

ತರಗತಿ VII
STANDARD VII
ಭಾಗ - 1
PART I

ಕೇರಳ ಸರಕಾರ
ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ

2016

ರಾಷ್ಟ್ರಗೀತೆ

ಜನಗಣಮನ ಅಧಿನಾಯಕ ಜಯಹೇ
ಭಾರತ ಭಾಗ್ಯವಿಧಾತಾ,
ಪಂಜಾಬಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ,
ವಿಂಧ್ಯಹಿಮಾಚಲ ಯಮುನಾಗಂಗಾ,
ಉಚ್ಛಲ ಜಲಧಿತರಂಗಾ,
ತವಶುಭನಾಮೇ ಜಾಗೇ,
ತವಶುಭ ಆಶಿಷ ಮಾಗೇ,
ಗಾಹೇ ತವ ಜಯ ಗಾಥಾ
ಜನಗಣಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ, ಜಯಹೇ, ಜಯಹೇ,
ಜಯ ಜಯ ಜಯ ಜಯಹೇ!

ಪ್ರತಿಜ್ಞೆ

ಭಾರತವು ನನ್ನ ದೇಶ, ಭಾರತೀಯರೆಲ್ಲರೂ ನನ್ನ ಸಹೋದರ ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

Prepared by :
State Council of Educational Research and Training (SCERT)
Poojappura, Thiruvananthapuram 695012, Kerala

Website : www.scertkerala.gov.in
e-mail : scertkerala@gmail.com
Phone : 0471 - 2341883, Fax : 0471 - 2341869
Typesetting and Layout : SCERT
First Edition : 2014, Reprint : 2016
Printed at : KBPS, Kakkanad, Kochi
© Department of Education, Government of Kerala

ಪ್ರೀತಿಯ ಮಕ್ಕಳೆ,

ನಾವು ಪ್ರತಿಯೊಬ್ಬರೂ ಸಮಾಜದ ಸದಸ್ಯರಲ್ಲವೇ. ಸಮಾಜದ ಒಳಿತುಗಳನ್ನು ಸ್ವೀಕರಿಸಿಯೂ ಕೆಡಕುಗಳಿಗೆದುರಾಗಿ ಪ್ರತಿಕ್ರಿಯೆ ವ್ಯಕ್ತಪಡಿಸಿಯೂ ಜೀವಿಸಬೇಕಾದುದು ಪ್ರತಿಯೊಬ್ಬ ಪೌರನ ಕರ್ತವ್ಯವಾಗಿದೆ. ಶ್ರೀಮಂತವಾದ ನಮ್ಮ ಸಂಸ್ಕೃತಿ ಹಾಗೂ ನಾವಿಂದು ಅನುಭವಿಸುತ್ತಿರುವ ವಿವಿಧ ಸೌಲಭ್ಯಗಳು ನಮ್ಮ ಹಿಂದಿನ ತಲೆಮಾರುಗಳ ಕೊಡುಗೆಗಳಾಗಿವೆ. ಅವರ ತ್ಯಾಗಪೂರ್ಣವಾದ ಕೆಲಸಗಳನ್ನು ಗೌರವಿಸುವುದರೊದಿಗೆ ಅವರ ಸಾಧನೆಗಳನ್ನು ಜೋಪಾನವಾಗಿಡಬೇಕಾಗಿದೆ. ಅವುಗಳನ್ನು ಮುಂದಿನ ತಲೆಮಾರುಗಳಿಗಾಗಿ ಸಂರಕ್ಷಿಸಬೇಕಾಗಿದೆ.

ಮಾನವನ ಹಾಗೂ ಪರಿಸರಗಳೊಳಗಿನ ಸ್ನೇಹಪೂರ್ಣ ಸಂಬಂಧದಲ್ಲಿಯೇ ನಮ್ಮ ಅಸ್ತಿತ್ವವು ನೆಲೆನಿಂತಿದೆ. ಆದುದರಿಂದಲೇ ನಮ್ಮ ಪರಿಸರವನ್ನು ಸಂರಕ್ಷಿಸವುದರೊಂದಿಗೆ ಮುಂದಿನ ತಲೆಮಾರಿಗೂ ಅದನ್ನು ಅನುಭವಿಸುವ ಹಕ್ಕು ಇರುವುದೆಂಬ ಪ್ರಜ್ಞೆಯಿಂದ, ಅದನ್ನು ಸಮಾಜದ ಅಭಿವೃದ್ಧಿಗಾಗಿ ಜಾಗರೂಕತೆಯಿಂದ ಬಳಸಬೇಕು. ಪ್ರಜಾಪ್ರಭುತ್ವ ರಾಷ್ಟ್ರದ ಪ್ರಜೆಯೆಂಬ ನೆಲೆಯಲ್ಲಿ ಹಕ್ಕುಗಳನ್ನು ಅನುಭವಿಸಲೂ ಕರ್ತವ್ಯಗಳನ್ನು ನಿರ್ವಹಿಸಲೂ ನಮಗೆ ಸಾಧ್ಯವಾಗಬೇಕು. ಈ ಪ್ರಜ್ಞೆಯೊಂದಿಗೆ ಕಾರ್ಯನಿರ್ವಹಿಸಲು ಹಾಗೂ ಮುನ್ನಡೆಯಲು ಸಮಾಜ ವಿಜ್ಞಾನ ಕಲಿಕೆಯು ಸಹಾಯಕವಾಗುತ್ತದೆ. ಅಗತ್ಯವಾದ ಜ್ಞಾನವನ್ನು ಗಳಿಸಲು ಹಾಗೂ ಹೆಚ್ಚಿನ ಅನ್ವೇಷಣೆಗೆ ಮತ್ತು ನೂತನ ವಿಷಯಗಳ ಕಂಡುಕೊಳ್ಳುವಿಕೆಗೂ ಪ್ರತಿಕ್ರಿಯೆ ವ್ಯಕ್ತಪಡಿಸುವ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದಕ್ಕೂ ಈ ಪಠ್ಯಪುಸ್ತಕವು ನಿಮಗೆ ಸಹಕಾರಿಯಾಗಲಿ ಎಂದು ಹಾರೈಸುತ್ತೇನೆ. ಶ್

ಶಶ್ರೀಶ್ರಾಮಂತವಾದಜಟ್ಟಿಲ ಜಥಿಣ–ಪಿಟಿ–ಡಜ–ಪಿಟ–ಗ್ಗಟಿ–ಧ್ಟಿ–ತ್ತಟಿ–ತ್ರ.

ಳ್ಳಥಿಡಿಜಟಟ–ಥ್ಥಿ––ಐ–ಡಿಜಿಟಡಖ,
ಡಾ. ಪಿ.ಎ. ಫಾತಿಮ
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ.

TEXTBOOK DEVELOPMENT TEAM

Participants

Abdul Azeez V.P.
H.S.S.T., History, V.P.K.M.M.H.S.S. Puthur Pallikkal
Aboobacker Siddique. K.
P.D. Teacher, G.U.P.S. Veemboor, Manjeri
Ajay Kumar. N.
B.P.O., B.R.C. Hosdurg
Dr. Babukuttan. P.
Senior Lecturer, DIET Kollam
P.V. Hussain
O.H.S.S. Thiroorangadi
Jamal. K.
H.S.S.T., History, R.A.C.H.S.S. Kadameri P.O. Villiyampally
Jayakumar. K.
H.S.A., N.S.S.H.S. Palode
Manoj. K.V.
H.S.S.T. , Political Science, Govt. Gokhale H.S.S. Kumaranellur
Mohanan. V.P.
H.S.A., Chothavoor, H.S.S. Chambad
P.M. Mohammed Musthafa
Lecturer, DIET Palakkad
Pradeepan. T.
H.S.S.T., History, G.H.S.S. Kallachi
H.A. Saleem
U.P.S.A., G.H.S.S. Poruvazhi, Shooranad
Seena Mol. M.M.
H.S.S., Thonnaikkal
K.J. Sherli
U.P.S.A., G.B.H.S.S. Karamana
Somanathan. C.V.
Thrichambaram U.P.S. Thalipparamba
Vijaya Kumar C.R.
H.S.S.T., Geography, Govt. Boys H.S.S. Mithrumala
Wilfred John S.
H.S.S.T., Geography, M.G.H.S.S. Kaniyappuram
Dr. N. Kala
Research Officer, S.C.E.R.T

Experts

Dr. Abdul Razak. P.P.
Associate Professor, Department of History, P.S.M.O. College, Thiroorangadi.
Dr. N.P. Hafis Muhammed
Associate Professor (Rtd), Department of Sociology, Feroke College, Kozhikode
I.P. Joseph.
Assistant Professor(Rtd.)SCERT.
Manoj Kumar. P.S.
Assistant Professor, Department of History, K.K.T.M. College, Kodungalloor, Thrissur.
Mahalingam. S.
Associate Professor (Rtd), Department of Geography, Govt. College, Chittur.
Dr. Priyesh. M.
Assistant Professor, Department of Economics, University College, Thiruvananthapuram.
Dr. Venu Mohan
Assistant Professor, Department of History, Govt. College, Nedumangadi.

Academic Co-ordinator

Chithra Madhavan, Research Officer, SCERT

KANNADA VERSION

Participants

Ganesh Kumar. S., H.S.A., Shri Gopalakrishna High School, Kudlu
Bhanu. A.C., H.S.A., G.H.S.S. Mogralputhur
Sanjeeva. M., H.S.A., G.H.S.S. Paivalike

Language Expert

Dr. P. Shrikrishna Bhat
Rtd. Professor (Kannada), Govt. College Kasaragod

Subject Expert

K.V. Sathyanarayana Rao
Teacher Educator, DIET Kasaragod

Co-ordinator

Dr. Manakkala Gopalakrishnan, Research Officer, SCERT

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರ - 695012

ಅನುಕ್ರಮಣಿಕೆ

1.	ಪರಿವರ್ತನೆಯ ಹಾದಿಯಲ್ಲಿ ಯುರೋಪು	7
2	ವ್ಯಾಪಾರದಿಂದ ಅಧಿಕಾರಕ್ಕೆ	17
3	ಪ್ರತಿಭಟನೆಗಳು ಮತ್ತು ಪ್ರಥಮ ಸ್ವಾತಂತ್ರ್ಯ ಹೋರಾಟ	27
4.	ನವಯುಗದತ್ತ ಭಾರತ	36
5.	ಆರ್ಥಿಕ ಮೂಲಗಳು	48
6	ಭೂಪಟಗಳ ಅರ್ಥವನ್ನು ಹುಡುಕಿ	58
7	ಭೂಮಿ ಹಾಗೂ ಜೀವ ಜಗತ್ತು	72

ಸೌಲಭ್ಯಕ್ಕಾಗಿ ಕೆಲವು ಚಿಹ್ನೆಗಳನ್ನು ಈ ಪುಸ್ತಕದಲ್ಲಿ ಬಳಸಲಾಗಿದೆ.

ಹೆಚ್ಚಿನ ಓದಿಗಾಗಿ – ಮೌಲ್ಯಮಾಪನಕ್ಕೆ ಒಳಪಡಿಸಬೇಕಾಗಿಲ್ಲ.

ಕಲಿಕಾ ಪ್ರಗತಿಯನ್ನು ನಿರ್ಣಯಿಸುವುದಕ್ಕಿರುವ ಪ್ರಶ್ನೆಗಳು

ಕ್ರೋಡೀಕರಣ

ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

ಮೌಲ್ಯನಿರ್ಣಯ ಮಾಡುವ

ಮುಂದುವರಿದ ಚಟುವಟಿಕೆಗಳು

1 ಪರಿವರ್ತನೆಯ ಹಾದಿಯಲ್ಲಿ ಯುರೋಪು

ಹಗಿಯ ಸೋಫಿಯ

ಚಿತ್ರದಲ್ಲಿ ಕಾಣುವ 'ಹಗಿಯ ಸೋಫಿಯ' ಜಗತ್ತಿನ ಐತಿಹಾಸಿಕ ಸ್ಮಾರಕವಾಗಿದೆ. ಈ ಸ್ಮಾರಕವು ಕ್ರಿ.ಶ. ಆರನೇ ಶತಮಾನದಲ್ಲಿ ನಿರ್ಮಾಣಗೊಂಡಿತು. ಇದು ಇಂದು ತುರ್ಕಿಯ ಐತಿಹಾಸಿಕ ವಸ್ತುಸಂಗ್ರಹಾಲಯವಾಗಿದೆ. ಮನೋಹರವಾದ ವಾಸ್ತುಶೈಲಿಗೆ ಉತ್ತಮ ಮಾದರಿಯಾದ ಹಗಿಯ ಸೋಫಿಯಾದಂತೆ ಇರುವ ಚರಿತ್ರೆಯ ಅನೇಕ ಅವಶೇಷಗಳು ಕೋನ್‌ಸ್ಟಂಟಿನೋಪಲಿನಲ್ಲಿವೆ. ಇಂತಹ ಚರಿತ್ರೆ ಸ್ಮಾರಕಗಳಿರುವ ಕೋನ್‌ಸ್ಟಂಟಿನೋಪಲಿಗೆ ಜಾಗತಿಕ ಚರಿತ್ರೆಯಲ್ಲಿರುವ ಪ್ರಾಧಾನ್ಯದ ಕುರಿತಾಗಿ ನೀವು ತಿಳಿದಿದ್ದೀರಾ?



ಭೂಪಟದಲ್ಲಿ ಕೋನ್‌ಸ್ಟಂಟಿನೋಪಲ್‌ನ ಸ್ಥಾನವನ್ನು ಗಮನಿಸಿರಿ.

ಪೂರ್ವ ರೋಮ್ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಕೋನ್‌ಸ್ಟಂಟಿನೋಪಲ್‌ಗೆ (ಈಗಿನ ಇಸ್ತಾಂಬುಲ್) ಜಾಗತಿಕ ಚರಿತ್ರೆಯಲ್ಲಿ ಪ್ರಧಾನವಾದ ಸ್ಥಾನವಿತ್ತು.

ಕೋನ್‌ಸ್ಟಂಟಿನೋಪಲ್ ನಗರದ ವಿಶೇಷತೆಗಳೇನು?

- ವಿಜ್ಞಾನದ ಕೇಂದ್ರವಾಗಿತ್ತು.
- ಪಂಡಿತರ ಹಾಗೂ ಅಮೂಲ್ಯ ಗ್ರಂಥಗಳ ಕೇಂದ್ರವಾಗಿತ್ತು.
- ಏಷ್ಯಾದ ದೇಶಗಳಿಂದ ಯುರೋಪಿನ ದೇಶಗಳಿಗಿರುವ ಪ್ರಧಾನ ಪ್ರವೇಶದ್ವಾರವಾಗಿತ್ತು.

1453ರಲ್ಲಿ ತುರುಕರು ಕೋನ್‌ಸ್ಟಂಟಿನೋಪಲನ್ನು ವಶಪಡಿಸಿಕೊಂಡರು. ಇದರಿಂದಾಗಿ ಶತಮಾನಗಳಿಂದ ಅಸ್ತಿತ್ವದಲ್ಲಿದ್ದ ಪೂರ್ವ ರೋಮನ್ ಸಾಮ್ರಾಜ್ಯವು ನಾಶವಾಯಿತು. ಅಲ್ಲಿ ನೆಲೆಸಿದ್ದ ಪಂಡಿತರು, ಕಲಾವಿದರು ಹಾಗೂ ಸಾಹಿತಿಗಳನ್ನೊಳಗೊಂಡಂತೆ ಅನೇಕರು ಸಮೀಪದ ಪ್ರದೇಶಗಳಿಗೆ ಪಲಾಯನ ಮಾಡಿದರು. ಅವರಲ್ಲಿ ದೊಡ್ಡ ವಿಭಾಗವೊಂದು ಇಟೆಲಿಯ ನಗರಗಳನ್ನು ಸೇರಿತು.

ಇವರು ನಗರಗಳಿಗೆ ವಲಸೆ ಹೋಗಲು ಕಾರಣಗಳಾವುವು?

- ಇಟೆಲಿಯು ಪುರಾತನ ಗ್ರೀಕೋರೋಮನ್ ನಾಗರಿಕತೆಯ ಪರಂಪರೆಯನ್ನು ಬಿಂಬಿಸುವ ದೇಶವಾಗಿತ್ತು.
- ಇಟೆಲಿಯ ಶ್ರೀಮಂತ ವ್ಯಾಪಾರಿಗಳು ಕಲೆ, ಸಾಹಿತ್ಯ, ಸಂಸ್ಕೃತಿಗಳಿಗೆ ಪ್ರೋತ್ಸಾಹವನ್ನು ನೀಡುತ್ತಿದ್ದರು.
- ಚಾರಿತ್ರಿಕ ಪರಂಪರೆಯನ್ನು ಸಂರಕ್ಷಿಸಲು ಇಟೆಲಿಯ ಶ್ರೀಮಂತ ವ್ಯಾಪಾರಿಗಳು ಆಸಕ್ತರಾಗಿದ್ದರು.

ಇಷ್ಟೊಂದು ವಿಶೇಷತೆಗಳಿರುವ ಇಟೆಲಿಯನ್ನು ತಲುಪಿದ ಪಂಡಿತರಿಗೆ ಹೆಚ್ಚು ಚಿಂತನೆ ಹಾಗೂ ಅಧ್ಯಯನ ಮಾಡಲಿರುವ ಸಂದರ್ಭಗಳು ಲಭಿಸಿದುವು. ಇದರಿಂದಾಗಿ 13ನೇ ಶತಮಾನದ ಕೊನೆಯಲ್ಲಿ ಇಟೆಲಿಯಲ್ಲಿ ಆರಂಭವಾದ ನವೋತ್ಥಾನ ಪ್ರಕ್ರಿಯೆಗಳು ಬೆಳೆವಣಿಗೆ ಹೊಂದಿ ಎಲ್ಲೆಡೆ ವ್ಯಾಪಿಸಿದವು.

ನವೋತ್ಥಾನ

ಮಧ್ಯಕಾಲೀನ ಕಲೆ, ಸಾಹಿತ್ಯ, ಚರಿತ್ರೆಗಳು ಧಾರ್ಮಿಕ ಆಶಯಗಳ ಆಧಾರದಲ್ಲಿ ರಚಿತವಾಗಿದ್ದವು. ಲ್ಯಾಟಿನ್, ಗ್ರೀಕ್ ಭಾಷೆಗಳು ಯುರೋಪಿನ ಪಂಡಿತಭಾಷೆಗಳಾಗಿ ಪರಿಗಣಿತವಾಗಿದ್ದುವು. ಈ ಭಾಷೆಗಳಲ್ಲಿ ಕೃತಿಗಳೂ ರಚನೆಗೊಂಡಿದ್ದುವು ಆದರೆ 13ನೇ ಶತಮಾನದ ಆರಂಭದೊಂದಿಗೆ ಗ್ರೀಕ್, ಲ್ಯಾಟಿನ್, ಭಾಷೆಗಳ ಹೊರತಾಗಿ ಇಂಗ್ಲೀಷ್, ಸ್ಪಾನಿಷ್, ಫ್ರೆಂಚ್ ಮೊದಲಾದ ಪ್ರಾದೇಶಿಕ ಭಾಷೆಗಳಲ್ಲಿ ಕೃತಿಗಳನ್ನು ರಚಿಸಲು ಆರಂಭಿಸಿದರು. ಇಂತಹ ಕೃತಿಗಳಲ್ಲಿ ಸಾಮಾನ್ಯ ಮನುಷ್ಯರ ಜೀವನವನ್ನು ಚಿತ್ರಿಸಲಾಗಿತ್ತು. ಇಲ್ಲಿ ಧಾರ್ಮಿಕ ಆಶಯಗಳ ಹೊರತಾಗಿ ಮಾನವ ಜೀವನಕ್ಕೆ ಪ್ರಾಧಾನ್ಯ ಲಭಿಸುವಂತೆ ಸಾಹಿತ್ಯದ ವಿಷಯಗಳೂ ಬದಲಾದುವು. ಇದೇ ರೀತಿಯ ಬದಲಾವಣೆಗಳು ಚಿತ್ರಕಲೆ, ವಾಸ್ತುಶಿಲ್ಪ, ಮೊದಲಾದ ವಲಯಗಳಲ್ಲಿ ಉಂಟಾದುವು. ಈ ರೀತಿಯಲ್ಲಿ ಮಾನವ ಜೀವನಕ್ಕೆ ಪ್ರಾಧಾನ್ಯವನ್ನು ನೀಡುವ ದೃಷ್ಟಿಕೋನವನ್ನು ಮಾನವೀಯತೆ ಎಂದು ಕರೆಯುತ್ತಾರೆ.

ಪ್ರಪಂಚದ ಕುರಿತು ಹಾಗೂ ಜೀವನ ಸನ್ನಿವೇಶಗಳ ಕುರಿತು ವಿಭಿನ್ನವಾದ ರೀತಿಯಲ್ಲಿ ಚಿಂತಿಸಲು ಮಾನವೀಯತೆಯು ಪ್ರೇರಣೆಯನ್ನಿತ್ತಿತು. ಇದು ಉಚಿತಾನುಚಿತ ಚಿಂತನೆ ಹಾಗೂ ಅನ್ವೇಷಣಾತ್ಮಕ ಮನೋಭಾವದ ಬೆಳವಣಿಗೆಗೆ ಕಾರಣವಾಯಿತು. ಇದರ ಮೂಲಕ ಮಾನವ ಜೀವನದ ನಾನಾ ವಲಯಗಳಲ್ಲಿ ಹೊಸ ಚಿಂತನೆಗಳು ಮೂಡಿದವು. ಈ ರೀತಿಯಲ್ಲಿ ಉಂಟಾದ ಪುನರುಜ್ಜೀವನವನ್ನು ನವೋತ್ಥಾನ ಎಂದು ಕರೆಯುತ್ತಾರೆ.

ಯುರೋಪಿನಲ್ಲಿ ಮಾನವೀಯತೆಯ ಬೆಳವಣಿಗೆಗೆ ಸಹಕಾರಿಯಾದ ಸನ್ನಿವೇಶಗಳನ್ನು ಸ್ಪಷ್ಟಪಡಿಸಿರಿ.

ನವೋತ್ಥಾನವು ವಿವಿಧ ವಲಯಗಳ ಮೇಲೆ ಹೇಗೆ ಪ್ರಭಾವ ಬೀರಿತು ಎಂಬುದನ್ನು ನಾವು ಪರಿಶೀಲಿಸೋಣ.

ಸಾಹಿತ್ಯದಲ್ಲಿ ನವೋತ್ಥಾನ

ಪೆಟ್ರಾರ್ಕನು ನವೋತ್ಥಾನ ಕಾಲದ ಸಾಹಿತಿಗಳಲ್ಲಿ ಪ್ರಮುಖನಾಗಿದ್ದನು (ಕ್ರಿ.ಶ. 1304 – 1374). ಇವನನ್ನು 'ನವೋತ್ಥಾನದ ಪಿತಾಮಹ' ಎಂದು ಕರೆಯುತ್ತಾರೆ. ಸೀಕ್ರಟಂ (Secretum) ಎಂಬುದು ಪೆಟ್ರಾರ್ಕನ ಪ್ರಸಿದ್ಧವಾದ ಕೃತಿಯಾಗಿದೆ.

ಪೆಟ್ರಾರ್ಕ್

ಆ ಕಾಲದ ಸಾಹಿತಿಗಳಲ್ಲಿ ಕೆಲವರ ಚಿತ್ರಗಳನ್ನು ಕೆಳಗೆ ಕೊಡಲಾಗಿದೆ. ಅವರ ಕೃತಿಗಳ ಹೆಸರುಗಳನ್ನು ನೀಡಲಾಗಿದೆ.

ಡಾಂಟೆ

ಡಿವೈನ್ ಕೋಮಡಿ

ಬೊಕ್ಕಾಚಿಯೊ

ದಕ್ಕಾಮರನ್ ಕಥೆಗಳು

ಸರ್ವಾಂಟಸ್

ಡೋನ್ ಕ್ವಿಕ್ಸೋಟ್

ಇರಾಸ್ಮಸ್

ಇನ್ ಪ್ರೈಸ್ ಆಫ್ ಫೋಲಿ

ನವೋತ್ಥಾನ ಸಾಹಿತಿಗಳ ಹೆಸರುಗಳನ್ನು ಕೆಳಗಿರುವ ಪಟ್ಟಿಯಲ್ಲಿ ನೀಡಲಾಗಿದೆ. ಎದುರಿರುವ ಕೋಣೆಗಳಲ್ಲಿ ಅವರ ಕೃತಿಗಳ ಹೆಸರನ್ನು ಬರೆಯಿರಿ.

ಸಾಹಿತಿಗಳು	ಕೃತಿ
ಪೆಟ್ರಾರ್ಕ್	
ಡಾಂಟೆ	
ಬೊಕ್ಕಾಚಿಯೊ	
ಸರ್ವಾಂಟಸ್	
ಇರಾಸ್ಮಸ್	

ಕಲೆಯಲ್ಲಿ ನವೋತ್ಥಾನ

ಚಿತ್ರಕಲೆಯು ನವೋತ್ಥಾನ ಕಾಲದಲ್ಲಿ ಅತ್ಯಂತ ಗಮನಸೆಳೆದ ವಿಷಯವಾಗಿತ್ತು. ಲಿಯನಾರ್ಡೋ ಡಾವಿಂಚಿಯು ಗಮನ ಸೆಳೆದ ಚಿತ್ರಗಾರನಾಗಿದ್ದನು. ಮೊನಾಲಿಸ, ಅಂತಿಮ ಭೋಜನ ಇತ್ಯಾದಿಗಳು ಅವನ ಪ್ರಸಿದ್ಧವಾದ ಚಿತ್ರಗಳಾಗಿವೆ.

ನವೋತ್ಥಾನ ಕಾಲದ ಪ್ರಧಾನ ಚಿತ್ರಕಾರರು ಹಾಗೂ ಅವರು ರಚಿಸಿದ ಚಿತ್ರಗಳನ್ನು ಕೆಳಗೆ ಕೊಡಲಾಗಿದೆ.

ಮೊನಾಲಿಸ

ಮೊನಾಲಿಸ

ಮೊನಾಲಿಸವು ನವೋತ್ಥಾನ ಕಾಲದ ಪ್ರಸಿದ್ಧವಾದ ಚಿತ್ರವಾಗಿದೆ. ಮೊನಾಲಿಸಳ ನಿಗೂಢವಾದ ಮುಗುಳ್ನಗೆಯು ಅನಂತರದ ಕಾಲಘಟ್ಟದಲ್ಲಿ ಅನೇಕ ಚರ್ಚೆಗಳು ಹಾಗೂ ಸಂವಾದಗಳಿಗೆ ದಾರಿಮಾಡಿಕೊಟ್ಟಿತು. ಲಿಯನಾರ್ಡೋ ಡಾವಿಂಚಿ ಎಂಬ ಪ್ರಸಿದ್ಧನಾದ ನವೋತ್ಥಾನ ಚಿತ್ರಕಾರನು ಕ್ರಿ.ಶ. 1503 ರಿಂದ 1505ರ ನಡುವೆ ಈ ಚಿತ್ರವನ್ನು ರಚಿಸಿದನು. ಈ ಚಿತ್ರವನ್ನು ಪ್ಯಾರಿಸ್‌ನ ವಸ್ತುಸಂಗ್ರಹಾಲಯದಲ್ಲಿ ಸಂರಕ್ಷಿಸಿಡಲಾಗಿದೆ.



ಅಂತಿಮ ಭೋಜನ



ಲಿಯನಾರ್ಡೋ ಡಾವಿಂಚಿ

ಮೈಕೆಲ್ ಏಂಜೆಲೋ

ಅಂತಿಮ ತೀರ್ಪು

ರಾಫೆಲ್

ಅಥೆನ್ಸಿನ ವಿದ್ಯಾಲಯ

ಚಿತ್ರಕಲೆಯಲ್ಲಿ ಮಾತ್ರವಲ್ಲ, ಇತರ ಕಲಾರಂಗಗಳಲ್ಲಿಯೂ ಮುನ್ನಡೆಯುಂಟಾಯಿತು. ಶಿಲ್ಪವಿದ್ಯೆ, ವಾಸ್ತುಶಿಲ್ಪ, ಸಂಗೀತ ಮೊದಲಾದ ಕ್ಷೇತ್ರಗಳಲ್ಲಿಯೂ ಶ್ರೇಷ್ಠವಾದ ಕೃತಿಗಳು ರಚಿಸಲ್ಪಟ್ಟುವು.

ವಾಸ್ತುಶಿಲ್ಪ ಹಾಗೂ ಶಿಲ್ಪಕಲೆಯ ಪ್ರಧಾನ ಕಲಾವಿದರು ಮತ್ತು ಅವರ ಕಲಾಕೃತಿಗಳನ್ನು ಚಿತ್ರಗಳಿಂದ ಕಂಡುಹಿಡಿಯೋಣ.



ಲೋರೆನ್ಸೊ ಗಿಬರ್ಟಿ

ಫ್ಲೋರೆನ್ಸಿನ ಬ್ಯಾಪ್ಟಿಸ್ಟ್ ದೇವಾಲಯದ ಬಾಗಿಲು

ಡೊಣಾಟ್ಟಲೋ

ಗಟ್ಟಾಮೇಲಾಟಾ (Gattamelata) - ಅಶ್ವಾರೂಢ ಪ್ರತಿಮೆ

ನವೋತ್ಥಾನದ ಕಲಾವಿದರು, ಅವರ ಕಲಾಕೃತಿಗಳು, ಕ್ಷೇತ್ರ ಇತ್ಯಾದಿಗಳನ್ನು ಚಿತ್ರಗಳ ಸಹಾಯದಿಂದ ಪಟ್ಟಿಯಲ್ಲಿ ಬರೆಯಿರಿ.

ಕಲಾವಿದರು	ಕಲಾಕೃತಿ	ಕ್ಷೇತ್ರ
ಲೋರೆನ್ಸೋ ಗಿಬರ್ಟಿ	ಫ್ಲೋರೆನ್ಸಿನ ಬ್ಯಾಪ್ಟಿಸ್ಟ್ ದೇವಾಲಯದ ಬಾಗಿಲು	ವಾಸ್ತುಶಿಲ್ಪ

ವಿಜ್ಞಾನದಲ್ಲಿ ನವೋತ್ಥಾನ

ಸೂರ್ಯನು ಸೌರವ್ಯೂಹದ ಕೇಂದ್ರ ಎಂದೂ ಭೂಮಿಯನ್ನೂ ಒಳಗೊಂಡು ಎಲ್ಲ ಗ್ರಹಗಳೂ ಸೂರ್ಯನಿಗೆ ಪ್ರದಕ್ಷಿಣೆ ಮಾಡುತ್ತವೆ ಎಂದೂ ನೀವು ಕಲಿತಿದ್ದೀರಲ್ಲವೆ. ಆದರೆ ಭೂಮಿಯು ಪ್ರಪಂಚದ ಕೇಂದ್ರ ಎಂಬ ತಿಳುವಳಿಕೆಯು ಹಿಂದಿನ ಕಾಲದಲ್ಲಿತ್ತು. ನವೋತ್ಥಾನ ಕಾಲದಲ್ಲಿ ಈ ತಿಳುವಳಿಕೆಯು ತಪ್ಪು ಎಂದು ಸಾಧಿಸಲ್ಪಟ್ಟಿತು. ಕೋಪರ್ನಿಕಸ್ ಎಂಬ ವಿಜ್ಞಾನಿಯು ಸೌರಸಿದ್ಧಾಂತವನ್ನು ಆವಿಷ್ಕರಿಸಿದ್ದಲ್ಲದೆ ಸೂರ್ಯನೇ ಸೌರವ್ಯೂಹದ ಕೇಂದ್ರ ಎಂದು ಪ್ರತಿಪಾದಿಸಿದನು. ಗೆಲಿಲಿಯೋ ಗೆಲಿಲಿಯು ದೂರದರ್ಶಕವನ್ನು ಕಂಡುಹಿಡಿದು ಅದರ ಮೂಲಕ ಸೌರವ್ಯೂಹ ಸಿದ್ಧಾಂತ ಸರಿಯೆಂದು ಸಾಧಿಸಿ ತೋರಿಸಿದನು. ಗುಟನ್‌ಬರ್ಗ್‌ನು ಮುದ್ರಣಯಂತ್ರವನ್ನು ಕಂಡುಹಿಡಿಯುವುದರೊಂದಿಗೆ ನವೋತ್ಥಾನದ ಆಶಯಗಳು ಹೆಚ್ಚು ಪ್ರಚಾರವಾದುವು.



ಗೆಲಿಲಿಯೋವಿನ ದೂರದರ್ಶಕ

ಜೊಹಾನ್ಸ್ ಗುಟನ್‌ಬರ್ಗ್



ಗುಟನ್‌ಬರ್ಗ್‌ನ ಮುದ್ರಣಯಂತ್ರ

ಮುದ್ರಣದ ಕಥೆ

1439ರಲ್ಲಿ ಜರ್ಮನಿಯ ಲೋಹ ಕೆಲಸಗಾರನಾಗಿದ್ದ ಜೊಹಾನ್ಸ್ ಗುಟನ್‌ಬರ್ಗ್‌ನು ಮುದ್ರಣಯಂತ್ರವನ್ನು ಕಂಡುಹಿಡಿದನು. ಮರದಿಂದ ನಿರ್ಮಿಸಿದ, ತೆಗೆದಿರಿಸಬಹುದಾದ ಅಕ್ಷರಗಳನ್ನು ಉಪಯೋಗಿಸಿ ಈ ಯಂತ್ರವನ್ನು ತಯಾರಿಸಿದನು. ಮುದ್ರಣದ ಸಂಶೋಧನೆಯು ಓದುಗರ ನೂತನ ಜಗತ್ತನ್ನು ತೆರೆಯಿತು. ನವೋತ್ಥಾನ ಕಾಲದಲ್ಲಿ ಮಾನವರ ವಿಚಾರವಿನಿಮಯದಲ್ಲಿ ಇದು ಕ್ರಾಂತಿಕಾರಕವಾದ ಬದಲಾವಣೆಗಳನ್ನುಂಟುಮಾಡಿತು. ಗುಟನ್‌ಬರ್ಗ್‌ನ ಮುದ್ರಣ ತಾಂತ್ರಿಕತೆಯು ಜಗತ್ತಿನ ಇತರ ಭಾಗಗಳಿಗೂ ವ್ಯಾಪಿಸಿತು. ವಿಜ್ಞಾನದ ಹರಡುವಿಕೆಗೆ ಮುದ್ರಣ ಯಂತ್ರದ ಸಂಶೋಧನೆಯು ದೊಡ್ಡ ಕೊಡುಗೆಯನ್ನು ನೀಡಿತು.

ವೈಜ್ಞಾನಿಕ ಕ್ಷೇತ್ರದಲ್ಲುಂಟಾದ ಪ್ರಗತಿಯು ಉತ್ಪಾದನಾರಂಗದ ಮೇಲೆ ಯಾವ ರೀತಿಯಲ್ಲಿ ಪ್ರಭಾವವನ್ನು ಬೀರಿತು? ಚರ್ಚಿಸಿರಿ.

ಧಾರ್ಮಿಕ ಪುನರುತ್ಥಾನ

ಮಾರ್ಟಿನ್ ಲೂಥರ್

ನವೋತ್ಥಾನ ಆಶಯಗಳು ಧಾರ್ಮಿಕ ರಂಗದಲ್ಲೂ ಪ್ರಭಾವ ಬೀರಿದವು. ಹದಿನಾರನೇ ಶತಮಾನದಲ್ಲಿ ಯುರೋಪಿನ ಕ್ರೈಸ್ತ ಸಭೆಯಲ್ಲಿ ಉಂಟಾದ ನವೀಕರಣವನ್ನು ಧಾರ್ಮಿಕ ಪುನರುತ್ಥಾನ ಎನ್ನುತ್ತಾರೆ. ಇದು ಜರ್ಮನಿಯಲ್ಲಿ ಆರಂಭವಾಯಿತು. ಮಾರ್ಟಿನ್ ಲೂಥರನು ಇದಕ್ಕೆ ನೇತೃತ್ವವನ್ನು ನೀಡಿದನು.

ಸಮುದ್ರ ಮಾರ್ಗಗಳನ್ನು ಹುಡುಕಿ

ತುರುಕರು ಕೋನ್‌ಸ್ಟಂಟಿನೋಪಲನ್ನು ವಶಪಡಿಸಿದುದನ್ನು ನಾವು ತಿಳಿದಿದ್ದೇವಲ್ಲವೆ. ಇದರಿಂದಾಗಿ ಏಷ್ಯಾದ ದೇಶಗಳೊಂದಿಗೆ ಯುರೋಪಿಗೆ ಇದ್ದ ವ್ಯಾಪಾರ ಸಂಬಂಧಗಳಿಗೆ ಅಡ್ಡಿಯುಂಟಾಯಿತು. ಇದು ನೂತನ ವಾಣಿಜ್ಯ ಮಾರ್ಗಗಳನ್ನು ಕಂಡುಹಿಡಿಯಲು ಯುರೋಪಿಯನ್ನರನ್ನು ನಿರ್ಬಂಧಿಸಿತು. ದಿಕ್ಸೂಚಿಯ ಸಂಶೋಧನೆ ಮತ್ತು ಸಾಹಸಮಯ ಸಂಚಾರಕ್ಕಿರುವ ಆಸಕ್ತಿಯು ನೂತನ ಸಂಚಾರ ಮಾರ್ಗಗಳನ್ನೂ ಸಮುದ್ರಗಳನ್ನೂ ಭೂಖಂಡಗಳನ್ನೂ ಮಾನವನಿಗೆ ಪರಿಚಯಿಸಿತು.

ಕೈಗಾರಿಕಾ ಕ್ರಾಂತಿ

ನವೋತ್ಥಾನದಿಂದಾಗಿ ವೈಜ್ಞಾನಿಕ ರಂಗದಲ್ಲುಂಟಾದ ಪ್ರಗತಿಯು ನೂತನ ಯಂತ್ರಗಳ ಸಂಶೋಧನೆಗೆ ಕಾರಣವಾಯಿತು. ಯಂತ್ರಗಳು ಉತ್ಪಾದನಾ ರಂಗದಲ್ಲಿ ದೊಡ್ಡ ಬದಲಾವಣೆಗಳನ್ನುಂಟುಮಾಡಿದುವು. ಇದು ಉತ್ಪಾದನೆಯಲ್ಲಿ ಹತ್ತು ಮಡಿ ಹೆಚ್ಚಳ ಉಂಟಾಗಲೂ ಉತ್ಪಾದನಾ ವೆಚ್ಚವು ಕಡಿಮೆಯಾಗಲೂ ದಾರಿಮಾಡಿಕೊಟ್ಟಿತು. ಉತ್ಪಾದನಾ ರಂಗದಲ್ಲಿ ಉಂಟಾದ ಈ ರೀತಿಯ ಬದಲಾವಣೆಗಳನ್ನು ಕೈಗಾರಿಕಾ ಕ್ರಾಂತಿ ಎನ್ನುತ್ತಾರೆ. ಕೈಗಾರಿಕಾ ಕ್ರಾಂತಿಯು ಇಂಗ್ಲೆಂಡಿನಲ್ಲಿ ಆರಂಭವಾಯಿತು. ಇದರಿಂದಾಗಿ ವಾಣಿಜ್ಯ ರಂಗದಲ್ಲಿ ದೊಡ್ಡ ಬದಲಾವಣೆಗಳುಂಟಾದುವು.

ಕೈಗಾರಿಕಾ ಕ್ರಾಂತಿಯ ಕಾಲದ ಸಂಶೋಧನೆಗಳು

ಸ್ಪಿನ್ನಿಂಗ್ ಜೆನ್ನಿ

ಉಗಿ ಯಂತ್ರ

ಕೈಗಾರಿಕಾ ಕ್ರಾಂತಿಯ ಕಾಲದ ಸಂಶೋಧನೆಗಳು	ವಿಜ್ಞಾನಿಗಳು
ಫ್ಲ್ಯಯಿಂಗ್ ಷಟಲ್	ಜೋನ್ ಕೇ
ಸ್ಪಿನ್ನಿಂಗ್ ಜೆನ್ನಿ	ಜೇಮ್ಸ್ ಹಾರ್‌ಗ್ರೀವ್ಸ್
ಉಗಿ ಯಂತ್ರ	ಜೇಮ್ಸ್ ವಾಟ್
ಲೋಕೋಮೋಟಿವ್	ಜೋರ್ಜ್ ಸ್ಟೀವನ್‌ಸನ್

"ಯುರೋಪಿನಲ್ಲಿ ಪರಿವರ್ತನೆಯನ್ನುಂಟುಮಾಡುವುದರಲ್ಲಿ ನವೋತ್ಥಾನ ವಹಿಸಿದ ಪಾತ್ರ" ಎಂಬ ವಿಷಯದ ಆಧಾರದಲ್ಲಿ ವಿಚಾರಗೋಷ್ಠಿಯನ್ನು ಏರ್ಪಡಿಸಿರಿ.

ಕ್ರೋಡೀಕರಣ

- ನವೋತ್ಥಾನವು ಇಟೆಲಿಯಲ್ಲಿ ಆರಂಭವಾಯಿತು.
- ಮಾನವೀಯತೆಯು ನವೋತ್ಥಾನದ ಪ್ರಮುಖ ವಿಶೇಷತೆಯಾಗಿತ್ತು.
- ಸಾಹಿತ್ಯ, ಕಲೆ, ವಿಜ್ಞಾನ, ಧರ್ಮ ಎಂಬೀ ರಂಗಗಳಲ್ಲಿ ನವೋತ್ಥಾನವು ಪ್ರಭಾವ ಬೀರಿತು.
- ಸಾಗರದ ಮೂಲಕ ವಾಣಿಜ್ಯ ಮಾರ್ಗಗಳನ್ನು ಕಂಡುಹಿಡಿಯಲು ಪ್ರಯತ್ನಿಸಿದರಲ್ಲದೆ ಆ ಮೂಲಕ ಯುರೋಪಿಯನ್ನರು ಹಲವು ಭೂಖಂಡಗಳನ್ನು ತಲುಪಿದರು.
- ಕೈಗಾರಿಕಾ ಕ್ರಾಂತಿಯು ಉತ್ಪಾದನಾ ರಂಗದಲ್ಲಿ ಬದಲಾವಣೆಯನ್ನು ಉಂಟುಮಾಡಿತು.

ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ನವೋತ್ಥಾನದ ಆವಿರ್ಭಾವಕ್ಕೆ ವಿವಿಧ ಸನ್ನಿವೇಶಗಳು ದಾರಿಮಾಡಿಕೊಟ್ಟವು ಎಂಬುದನ್ನು ತಿಳಿಯುವುದು.
- ಜಗತ್ತಿನ ಜನತೆಯಲ್ಲಿ ಮಾನವೀಯತೆ ಹಾಗೂ ಅನ್ವೇಷಣಾತ್ಮಕ ಮನೋಭಾವ ಬೆಳೆದುಬರುವಲ್ಲಿ ನವೋತ್ಥಾನವು ಪ್ರಧಾನ ಪಾತ್ರವಹಿಸಿತೆಂಬುದನ್ನು ತಿಳಿಯುವುದು.
- ನವೋತ್ಥಾನವು ವಿವಿಧ ಕ್ಷೇತ್ರಗಳ ಮೇಲೆ ಪ್ರಭಾವ ಬೀರಿತು ಎಂದು ತಿಳಿಯುವುದು.
- ವಿಜ್ಞಾನ–ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಯು ಕೈಗಾರಿಕಾ ಕ್ರಾಂತಿಗೆ ಕಾರಣವಾಯಿತು ಎಂದು ತಿಳಿಯುವುದು.

ಮೌಲ್ಯನಿರ್ಣಯ ಮಾಡುವ

- ನವೋತ್ಥಾನದ ವಿಶೇಷತೆಯಾದ ಮಾನವೀಯತೆಯು ಸಾಹಿತ್ಯ, ಕಲೆ, ವಿಜ್ಞಾನ ಕ್ಷೇತ್ರಗಳ ಮೇಲೆ ಬೀರಿದ ಪ್ರಭಾವವನ್ನು ಸ್ಪಷ್ಟಪಡಿಸಿರಿ.
- ನೂತನ ಸಾಗರ ಮಾರ್ಗಗಳು ಹಾಗೂ ಅವುಗಳನ್ನು ಕಂಡುಹಿಡಿದವರ ಪಟ್ಟಿಯನ್ನು ತಯಾರಿಸಿರಿ.
- ನವೋತ್ಥಾನ ಕಾಲದ ಪ್ರಮುಖ ಕಲಾವಿದರು ಹಾಗೂ ಕಲಾಕೃತಿಗಳನ್ನು ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ. ಎ ವಿಭಾಗಕ್ಕೆ ಸರಿಹೊಂದುವಂತೆ ಬಿ ವಿಭಾಗವನ್ನು ಕ್ರಮೀಕರಿಸಿ ಬರೆಯಿರಿ.

ಎ	ಬಿ
ಮೊನಾಲಿಸ	ಡೊಣಾಟ್ಟಲೋ
ಅಂತಿಮ ತೀರ್ಪು	ಲಿಯೋನಾರ್ಡೋ ಡಾವಿಂಚಿ
ಅಥೆನ್ಸಿನ ವಿದ್ಯಾಲಯ	ಮೈಕೆಲ್ ಏಂಜಲೋ
ಗಟ್ಟಾಮೆಲಾಟಾ	ರಾಫೆಲ್

ಮುಂದುವರಿದ ಚಟುವಟಿಕೆಗಳು

- ನವೋತ್ಥಾನದ ಸಾಹಿತಿಗಳ, ಕಲಾಕಾರರ, ವಿಜ್ಞಾನಿಗಳ ಚಿತ್ರಗಳನ್ನು ಸಂಗ್ರಹಿಸಿ ಟಿಪ್ಪಣಿಯೊಂದಿಗೆ ಆಲ್ಬಂ ತಯಾರಿಸಿರಿ.

2 ವ್ಯಾಪಾರದಿಂದ ಅಧಿಕಾರಕ್ಕೆ

ಕಪ್ಪು ಚಿನ್ನಕ್ಕೂ ಒಂದು ಕಥೆ ಹೇಳಲಿಕ್ಕಿದೆ

ಸ್ನೇಹಿತರೆ, ನಾನು ಕಾಳುಮೆಣಸು. ಶತಮಾನಗಳ ಹಿಂದಿನ ಯುರೋಪಿನ ವಿಷಯವನ್ನು ನಾನು ಹೇಳುತ್ತೇನೆ. ಕೆಲವು ತಿಂಗಳುಗಳಷ್ಟು ಕಾಲ ದೀರ್ಘವಿರುವ ಚಳಿಗಾಲ ಆರಂಭವಾಗುವ ಮೊದಲೇ ಅಲ್ಲಿನ ಕೃಷಿಕರು ತಮ್ಮಲ್ಲಿರುವ ಜಾನುವಾರುಗಳಲ್ಲಿ ಕೆಲವನ್ನು ಕೊಂದು ಮಾಂಸ ಮಾಡಿ ಸಂರಕ್ಷಿಸಿಡುತ್ತಿದ್ದರು. ಚಳಿಗಾಲದಲ್ಲಿ ಮಂಜು ಬೀಳುವ ಕಾರಣ ಹುಲ್ಲುಗಾವಲುಗಳಲ್ಲಿ ಹುಲ್ಲು ಬೆಳೆಯುವುದಿಲ್ಲ. ಇದು ಆಹಾರದ ಕೊರತೆಗೆ ಕಾರಣವಾಗುತ್ತಿತ್ತು. ಮಾನವರೂ ಆಹಾರ ಕ್ಷಾಮವನ್ನು ಎದುರಿಸುತ್ತಿದ್ದರು. ಜಾನುವಾರುಗಳನ್ನು ಕೊಂದು ಮಾಂಸಮಾಡಿ ಸಂರಕ್ಷಿಸುವ ಮೂಲಕ ಇದಕ್ಕೆ ಪರಿಹಾರವನ್ನು ಕಂಡುಕೊಂಡರು. ಆ ಕಾಲದಲ್ಲಿ ಇಂದಿನಂತೆ ವಿದ್ಯುತ್ ಅಥವಾ ಶೀತಲೀಕರಣ ವ್ಯವಸ್ಥೆಗಳು ಇರಲಿಲ್ಲ. ಮಾಂಸವು ಹಾಳಾಗದಂತೆ ದೀರ್ಘಕಾಲದ ವರೆಗೆ ಸಂರಕ್ಷಿಸಲು ಹಾಗೂ ಅದನ್ನು ರುಚಿಕರವನ್ನಾಗಿ ಮಾಡಲು ಅವರು ನನ್ನನ್ನೇ ಉಪಯೋಗಿಸುತ್ತಿದ್ದರು. ಒಟ್ಟಿನಲ್ಲಿ ನಾನು ಅವರಿಗೆ ಆವಶ್ಯಕ ಘಟಕವಾಗಿದ್ದೆ. ನಾನು ಮಾತ್ರವಲ್ಲ, ನಮ್ಮ ಊರಿನ ಏಲಕ್ಕಿ, ದಾಲ್ಚೀನಿ, ಶುಂಠಿ ಇತ್ಯಾದಿಗಳೂ ಅವರಿಗೆ ಪ್ರಿಯವಾದವುಗಳಾಗಿದ್ದುವು. ಹಿಂದಿನ ಕಾಲದಿಂದಲೇ ವ್ಯಾಪಾರಿಗಳು ನಮ್ಮನ್ನು ಹುಡುಕಿಕೊಂಡು ಬರುತ್ತಿದ್ದರು.

ಕಾಳುಮೆಣಸು ಹೇಳುವ ಕಥೆಯನ್ನು ಕೇಳಿದಿರಲ್ಲವೆ? ಇದರಿಂದ ನೀವು ಏನನ್ನು ತಿಳಿದುಕೊಂಡಿರಿ?

- ನಮ್ಮ ನಾಡಿನ ಸಂಬಾರ ಜೀನಸುಗಳು ವಿದೇಶಿಯರಿಗೆ ಆವಶ್ಯಕವಾಗಿದ್ದುವು.
- ಇಂತಹ ಸಂಪನ್ಮೂಲಗಳನ್ನು ಸಂಗ್ರಹಿಸಲು ಪುರಾತನ ಕಾಲದಿಂದಲೇ ವ್ಯಾಪಾರಿಗಳು ಇಲ್ಲಿಗೆ ಬರುತ್ತಿದ್ದರು.

ತುರುಕರು ಕೋನ್‌ಸ್ಟಂಟಿನೋಪಲನ್ನು ವಶಪಡಿಸಿದುದು ಏಷ್ಯಾ ಹಾಗೂ ಯುರೋಪುಗಳೊಳಗಿನ ವ್ಯಾಪಾರಕ್ಕೆ ಅಡ್ಡಿಯನ್ನುಂಟುಮಾಡಿತು. ಈ ಹಿನ್ನಲೆಯಲ್ಲಿ ಭಾರತಕ್ಕೆ ಸಾಗರದ ಮೂಲಕ ವಾಣಿಜ್ಯ ಮಾರ್ಗವನ್ನು ಕಂಡುಹಿಡಿಯುವ ಪ್ರಯತ್ನವು ಆರಂಭವಾಯಿತು. ಈ ವಿಷಯವನ್ನು ಹಿಂದಿನ ಅಧ್ಯಾಯದಲ್ಲಿ ನಾವು ಕಲಿತಿದ್ದೇವಲ್ಲವೆ. ಸಾಗರದ ಮೂಲಕ ವಾಣಿಜ್ಯ ಮಾರ್ಗವೊಂದನ್ನು ಕಂಡುಹಿಡಿದಾಗ ಪೋರ್ಚುಗೀಸರು, ಡಚ್ಚರು, ಇಂಗ್ಲಿಷರು, ಫ್ರೆಂಚರು ವ್ಯಾಪಾರಕ್ಕಾಗಿ ಭಾರತಕ್ಕೆ ಬಂದರು.

ವಾಸ್ಕೋಡಗಾಮನ ಪ್ರಯಾಣಕ್ಕೆ ಖರ್ಚಾದ ಹಣದ 60 ಮಡಿಯಷ್ಟು ಲಾಭವು ಇಲ್ಲಿಂದ ತೆಗೆದುಕೊಂಡು ಹೋದ ಸಂಪತ್ತನ್ನು ಮಾರಾಟ ಮಾಡುವುದರ ಮೂಲಕ ಲಭಿಸಿತು.

ಪೋರ್ಚುಗಲ್‌ನಿಂದ ಕಲ್ಲಿಕೋಟೆಗೆ

1498ರ ಮೇ ತಿಂಗಳಿನ ಒಂದು ಮುಂಜಾನೆ. ಕಲ್ಲಿಕೋಟೆಯ ಸಮೀಪದ ಕಾಪ್ಪಾಡ್ ತೀರದಲ್ಲಿ ಮೂರು ಹಾಯಿ ಹಡಗುಗಳು ಲಂಗರು ಹಾಕಿದುವು. ವಿಭಿನ್ನವಾದ ವೇಷ ಹಾಗೂ ಭಾಷೆಯ ಕೆಲವರು ಹಡಗಿನಲ್ಲಿದ್ದರು. ಇವರು ವ್ಯಾಪಾರಕ್ಕಾಗಿ ಪೋರ್ಚುಗಲ್ಲಿನಿಂದ ಬಂದ ವಾಸ್ಕೋಡಗಾಮ ಮತ್ತು ಸಂಗಡಿಗರಾಗಿದ್ದರು.

ಆಗ ಕಲ್ಲಿಕೋಟೆಯನ್ನು ಆಳುತ್ತಿದ್ದ ಸಾಮೂದಿರಿ ರಾಜನು ವಾಸ್ಕೋಡಗಾಮನಿಗೆ ವ್ಯಾಪಾರ ಸೌಕರ್ಯಗಳನ್ನು ನೀಡಲಿಲ್ಲ. ಆದುದರಿಂದ ಅವನು ಕಣ್ಣೂರಿಗೆ ಬಂದನು. ಅಲ್ಲಿಂದ ಅಗತ್ಯವಾದ ಸಂಪತ್ತನ್ನು ಸಂಗ್ರಹಿಸಿ ಪೋರ್ಚುಗಲ್ಲಿಗೆ ಹಿಂದಿರುಗಿದನು.

ವಾಸ್ಕೋಡಗಾಮನ ನಂತರ ಅಲ್ಮೇಡ, ಅಲ್ಬುಕರ್ಕ್ ಮೊದಲಾದ ಪೋರ್ಚುಗೀಸರು ವ್ಯಾಪಾರಕ್ಕಾಗಿ ಇಲ್ಲಿಗೆ ಬಂದರು. ಗೋವಾ, ದಾಮನ್, ದಿಯು ಎಂಬಿವುಗಳು ಅವರ ಪ್ರಧಾನ ವ್ಯಾಪಾರ ಕೇಂದ್ರಗಳಾಗಿದ್ದುವು. ತ್ರಿಶ್ಶೂರು ಜಿಲ್ಲೆಯ ಕೋಟ್ಟಪ್ಪುರ ಕೋಟೆ, ಕಣ್ಣೂರಿನ ಸೈಂಟ್ ಏಂಜಲೋ ಕೋಟೆಗಳನ್ನು ಪೋರ್ಚುಗೀಸರು ಕಟ್ಟಿಸಿದರು. ಇವರನ್ನು 'ಪರಂಗಿಗಳು' ಎಂದು ಕರೆಯುತ್ತಿದ್ದರು. ನಮ್ಮ ಊರಿನಲ್ಲಿ ಹೇರಳವಾಗಿ ಕಂಡುಬರುವ ಅನನಾಸು, ಪೇರಳೆ, ಪಪ್ಪಾಯಿ, ಒಣಮೆಣಸು, ಗೇರುಬೀಜ, ಹೊಗೆಸೊಪ್ಪು ಮೊದಲಾದ ಕೃಷಿಬೆಳೆಗಳನ್ನು ಪೋರ್ಚುಗೀಸರು ಇಲ್ಲಿಗೆ ತಂದರು. ಪೋರ್ಚುಗೀಸರ ಸಂಬಂಧದ ಪರಿಣಾಮವಾಗಿ ಮುದ್ರಣ ಯಂತ್ರದ ಪ್ರಚಾರ ಹಾಗೂ ಚವಿಟ್ಟು ನಾಟಕವೆಂಬ ಕಲಾರೂಪದ ವಿಕಾಸವಾಯಿತು.

ಚವಿಟ್ಟು ನಾಟಕ

ಭಾರತದಲ್ಲಿ ಹೆಚ್ಚು ವ್ಯಾಪಾರಕೇಂದ್ರಗಳನ್ನು ಸ್ಥಾಪಿಸಲು ಪೋರ್ಚುಗೀಸರಿಗೆ ಸಾಧ್ಯವಾಗಲಿಲ್ಲ. ಅದಕ್ಕಿರುವ ಕಾರಣಗಳೇನೆಂದು ನೋಡೋಣ.

- ಯುರೋಪಿನ ಇತರ ಶಕ್ತಿಗಳೊಂದಿಗೆ ಸ್ಪರ್ಧಿಸಲಿರುವ ಆರ್ಥಿಕ ಹಾಗೂ ಸೈನಿಕ ಸಾಮರ್ಥ್ಯವು ಅವರಲ್ಲಿ ಇರಲಿಲ್ಲ.
- ಪ್ರಾದೇಶಿಕ ಪ್ರತಿಭಟನೆಗಳನ್ನು ಎದುರಿಸಬೇಕಾಯಿತು.

ಸೈಂಟ್ ಏಂಜಲೋ ಕೋಟೆ

ಮಲಬಾರು ತೀರವನ್ನು ಕೇಂದ್ರೀಕರಿಸಿ ಪೋರ್ಚುಗೀಸರಿಗೆದುರಾಗಿ ನಡೆದ ಪ್ರತಿಭಟನೆಗಳಿಗೆ ಕುಞ್ಞಾಲಿ ಮರಕ್ಕಾರರು ನೇತೃತ್ವವನ್ನು ನೀಡಿದ್ದರು. ಕುಞ್ಞಾಲಿ ಮರಕ್ಕಾರರು ಸಾಮೂದಿರಿಯ ನಾವಿಕ ಸೇನೆಯ ಮುಖ್ಯಸ್ಥರಾಗಿದ್ದರು.

ಪೋರ್ಚುಗೀಸರೊಂದಿಗಿನ ಭಾರತದ ವ್ಯಾಪಾರ ಸಂಬಂಧಗಳು ಯಾವೆಲ್ಲ ವಲಯಗಳಲ್ಲಿ ಪ್ರಭಾವ ಬೀರಿದವು ಎಂಬುದನ್ನು ಕಂಡುಹಿಡಿದು ಕಿರುಟಿಪ್ಪಣಿ ತಯಾರಿಸಿರಿ.

ಡಚ್ಚರು

ಡಚ್ಚರು ವ್ಯಾಪಾರಕ್ಕಾಗಿ ಯುರೋಪಿನಿಂದ ಭಾರತಕ್ಕೆ ತಲುಪಿದರು. ಕೊಚ್ಚಿ, ಕೊಲ್ಲಂ ಎಂಬಿವುಗಳು ಅವರ ಪ್ರಧಾನ ವ್ಯಾಪಾರ ಕೇಂದ್ರಗಳಾಗಿದ್ದುವು.



ಡಚ್ ಗವರ್ನರ್ ಆಗಿದ್ದ ವಾನ್ ರೀಡನು ನಮ್ಮ ಊರಿನ ಔಷಧೀಯ ಸಸ್ಯಗಳ ಕುರಿತು ವಿವರಿಸುವ ಹೋರ್ಟಸ್ ಮಲಬಾರಿಕಸ್ ಎಂಬ ಪುಸ್ತಕವನ್ನು ರಚಿಸಲು ನೇತೃತ್ವವಹಿಸಿದನು. ಮಲಯಾಳಿಯಾದ ಇಟ್ಟಿ ಅಚ್ಯುತನ್ ವೈದ್ಯರ ಸಹಾಯದಿಂದ ಈತನು ಈ ಕೃತಿಯನ್ನು ರಚಿಸಿದನು.

ವ್ಯಾಪಾರಕ್ಕೆ ಸಂಬಂಧಿಸಿದ ವಿವಾದದಿಂದಾಗಿ ಡಚ್ಚರು ತಿರುವಾಂಕೂರಿನ ರಾಜನಾದ ಮಾರ್ತಾಂಡವರ್ಮನೊಡನೆ ಯುದ್ಧ ಮಾಡಿದರು. 1741ರಲ್ಲಿ ಕೊಳಚ್ಚಲಿನಲ್ಲಿ ನಡೆದ ಯುದ್ಧದಲ್ಲಿ ಡಚ್ಚರು ಪರಾಜಿತರಾದರು. ಇದು ಭಾರತದಲ್ಲಿ ಡಚ್ಚರ ಆಳ್ವಿಕೆಯನ್ನು ಕೊನೆಗೊಳಿಸಿತು. ಡಚ್ಚರನ್ನು ಕೇರಳೀಯರು 'ಲಂತಕ್ಕಾರ್' ಎಂದು ಕರೆಯುತ್ತಿದ್ದರು. ಹೋರ್ಟಸ್ ಮಲಬಾರಿಕಸ್‌ನ ಕುರಿತು ತಿಳಿದಿರಲ್ಲವೆ. ನಿಮ್ಮ ಪ್ರದೇಶದಲ್ಲಿರುವ ಔಷಧೀಯ ಸಸ್ಯಗಳ ಕುರಿತಾದ ಊರಿನ ತಿಳುವಳಿಕೆಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸಿರಿ.

ಇಂಗ್ಲಿಷರ ಆಗಮನ

ಭಾರತ, ಚೀನಾ ಮೊದಲಾದ ದೇಶಗಳೊಂದಿಗೆ ವ್ಯಾಪಾರ ನಡೆಸುವುದಕ್ಕಾಗಿ 1600ರಲ್ಲಿ ಲಂಡನಿನಲ್ಲಿ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯನ್ನು ರೂಪಿಸಲಾಯಿತು. ಈ ಕಂಪೆನಿಯು ಭಾರತದ ಗುಜರಾತಿನ ಸೂರತ್‌ನಲ್ಲಿ ಮೊದಲ ವ್ಯಾಪಾರ ಕೇಂದ್ರವನ್ನು ಸ್ಥಾಪಿಸಿತು. ಮದರಾಸು (ಚೆನ್ನೈ), ಕಲ್ಕತ್ತ (ಕೋಲ್ಕತ್ತ), ಬೋಂಬೆ (ಮುಂಬೈ) ಎಂಬೆಡೆಗಳಲ್ಲಿಯೂ ಅವರು ವ್ಯಾಪಾರಕೇಂದ್ರಗಳನ್ನು ಸ್ಥಾಪಿಸಿದರು.

ಫ್ರೆಂಚರ ವ್ಯಾಪಾರ ಸಂಬಂಧಗಳು

ಫ್ರೆಂಚ್ ಈಸ್ಟ್ ಇಂಡಿಯಾ ಕಂಪೆನಿಯನ್ನು 1644ರಲ್ಲಿ ಸ್ಥಾಪಿಸಲಾಯಿತು. ಇದರೊಂದಿಗೆ ವ್ಯಾಪಾರದ ಉದ್ದೇಶದಿಂದ ಫ್ರೆಂಚರು ಭಾರತಕ್ಕೆ ಬಂದರು. ಪೋಂಡಿಚೇರಿ (ಪುದುಚೇರಿ), ಮಾಹೆ, ಕಾರೈಕ್ಕಲ್ ಮೊದಲಾದುವು ಇವರ ಪ್ರಧಾನ ವ್ಯಾಪಾರ ಕೇಂದ್ರಗಳಾಗಿದ್ದುವು. ಪೋಂಡಿಚೇರಿಯು ಅವರ ಕಾರ್ಯನಿರ್ವಹಣೆಯ ಕೇಂದ್ರವಾಗಿತ್ತು.



ಮೇಲೆ ನೀಡಿರುವ ಭಾರತದ ಭೂಪಟವನ್ನು ನಿರೀಕ್ಷಿಸಿ ಯುರೋಪಿನ ವಿವಿಧ ದೇಶಗಳ ವ್ಯಾಪಾರಕೇಂದ್ರಗಳ ಪಟ್ಟಿ ತಯಾರಿಸಿರಿ. ಈ ವ್ಯಾಪಾರಕೇಂದ್ರಗಳಿಗೆ ಸಾಮಾನ್ಯವಾದ ಯಾವುದಾದರೂ ವಿಶೇಷತೆಗಳಿವೆಯೇ? ಈ ಕೇಂದ್ರಗಳು ಈಗ ಭಾರತದ ಯಾವೆಲ್ಲ ರಾಜ್ಯಗಳಲ್ಲಿವೆಯೆಂದು ಕಂಡುಹಿಡಿಯಿರಿ.

ವ್ಯಾಪಾರದ ಆಧಿಪತ್ಯಕ್ಕಿರುವ ಸ್ಪರ್ಧೆ

ಯುರೋಪಿನ ದೇಶಗಳು ಭಾರತದಲ್ಲಿ ವ್ಯಾಪಾರದ ಆಧಿಪತ್ಯವನ್ನು ಗಳಿಸುವುದಕ್ಕಾಗಿ ಪರಸ್ಪರ ಸ್ಪರ್ಧಿಸಿದರು. ಪೋರ್ಚುಗೀಸರು ಹಾಗೂ ಡಚ್ಚರು ಆರಂಭದಲ್ಲೇ ಪರಾಜಿತರಾದರು. ಅನಂತರ ಇಂಗ್ಲಿಷರೂ ಫ್ರೆಂಚರೂ ತಮ್ಮೊಳಗೆ ಸ್ಪರ್ಧಿಸಿದರು. ಅವರು ತಮ್ಮೊಳಗೆ ನಡೆಸಿದ ಸ್ಪರ್ಧೆಯನ್ನು ಕರ್ನಾಟಕ ಯುದ್ಧಗಳೆಂದು ಕರೆಯುತ್ತಾರೆ. ಈ ಯುದ್ಧಗಳಲ್ಲಿ ಫ್ರೆಂಚರು ಪರಾಜಯಗೊಂಡರು.

ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿ ಅಧಿಕಾರಕ್ಕೆ

ಇಂದಿನ ತಮಿಳುನಾಡಿನ ಹೆಚ್ಚಿನ ಭಾಗಗಳನ್ನು ಒಳಗೊಂಡಿದ್ದ ಕರ್ನಾಟಕದ ಪ್ರದೇಶಗಳು ಇಂಗ್ಲಿಷರು ಮತ್ತು ಫ್ರೆಂಚರ ನಡುವೆ ನಡೆದ ಯುದ್ಧಗಳ ಪ್ರಧಾನ ಕೇಂದ್ರಗಳಾಗಿದ್ದುವು. ಆದುದರಿಂದಲೇ ಅವರೊಳಗೆ ನಡೆದ ಯುದ್ಧಗಳನ್ನು ಕರ್ನಾಟಕ ಯುದ್ಧಗಳೆಂದು ಕರೆಯುತ್ತಾರೆ.

ವ್ಯಾಪಾರದ ಆಧಿಪತ್ಯಕ್ಕಾಗಿ ನಡೆದ ಸ್ಪರ್ಧೆಯಲ್ಲಿ ಜಯಗಳಿಸಿದ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯ ಮುಂದಿನ ಗುರಿಯು ಅಧಿಕಾರವನ್ನು ಗಳಿಸುವುದಾಗಿತ್ತು. ಅದು ಬಂಗಾಳದಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂತು. ಸಮೃದ್ಧವಾದ ಕೃಷಿ ಹಾಗೂ ವ್ಯಾಪಾರದ ಸೌಕರ್ಯಗಳು ಬಂಗಾಳದಲ್ಲಿ ಆಡಳಿತ ಪಡೆಯಲು ಕಂಪೆನಿಯನ್ನು ಪ್ರೇರೇಪಿಸಿದವು. 1757ರಲ್ಲಿ ಬಂಗಾಳದ ನವಾಬನಾಗಿದ್ದ ಸಿರಾಜ್–ಉದ್–ದೌಲನನ್ನು ಬ್ರಿಟಿಷರು ಪ್ಲಾಸಿ ಕದನದಲ್ಲಿ ಪರಾಜಯಗೊಳಿಸಿದರು. 1764ರಲ್ಲಿ ನಡೆದ ಬಕ್ಸಾರ್ ಕದನದಲ್ಲಿ ಗೆಲುವನ್ನು ಸಾಧಿಸುವುದರೊಂದಿಗೆ ಬಂಗಾಳವು ಕಂಪೆನಿಯ ವಶವಾಯಿತು.

ಪ್ಲಾಸಿ ಮತ್ತು ಬಕ್ಸಾರ್

ಸಿರಾಜ್–ಉದ್–ದೌಲನ ಸೇನಾಧಿಪತಿಯಾಗಿದ್ದ ಮಿರ್‌ಜಾಫರ ನೊಂದಿಗೆ ಬ್ರಿಟಿಷ್ ಸೇನಾಧಿಪತಿಯಾಗಿದ್ದ ರೋಬರ್ಟ್ ಕ್ಲೈವನು ರಹಸ್ಯ ಒಪ್ಪಂದವೊಂದನ್ನು ಮಾಡಿಕೊಂಡನು. ಇದರಿಂದಾಗಿ ಬ್ರಿಟಿಷರು ಪ್ಲಾಸಿ ಕದನದಲ್ಲಿ ಜಯಗಳಿಸಿದರು. ಆದರೆ ಬಕ್ಸಾರ್ ಕದನವು ಸೈನಿಕ ಬಲದ ವಿಜಯವಾಗಿತ್ತು. ಎರಡನೇ ಷಾ ಆಲಂ (ಮೊಗಲ್ ಚಕ್ರವರ್ತಿ), ಶೂಜಾ–ಉದ್–ದೌಲ (ಔದ್‌ನ ನವಾಬ), ಮಿರ್ ಕಾಸಿಂ (ಬಂಗಾಳದ ಮಾಜಿ ನವಾಬ) ಎಂಬಿವರ ಸಂಯುಕ್ತ ಸೈನ್ಯವನ್ನು ಬ್ರಿಟಿಷರು ಪರಾಜಯಗೊಳಿಸಿದರು.

ಬಂಗಾಳದಲ್ಲಿ ಅಧಿಕಾರವನ್ನು ಗಳಿಸಲು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯನ್ನು ಪ್ರೇರೇಪಿಸಿದ ಘಟಕಗಳು ಯಾವುವು?



ಬ್ರಿಟಿಷರ ಅಧೀನದಲ್ಲಿದ್ದ ಪ್ರದೇಶಗಳು (ಬಕ್ಸಾರ್ ಯುದ್ಧದ ಅನಂತರ)

ವ್ಯಾಪಿಸಿದ ಆಧಿಪತ್ಯ

ಮೈಸೂರು ಬ್ರಿಟಿಷ್ ಆಧಿಪತ್ಯದಲ್ಲಿದ್ದ ಮತ್ತೊಂದು ಪ್ರದೇಶವಾಗಿತ್ತು. ಮೈಸೂರು ದಕ್ಷಿಣ ಭಾರತದ ಪ್ರಧಾನ ದೇಶೀಯ ರಾಜ್ಯವಾಗಿತ್ತು. ಹೈದರಾಲಿ ಮತ್ತು ಟಿಪ್ಪುಸುಲ್ತಾನನ ನೇತೃತ್ವದಲ್ಲಿ ಮೈಸೂರು ಪ್ರಬಲ ಶಕ್ತಿಯಾಯಿತು. ಮೈಸೂರಿನ ಆಧಿಪತ್ಯವು ಮಲಬಾರಿನವರೆಗೆ ವ್ಯಾಪಿಸಿತ್ತು. ಇದು ಮಲಬಾರಿನಲ್ಲಿ ಬ್ರಿಟಿಷರ ವ್ಯಾಪಾರಕ್ಕೆ ಅಡ್ಡಿಯಾಯಿತು. ಫ್ರೆಂಚರೊಂದಿಗೆ ಟಿಪ್ಪುಸುಲ್ತಾನನಿಗಿದ್ದ ಸ್ನೇಹವು ಮೈಸೂರನ್ನು ವಶಪಡಿಸಲು ಬ್ರಿಟಿಷರನ್ನು ಪ್ರೇರೇಪಿಸಿತು. ಬ್ರಿಟಿಷರಿಗೆದುರಾಗಿ ಧೈರ್ಯದಿಂದ ಹೋರಾಡಿದ ಟಿಪ್ಪುಸುಲ್ತಾನನು ನಾಲ್ಕನೇ ಮೈಸೂರು ಯುದ್ಧದಲ್ಲಿ ಮರಣ ಹೊಂದಿದನು. ಮೈಸೂರು ಯುದ್ಧದಿಂದಾಗಿ ಮಲಬಾರು, ಕೊಡಗು ಎಂಬೀ ಪ್ರದೇಶಗಳು ಬ್ರಿಟಿಷ್ ಆಡಳಿತಕ್ಕೆ ಸೇರಿದುವು.

ಟಿಪ್ಪು ಸುಲ್ತಾನ

ಶ್ರೀರಂಗಪಟ್ಟಣ ಒಪ್ಪಂದ

ಮೈಸೂರಿನಲ್ಲಿ ಆಧಿಪತ್ಯ ಸ್ಥಾಪಿಸಲು ಬ್ರಿಟಿಷರು ನಾಲ್ಕು ಯುದ್ಧಗಳನ್ನು ಮಾಡಬೇಕಾಯಿತು. ಮೂರನೇ ಮೈಸೂರು ಯುದ್ಧಾನಂತರ ಟಿಪ್ಪುಸುಲ್ತಾನನೊಂದಿಗೆ ಶ್ರೀರಂಗಪಟ್ಟಣದಲ್ಲಿ ನಡೆದ ಒಪ್ಪಂದದ ಅನುಸಾರ ಮಲಬಾರು ಬ್ರಿಟಿಷರಿಗೆ ಲಭಿಸಿತು.



ಬ್ರಿಟಿಷರ ಅಧೀನದಲ್ಲಿದ್ದ ಪ್ರದೇಶಗಳು (19ನೇ ಶತಮಾನದ ಆರಂಭದಲ್ಲಿ)

ಬ್ರಿಟಿಷರ ಮುಂದಿನ ಗುರಿಯು ಮರಾಠಾ ಪ್ರದೇಶವಾಗಿತ್ತು. ಮರಾಠರು ಬ್ರಿಟಿಷರ ಹತ್ತಿ ವ್ಯಾಪಾರಕ್ಕೆ ಅಡ್ಡಿಯನ್ನುಂಟುಮಾಡಿದರು. ಇದು ಮರಾಠಾ ಪ್ರದೇಶವನ್ನು ವಶಪಡಿಸಿಕೊಳ್ಳಲು ಬ್ರಿಟಿಷರನ್ನು ಪ್ರೇರೇಪಿಸಿತು. ತಡಮಾಡದೆ ಸಿಂಧ್, ಪಂಜಾಬು, ಔದ್ ಎಂಬೀ ರಾಜ್ಯಗಳನ್ನು ಅವರು ವಶಪಡಿಸಿಕೊಂಡರು.

ಸೈನಿಕ ಬಲವನ್ನು ಉಪಯೋಗಿಸಿ ಪ್ರಬಲರಾದ ದೇಶೀಯ ರಾಜ್ಯಗಳನ್ನು ಬ್ರಿಟಿಷರು ಹೇಗೆ ವಶಪಡಿಸಿದರೆಂಬುದನ್ನು ನಾವು ನೋಡಿದೆವು. ವಶಪಡಿಸಿದ ಪ್ರದೇಶಗಳು ಬ್ರಿಟಿಷ್ ಆಡಳಿತದ ಅಧೀನಕ್ಕೊಳಪಟ್ಟವು. ಇತರ ಕೆಲವು ದೇಶೀಯ ರಾಜ್ಯಗಳನ್ನು ಒಪ್ಪಂದಗಳ ಮೂಲಕವೂ ಕಾನೂನುಗಳ ಮೂಲಕವೂ ಅವರು ವಶಪಡಿಸಿಕೊಂಡರು. ವೆಲ್ಲೆಸ್ಲಿ ಪ್ರಭು ಜಾರಿಗೆ ತಂದ 'ಸೈನ್ಯ ಸಹಾಯ ವ್ಯವಸ್ಥೆ', ಡಾಲ್ ಹೌಸಿ ಪ್ರಭು ಜಾರಿಗೊಳಿಸಿದ 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನಿಯಮಗಳು ದೇಶೀಯ ರಾಜ್ಯಗಳನ್ನು ವಶಪಡಿಸಿಕೊಳ್ಳುವಲ್ಲಿ ಪ್ರಧಾನ ಪಾತ್ರ ವಹಿಸಿದುವು.

ಸೈನ್ಯ ಸಹಾಯ ವ್ಯವಸ್ಥೆಗೆ ಹೈದರಾಬಾದು, ತಂಜಾವೂರು, ಇಂದೋರ್ ಮೊದಲಾದ ದೇಶೀಯ ರಾಜ್ಯಗಳು ಸಹಿಹಾಕಿದವು



ಬ್ರಿಟಿಷ್ ಅಧೀನದಲ್ಲಿದ್ದ ಪ್ರದೇಶಗಳು (1857ರಲ್ಲಿ)

ದತ್ತುಮಕ್ಕಳಿಗೆ ಹಕ್ಕಿಲ್ಲವೆಂಬ ನಿಯಮದ ಮೂಲಕ ಸಂಬಾಲ್‌ಪುರ್, ಸತಾರ, ಉದಯಪುರ, ಝಾನ್ಸಿ, ನಾಗಪುರ ಎಂಬೀ ದೇಶೀಯ ರಾಜ್ಯಗಳನ್ನು ಬ್ರಿಟಿಷರು ವಶಪಡಿಸಿಕೊಂಡರು.

ಸೈನ್ಯ ಸಹಾಯ ಪದ್ಧತಿಗೆ ಒಳಪಟ್ಟ ರಾಜ್ಯಗಳಿಗೆ ಕಂಪೆನಿಯು ರಕ್ಷಣೆಯನ್ನು ಖಚಿತಪಡಿಸಿತು. ಆದರೆ ಈ ರಾಜ್ಯಗಳ ನಿಜವಾದ ಆಡಳಿತವನ್ನು ಕಂಪೆನಿಯ ಪ್ರತಿನಿಧಿಗಳೇ ನಡೆಸುತ್ತಿದ್ದರು.

ಉತ್ತರಾಧಿಕಾರಿಗಳಿಲ್ಲದ ದೇಶೀಯ ರಾಜರು ಮಕ್ಕಳನ್ನು ದತ್ತು ತೆಗೆದುಕೊಳ್ಳುವ ಸಂಪ್ರದಾಯವು ಅಸ್ತಿತ್ವದಲ್ಲಿತ್ತು. ಅವರಿಗೆ ರಾಜಾಧಿಕಾರವೂ ಲಭಿಸುತ್ತಿತ್ತು. ಡಾಲ್‌ಹೌಸಿ ಪ್ರಭು ಜಾರಿಗೆ ತಂದ 'ದತ್ತು ಮಕ್ಕಳಿಗೆ ಹಕ್ಕು ಇಲ್ಲ' ಎಂಬ ಕಾನೂನು ರಾಜರ ಈ ಹಕ್ಕನ್ನು ಕೊನೆಗೊಳಿಸಿತು. ಉತ್ತರಾಧಿಕಾರಿಯಿಲ್ಲದೆ ಒಬ್ಬ ರಾಜನು ಮರಣ ಹೊಂದಿದರೆ ಆ ರಾಜ್ಯವನ್ನು ಬ್ರಿಟಿಷರ ಅಧೀನದಲ್ಲಿದ್ದ ಭಾರತದೊಂದಿಗೆ ಸೇರಿಸುವ ವ್ಯವಸ್ಥೆಯು ಈ ನಿಯಮದಲ್ಲಿತ್ತು.

'ದೇಶೀಯ ರಾಜ್ಯಗಳನ್ನು ವಶಪಡಿಸಿಕೊಳ್ಳಲು ಬ್ರಿಟಿಷರು ವಿವಿಧ ತಂತ್ರಗಳನ್ನು ಬಳಸಿಕೊಂಡರು.' ಈ ಹೇಳಿಕೆಯನ್ನು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

1857ರ ಹೊತ್ತಿಗೆ ಭಾರತದ ಹೆಚ್ಚಿನ ಪ್ರದೇಶಗಳು ಬ್ರಿಟಿಷರ ಅಧೀನಕ್ಕೆ ಬಂದುವು. ಬ್ರಿಟಿಷ್ ಅಧೀನದಲ್ಲಿದ್ದ ಪ್ರದೇಶಗಳಲ್ಲಿ ಏಕೀಕೃತ ಆಡಳಿತವನ್ನು ಜಾರಿಗೆ ತಂದರು.



ವ್ಯಾಪಾರಕ್ಕಾಗಿ ರೂಪಿಸಿದ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯು ಭಾರತದ ಆಡಳಿತವನ್ನು ಹೇಗೆ ಸ್ವಾಧೀನಪಡಿಸಿತು ಎಂಬುದಕ್ಕೆ ಸಂಬಂಧಿಸಿ ತರಗತಿಯಲ್ಲೊಂದು ವಿಚಾರಗೋಷ್ಠಿಯನ್ನು ಏರ್ಪಡಿಸಿರಿ.

ಕ್ರೋಡೀಕರಣ

- ಪೋರ್ಚ್ಗಲ್, ನೆದರ್ಲೆಂಡ್ಸ್, ಇಂಗ್ಲೆಂಡ್, ಫ್ರಾನ್ಸ್ ಇತ್ಯಾದಿ ದೇಶಗಳು ವ್ಯಾಪಾರಕ್ಕಾಗಿ ಭಾರತವನ್ನು ತಲುಪಿದ ಯುರೋಪಿನ ದೇಶಗಳಾಗಿದ್ದುವು.
- ಈ ದೇಶಗಳೊಂದಿಗಿನ ಸಂಬಂಧವು ನಮ್ಮ ಸಾಮಾಜಿಕ–ಸಾಂಸ್ಕೃತಿಕ –ಆರ್ಥಿಕ – ರಾಜಕೀಯ ವಲಯಗಳ ಮೇಲೆ ಪ್ರಭಾವ ಬೀರಿತು.
- ವ್ಯಾಪಾರದ ಆಧಿಪತ್ಯಕ್ಕಾಗಿ ಈ ದೇಶಗಳು ನಡೆಸಿದ ಸ್ಪರ್ಧೆಗಳಲ್ಲಿ ಇಂಗ್ಲೆಂಡ್ ಜಯಶಾಲಿಯಾಯಿತು.
- ಯುದ್ಧಗಳ ಮೂಲಕ ಹಾಗೂ ಒಪ್ಪಂದಗಳ ಮೂಲಕ ದೇಶೀಯ ರಾಜ್ಯಗಳನ್ನು ವಶಪಡಿಸಿದ ಬ್ರಿಟಿಷರು ಭಾರತದ ಆಡಳಿತಾಧಿಕಾರಿಗಳಾಗಿ ಬದಲಾದರು.

ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಭಾರತಕ್ಕೆ ಸಾಗರದ ಮೂಲಕ ವಾಣಿಜ್ಯ ಮಾರ್ಗವನ್ನು ಕಂಡುಹಿಡಿದುದರ ಫಲವಾಗಿ ಪೋರ್ಚುಗಲ್, ನೆದರ್ಲೆಂಡ್ಸ್, ಇಂಗ್ಲೆಂಡ್, ಫ್ರಾನ್ಸ್ ಎಂಬೀ ದೇಶಗಳಿಂದ ವ್ಯಾಪಾರಿಗಳು ಇಲ್ಲಿಗೆ ಬಂದರೆಂಬುದನ್ನು ತಿಳಿಯವುದು.
- ವ್ಯಾಪಾರದ ಏಕಸ್ವಾಮ್ಯವನ್ನು ಗಳಿಸಿದ ಇಂಗ್ಲಿಷರು ಇಲ್ಲಿ ರಾಜಕೀಯ ಅಧಿಕಾರವನ್ನು ಹೇಗೆ ಸ್ಥಾಪಿಸಿದರೆಂಬುದನ್ನು ಅರ್ಥೈಸುವುದು.
- ಸೈನ್ಯ ಬಲ ಹಾಗೂ ಒಪ್ಪಂದಗಳ ಮೂಲಕ ಇಂಗ್ಲಿಷರು ದೇಶೀಯ ರಾಜ್ಯಗಳ ಮೇಲೆ ಆಧಿಪತ್ಯವನ್ನು ದೃಢಪಡಿಸಿದರೆಂಬುದನ್ನು ತಿಳಿಯುವುದು.

ಮೌಲ್ಯ ನಿರ್ಣಯ ಮಾಡುವ

1. ತುರುಕರು ಕೋನ್‌ಸ್ಟಂಟಿನೋಪಲನ್ನು ವಶಪಡಿಸಿದುದು ಭಾರತಕ್ಕೆ ಸಾಗರದ ಮೂಲಕ ವಾಣಿಜ್ಯ ಮಾರ್ಗವನ್ನು ಕಂಡುಹಿಡಿಯಲು ಯುರೋಪಿಯನ್ನರನ್ನು ಪ್ರೇರೇಪಿಸಿತು. ಯಾಕೆ?
2. ಭಾರತದಲ್ಲಿ ಹೆಚ್ಚು ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಲು ಪೋರ್ಚುಗೀಸರಿಗೆ ಸಾಧ್ಯವಾಗಲಿಲ್ಲ. ಕಾರಣವನ್ನು ಸ್ಪಷ್ಟಪಡಿಸಿರಿ.
3. ಪೋರ್ಚುಗೀಸರೊಂದಿಗಿನ ಸಂಬಂಧವು ನಮ್ಮ ಆರ್ಥಿಕ, ಸಾಂಸ್ಕೃತಿಕ ವಲಯಗಳಲ್ಲಿ ಬಹುದೊಡ್ಡ ಬದಲಾವಣೆಗಳನ್ನುಂಟುಮಾಡಿತು ಎಂಬ ಹೇಳಿಕೆಯನ್ನು ವಿಶ್ಲೇಷಿಸಿರಿ.
4. ಕುಞ್ಞಾಲಿ ಮರಕ್ಕಾರರು ಎಂದರೆ ಯಾರು? ಭಾರತದ ಇತಿಹಾಸದಲ್ಲಿ ಇವರ ಪ್ರಾಧಾನ್ಯವನ್ನು ವಿಶ್ಲೇಷಿಸಿರಿ.
5. ಕರ್ನಾಟಕ ಯುದ್ಧದಲ್ಲಿ ಫ್ರೆಂಚರ ಪರಾಜಯದ ಕಾರಣಗಳನ್ನು ಪರಿಶೀಲಿಸಿರಿ.

6. ಕಾಲಗಣನೆಗೆ ಅನುಗುಣವಾಗಿ ಕ್ರಮೀಕರಿಸಿರಿ.

- ಪ್ಲಾಸಿ ಕದನ
- ಕೊಳಚ್ಚಲ್ ಯುದ್ಧ
- ಡಚ್ಚರು ವ್ಯಾಪಾರಕ್ಕಾಗಿ ಭಾರತಕ್ಕೆ ತಲುಪಿದರು
- ವಾಸ್ಕೋಡಗಾಮನು ಕಲ್ಲಿಕೋಟೆಗೆ ತಲುಪಿದನು
- ಫ್ರೆಂಚರು ವ್ಯಾಪಾರಕ್ಕಾಗಿ ಭಾರತಕ್ಕೆ ತಲುಪಿದರು

7. 'ಎ' ವಿಭಾಗದಲ್ಲಿರುವ ಎರಡು ಘಟಕಗಳೊಳಗಿನ ಪರಸ್ಪರ ಸಂಬಂಧವನ್ನು ಕಂಡುಹಿಡಿದು ಅದೇ ರೀತಿಯಲ್ಲಿ 'ಬಿ' ವಿಭಾಗದಲ್ಲಿ ಬಿಟ್ಟುಹೋದ ಭಾಗವನ್ನು ಭರ್ತಿಮಾಡಿರಿ.

ಎ.	ಗೋವಾ	⟶	ಪೋರ್ಚುಗೀಸ್
ಬಿ.	ಪೋಂಡಿಚೇರಿ	⟶	.....
ಎ.	ಸೈನ್ಯ ಸಹಾಯ ಪದ್ಧತಿ	⟶	ವೆಲ್ಲೆಸ್ಲಿ ಪ್ರಭು
ಬಿ.	ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನಿಯಮ	⟶	.....

ಮುಂದುವರಿದ ಚಟುವಟಿಕೆಗಳು

1. ಭಾರತದಲ್ಲಿ ವ್ಯಾಪಾರ ಮಾಡುವುದಕ್ಕಾಗಿ ತಲುಪಿದ ಯುರೋಪಿನ ದೇಶಗಳನ್ನು ಜಾಗತಿಕ ಭೂಪಟದಲ್ಲಿ ಕಂಡುಹಿಡಿದು ಬಣ್ಣವನ್ನು ಹಚ್ಚಿರಿ.
2. ಯುರೋಪಿಯನ್ನರು ಭಾರತದಲ್ಲಿ ಕಟ್ಟಿಸಿದ ಕೋಟೆಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿರಿ. ಯಾವುದಾದರೂ ಒಂದು ಕೋಟೆಯನ್ನು ಸಂದರ್ಶಿಸಿ ವಿವರಣೆಯನ್ನು ತಯಾರಿಸಿರಿ.
3. ಪೋರ್ಚುಗೀಸರ ಸಂಬಂಧದ ಪರಿಣಾಮವಾಗಿ ಕನ್ನಡ ಭಾಷೆಯಲ್ಲಿ ರೂಪುಗೊಂಡ ಪದಗಳನ್ನು ಕಂಡುಹಿಡಿದು ಚಾರ್ಟ್ ತಯಾರಿಸಿರಿ.

3 ಪ್ರತಿಭಟನೆಗಳು ಮತ್ತು ಪ್ರಥಮ ಸ್ವಾತಂತ್ರ್ಯ ಹೋರಾಟ

ನಾಗೋಡರ ಹೆಬ್ಬೆರಳು

ನಾಗೋಡರು ಬಂಗಾಳದ ರೇಶ್ಮೆನೂಲನ್ನು ಕೃಷಿಮಾಡುವವರಾಗಿದ್ದರು. ಅವರು ತಯಾರಿಸುವ ರೇಶ್ಮೆ ನೂಲನ್ನು ಹುಡುಕಿಕೊಂಡು ಬೇರೆ ಬೇರೆ ದೇಶಗಳಿಂದ ನೇಯ್ಗೆಯವರು ಬರುತ್ತಿದ್ದರು. ಬಂಗಾಳದಲ್ಲಿ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯು ಆಡಳಿತವನ್ನು ಆರಂಭಿಸಿದಾಗ ಕಂಪೆನಿಯ ಅಧಿಕಾರಿಗಳು ನಾಗೋಡರನ್ನು ಶೋಷಣೆ ಮಾಡಲು ಆರಂಭಿಸಿದರು. ಕಡಿಮೆ ಸಂಬಳಕ್ಕೆ ಅವರಿಂದ ನೇಯ್ಗೆ ಕೆಲಸವನ್ನು ಮಾಡಿಸಿದರು. ಜೀವನ ಸಾಗಿಸಲು ಇನ್ನಿತರ ಮಾರ್ಗಗಳನ್ನು ಕಂಡುಹಿಡಿಯಲು ಸಾಧ್ಯವಿಲ್ಲದ ರೀತಿಯಲ್ಲಿ ಅವರನ್ನು ಕಂಪೆನಿಯ ಕಾರ್ಮಿಕರಾಗಿ ಬದಲಾಯಿಸಿದರು. ಗುಲಾಮರಿಗೆ ಸಮಾನವಾದ ಜೀವನ! ಕಂಪೆನಿಯ ಅಧಿಕಾರಿಗಳ ತೀರ್ಮಾನಗಳನ್ನು ಅಂಗೀಕರಿಸದವರನ್ನು ಕ್ರೂರವಾಗಿ ದಮನಿಸಿದರು. ಸ್ಥಿರಚರ ಆಸ್ತಿಗಳನ್ನು ವಶಪಡಿಸಿದರು. ಜೀವನ ಸಾಗಿಸಲು ಬೇರೆ ದಾರಿ ಕಾಣದೆ ನಾಗೋಡರು ಕುಲ ಕಸುಬನ್ನು ತ್ಯಜಿಸಲು ತೀರ್ಮಾನಿಸಿದರು. ಆದಕ್ಕಾಗಿ ಅವರು ಕಂಡುಕೊಂಡ ದಾರಿಯೇ ತಮ್ಮ ಹೆಬ್ಬೆರಳನ್ನು ತುಂಡರಿಸುವುದು. ಹಾಗೆ ನಾಗೋಡರು ತಮ್ಮ ಹೆಬ್ಬೆರಳುಗಳನ್ನು ತುಂಡರಿಸಿಕೊಂಡರು. ನಾಗೋಡರ ಈ ತ್ಯಾಗದ

ಕುರಿತು ಓದಿದಿರಲ್ಲವೇ? ಇದು ಕೇವಲ ಒಂದು ಘಟನೆ ಮಾತ್ರವಾಗಿರಲಿಲ್ಲ. ಪರಂಪರಾಗತವಾದ ಕೆಲಸಗಳಲ್ಲಿ ಮಗ್ನರಾದ ಎಲ್ಲ ವರ್ಗಗಳ ಜನರನ್ನೂ ಕಂಪೆನಿ ಆಡಳಿತವು ಬಾಧಿಸಿತ್ತು. ಇದಕ್ಕೆದುರಾಗಿ ವಿಭಿನ್ನ ರೂಪದಲ್ಲಿ ಪ್ರಬಲವಾದ ಪ್ರತಿಭಟನೆಗಳು ಆರಂಭವಾದುವು.

ಕಂಪೆನಿ ಆಡಳಿತದ ಶೋಷಣೆಗೆ ಬಲಿಯಾದ ಜನವರ್ಗಗಳು ಯಾವುವು?

- ಕೃಷಿಕರು
- ನೇಯ್ಗಿಗಾರರು
- ಕೈ ಕಸುಬುದಾರರು
- ಮೂಲ ನಿವಾಸಿಗಳು

ಕೃಷಿಕರಿಗೆದುರಾಗಿ

ಬಂಗಾಳವನ್ನು ವಶಪಡಿಸಿಕೊಂಡ ಬಳಿಕ ಕಂಪೆನಿಯ ಗಮನವು ಸಂಪದ್ಭರಿತವಾದ ಕೃಷಿ ರಂಗದೆಡೆಗೆ ಹರಿಯಿತು. ಈ ವಲಯದಿಂದ ಸಾಧ್ಯವಿರುವಷ್ಟು ಸಂಪತ್ತನ್ನು ಸೂರೆ ಮಾಡುವುದು ಅವರ ಗುರಿಯಾಗಿತ್ತು.
ಅದಕ್ಕಾಗಿ ಅವರು ಏನೇನು ಮಾಡಿದರು?

- ಕೃಷಿಕರ ಮೇಲೆ ಅಮಿತವಾದ ತೆರಿಗೆಯನ್ನು ಹೇರಿದರು.
- ಬರಗಾಲ ಮತ್ತು ನೆರೆಹಾವಳಿಯಿಂದಾಗಿ ಕೃಷಿ ನಾಶವಾದರೂ ತೆರಿಗೆಯಲ್ಲಿ ಯಾವುದೇ ರಿಯಾಯಿತಿಯನ್ನು ನೀಡಲಿಲ್ಲ.
- ತೆರಿಗೆ ಸಂಗ್ರಹಿಸಲು ಮಧ್ಯವರ್ತಿಗಳಿಗೆ (ಜಮೀನ್ದಾರರಿಗೆ) ಜವಾಬ್ದಾರಿಯನ್ನು ನೀಡಿದರು.
- ತೆರಿಗೆಯನ್ನು ಹಣದ ರೂಪದಲ್ಲೇ ನೀಡಬೇಕೆಂಬ ವ್ಯವಸ್ಥೆಯನ್ನು ಜಾರಿಗೆ ತಂದರು.
- ಕೃಷಿಕರು ಹಣಕ್ಕಾಗಿ ಸಾಲ ಕೊಡುವವರನ್ನು (ಸಾಹುಕಾರ) ಆಶ್ರಯಿಸಬೇಕಾಯಿತು.

ಹತ್ತಿ, ಸೆಣಬು, ನೀಲಿ ಎಂಬೀ ಕೃಷಿಗಳನ್ನು ಮಾಡಲು ಬಂಗಾಳದ ಮಣ್ಣು ಯೋಗ್ಯವಾದುದೆಂದು ಕಂಪೆನಿಯು ಕಂಡುಕೊಂಡಿತು. ಹತ್ತಿ, ಸೆಣಬು ಮತ್ತು ನೀಲಿಗಳು ಇಂಗ್ಲೆಂಡಿನ ಕೈಗಾರಿಕಾ ಕೇಂದ್ರಗಳಿಗೆ ಅಗತ್ಯವಾದ ಪ್ರಧಾನ ಕಚ್ಚಾ ವಸ್ತುಗಳಾಗಿದ್ದುವು. ಆದ ಕಾರಣ ಅವರು ಹತ್ತಿ ಮತ್ತು ಸೆಣಬಿನ ಕೃಷಿಯನ್ನು ಹೆಚ್ಚು ವ್ಯಾಪಕಗೊಳಿಸಲು ತೀರ್ಮಾನಿಸಿದರು. ಅದಕ್ಕಾಗಿ ಕೃಷಿಕರನ್ನು ನಿರ್ಬಂಧಿಸಿದರು. ಪರಂಪರಾಗತವಾಗಿ ಆಹಾರ ಧಾನ್ಯಗಳನ್ನು ಮಾತ್ರ ಉತ್ಪಾದಿಸುತ್ತಿದ್ದ ಕೃಷಿಭೂಮಿಯು ಹತ್ತಿ, ಸೆಣಬು ಮತ್ತು ನೀಲಿ ಬೆಳೆಗಳ ತೋಟಗಳಾಗಿ ಬದಲಾಯಿತು. ಕೃಷಿಕರಿಗೆ ಕೃಷಿಭೂಮಿ ನಷ್ಟವಾಯಿತು. ಅವರು ಕಾರ್ಮಿಕರಾಗಿ ಬದಲಾದರು.

ಬಂಗಾಳದ ಆಡಳಿತವು ಕಂಪೆನಿಯ ಹತೋಟಿಗೆ ಬಂದ ಮೇಲೆ ವಿಭಿನ್ನ ವರ್ಗಗಳಿಗೆ ಸೇರಿದ ಜನರು ಅನುಭವಿಸಿದ ಕಷ್ಟಗಳಿಗೆ ಸಂಬಂಧಿಸಿದಂತೆ ತರಗತಿಯಲ್ಲೊಂದು ವಿಚಾರಗೋಷ್ಠಿಯನ್ನು ಆಯೋಜಿಸಿರಿ.

ಹತ್ತಿ ಕೃಷಿ

ಸೆಣಬು ಕೃಷಿ

ಮೂಲನಿವಾಸಿಗಳಿಗೆದುರಾಗಿ

ಕಂಪೆನಿಯ ಹಸ್ತಕ್ಷೇಪವು ಕೇವಲ ಕೃಷಿವಲಯಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಭಾರತದ ಅರಣ್ಯ ಸಂಪತ್ತನ್ನು ಕೊಳ್ಳೆ ಹೊಡೆಯವ ಉದ್ದೇಶದೊಂದಿಗೆ ಅವರು ಅರಣ್ಯ ನಿಯಮಗಳನ್ನು ಜಾರಿಗೊಳಿಸಿದರು. ಈ ನಿಯಮಗಳ ಮೂಲಕ ಅರಣ್ಯಗಳು ಸಂಪೂರ್ಣವಾಗಿ ಅವರ ಹತೋಟಿಗೆ ಒಳಪಟ್ಟಿತು. ಪರಂಪರಾಗತವಾಗಿ ಅರಣ್ಯಗಳನ್ನಾಶ್ರಯಿಸಿ ಜೀವಿಸುತ್ತಿದ್ದ ಮೂಲ ನಿವಾಸಿಗಳನ್ನು ಇದ ಪ್ರತಿಕೂಲವಾಗಿ ಬಾಧಿಸಿತು. ಅದರೊಂದಿಗೆ ಮೂಲ ನಿವಾಸಿಗಳ ಅರಣ್ಯ ಸಂಪನ್ಮೂಲಗಳ ಸಂಗ್ರಹ ಹಾಗೂ ಪರಂಪರಾಗತ ಕೃಷಿ ವಿಧಾನಗಳಿಗೆ ತೊಂದರೆಯುಂಟಾಯಿತು.

ರೈಲ್ವೇಯ ಆರಂಭ

1853 ಎಪ್ರಿಲ್ 16 ರಂದು ಭಾರತದಲ್ಲಿ ರೈಲ್ವೇಯುಗವು ಆರಂಭಗೊಂಡಿತು. ಅಂದು ಸಂಜೆ 3.35ಕ್ಕೆ ಮುಂಬಯಿಯಿಂದ ಥಾನಾಕ್ಕೆ ಪ್ರಪ್ರಥಮ ರೈಲುಗಾಡಿ ಸಂಚಾರ ವನ್ನಾರಂಭಿಸಿತು. 14 ಬೋಗಿಗಳುಳ್ಳ ಈ ಗಾಡಿಯಲ್ಲಿ 400 ಮಂದಿ ಪ್ರಯಾಣಿಕರಿದ್ದರು. ಕೇರಳದ ಪ್ರಥಮ ರೈಲು ಗಾಡಿಯು 1861 ಮಾರ್ಚ್ ತಿಂಗಳಲ್ಲಿ ತಿರೂರಿನಿಂದ ಬೇಪೂರಿಗೆ ಸಂಚಾರವನ್ನಾರಂಭಿಸಿತು.

ಮೂಲನಿವಾಸಿಗಳ ವಾಸಸ್ಥಳವು ಖನಿಜ ನಿಕ್ಷೇಪಗಳಿಂದ ಸಂಪದ್ಭರಿತವಾಗಿತ್ತು. ಇವುಗಳನ್ನು ಶೋಷಣೆ ಮಾಡಲು ರಸ್ತೆ ಮತ್ತು ರೈಲ್ವೇ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಯಿತು. ಇದು ಮೂಲನಿವಾಸಿಗಳ ಜೀವನವನ್ನು ಸಂಕಷ್ಟಕ್ಕೀಡುಮಾಡಿತು.

ಕಂಪೆನಿಯು ರೂಪಿಸಿದ ಅರಣ್ಯ ನಿಯಮಗಳು ಮೂಲನಿವಾಸಿಗಳ ಜೀವನವನ್ನು ಯಾವೆಲ್ಲ ರೀತಿಯಲ್ಲಿ ಬಾಧಿಸಿದುವೆಂದು ಚರ್ಚಿಸಿರಿ.

ನೇಯ್ಗೆಗಾರರಿಗೆದುರಾಗಿ

ಕಂಪೆನಿಯ ಆಡಳಿತದ ಕಾಲದಲ್ಲಿ ಭಾರತದಲ್ಲಿ ಹತ್ತಿ ಕೃಷಿಯು ವ್ಯಾಪಕವಾಯಿತೆಂದು ತಿಳಿದುಕೊಂಡೆವಲ್ಲವೇ. ಆದರೆ ಈ ಕಾಲದಲ್ಲಿ ಭಾರತದ ಕೈಮಗ್ಗ ಕ್ಷೇತ್ರವು ಪತನದತ್ತ ಸಾಗಿತು. ಕೈಮಗ್ಗ ಕೈಗಾರಿಕೆಯು ನಾಶವಾಗಲು ಕಾರಣಗಳೇನಾಗಿರಬಹುದು? ನಾವು ಪರಿಶೀಲಿಸುವ.

- ಕಚ್ಚಾವಸ್ತುವಾದ ಹತ್ತಿಯನ್ನು ಬ್ರಿಟನಿಗೆ ರಫ್ತು ಮಾಡಿದರು.
- ಬ್ರಿಟನಿನ ಯಂತ್ರಗಳಲ್ಲಿ ಉತ್ಪಾದಿಸಿದ ಕಡಿಮೆ ಬೆಲೆಯ ವಸ್ತ್ರಗಳನ್ನು ಬೃಹತ್ ಪ್ರಮಾಣದಲ್ಲಿ ಆಮದು ಮಾಡಿದರು.
- ಭಾರತದಲ್ಲಿ ತಯಾರಿಸಿದ ಬಟ್ಟೆಬರೆಗಳಿಗೆ ಹೆಚ್ಚಿನ ದರದಲ್ಲಿ ತೆರಿಗೆಯನ್ನು ವಿಧಿಸಿದರು.

ಈ ಕಾರಣಗಳಿಂದ ಕೈಮಗ್ಗ ರಂಗದಲ್ಲಿ ಅನೇಕ ಕಾರ್ಮಿಕರಿಗೆ ಕೆಲಸ ನಷ್ಟವಾಯಿತು.

ನಾಗೋಡರ ಪ್ರತಿಭಟನೆಯ ಹಿನ್ನೆಲೆಯಲ್ಲಿ ಅಂದಿನ ನೇಯ್ಗೆಯವರ ಸಾಮಾನ್ಯ ಸಮಸ್ಯೆಗಳನ್ನು ಬಿಂಬಿಸುವ ಸ್ಕಿಟ್ ತಯಾರಿಸಿರಿ.

ದಂಗೆಗಳ ಕಡೆಗೆ

ಕಂಪೆನಿಯ ಆಡಳಿತದ ಪರಿಣಾಮವಾಗಿ ಜೀವನ ಮಾರ್ಗಗಳು ನಷ್ಟಗೊಂಡ ಜನವರ್ಗಗಳು ಯಾವುವೆಂದು ನೀವು ತಿಳಿದಿರಲ್ಲವೇ. ಈ ಜನರು ಕಂಪೆನಿಗೆದುರಾಗಿ ಮತ್ತು ಅವರ ಮಧ್ಯವರ್ತಿಗಳಾಗಿದ್ದ ಜಮೀನ್ದಾರರಿಗೆದುರಾಗಿ ದಂಗೆಗಳನ್ನು ಆರಂಭಿಸಿದರು. ಸಂಘಟಿತ ಹೋರಾಟಗಳಲ್ಲದಿದ್ದರೂ ಭಾರತದ ನಾನಾ ಭಾಗಗಳಲ್ಲಿ ಇಂತಹ ಪ್ರತಿಭಟನೆಗಳು ನಡೆದಿದ್ದುವು.

ಕಂಪೆನಿ ಆಡಳಿತವು ಸ್ಥಿರಗೊಳ್ಳುವಾಗ ಕೃಷಿಕರ ದಂಗೆಗಳು ಆರಂಭವಾದುವು. 18ನೇ ಶತಮಾನದ ಕೊನೆಯಲ್ಲಿ ಬಂಗಾಳದಲ್ಲಿ ಬೇರೆ ಬೇರೆಯಾಗಿ ನಡೆದ ಸನ್ಯಾಸಿಗಳ ಮತ್ತು ಫಕೀರರ ದಂಗೆಗಳು ಇದಕ್ಕೆ ಸಾಕ್ಷಿಯಾಗಿವೆ.

19ನೇ ಶತಮಾನದಲ್ಲಿ ಮಲಬಾರಿನಲ್ಲಿ ದಂಗೆಗಳು ಆರಂಭಗೊಂಡವು. ಗೇಣಿದಾರ ಒಕ್ಕಲಿಗರಾದ ಮಾಪ್ಪಿಳ್ಳೆಗಳು ಈ ದಂಗೆಗಳ ನೇತೃತ್ವವನ್ನು ವಹಿಸಿದ್ದರು. ಈ ದಂಗೆಗಳನ್ನು ಮಾಪಿಳ್ಳೆಗಳ ದಂಗೆ ಎಂದು ಕರೆಯುತ್ತಾರೆ. ಬಂಗಾಳದಲ್ಲಿ ಈ ದಂಗೆಗಳಿಗೆ ಸಮಾನವಾದ ದಂಗೆಗಳು ಆರಂಭಗೊಂಡಿದ್ದುವು. ಇವುಗಳನ್ನು ಫರಾಸಿ ದಂಗೆಗಳೆಂದು ತಿಳಿಯಲಾಗಿದೆ. ಕೃಷಿಕರಲ್ಲದೆ ಮೂಲನಿವಾಸಿಗಳೂ ಕಂಪೆನಿಗೆದುರಾಗಿ ದಂಗೆಗಳಲ್ಲಿ ಪಾಲ್ಗೊಂಡರು. ಈ ರೀತಿಯಲ್ಲಿ ದಂಗೆಗಳಲ್ಲಿ ಪಾಲ್ಗೊಂಡ ಮೂಲನಿವಾಸಿಗಳೆಂದರೆ:

- ಮರಾತದ ಭೀಲುಗಳು
- ಅಹಮ್ಮದ್‌ನಗರದ ಕೋಲಿಗಳು
- ಛೋಟಾನಾಗಪುರದ ಕೋಳುಗಳು
- ರಾಜ್‌ಮಹಲ್ ಬೆಟ್ಟಗಳ ಸಾಂತಾಳರು
- ವಯನಾಡಿನ ಕುರುಚಿಯರು

ಸಾಂತಾಳರ ದಂಗೆ

ಸಾಂತಾಳರು ಬಂಗಾಳ ಪ್ರಾಂತ್ಯದ ರಾಜ್‌ಮಹಲಿನ ಬೆಟ್ಟಗಳಲ್ಲಿ ವಾಸಿಸುತ್ತಿದ್ದರು. ಸಾಂತಾಳರ ದಂಗೆ ಎಂಬುದು ಲೇವಾದೇವಿಗಾರರ ಮಿತಿಮೀರಿದ ಬಡ್ಡಿ ವಸೂಲಿ ಮತ್ತು ಕಂಪೆನಿ ಉದ್ಯೋಗಸ್ಥರ ಶೋಷಣೆಗೆದುರಾಗಿ ಮೂಲನಿವಾಸಿಗಳು ಮಾಡಿದ ಹೋರಾಟವಾಗಿದೆ. ರಾಜ್‌ಮಹಲ್ ಬೆಟ್ಟಗಳನ್ನು ಆಣಿಗೊಳಿಸಿಕೊಂಡು ಹೋರಾಡಿದ ಈ ದಂಗೆಯಲ್ಲಿ 15000ಕ್ಕಿಂತಲೂ ಅಧಿಕ ಸಾಂತಾಳರು ತಮ್ಮ ಜೀವವನ್ನು ಬಲಿಕೊಟ್ಟರು. ಈ ದಂಗೆಗೆ ಸಿದ್ದು ಮತ್ತು ಕಾನ್‌ಹೂ ಎಂಬವರು ನೇತೃತ್ವವನ್ನು ನೀಡಿದ್ದರು.

ಸಾಂತಾಳರ ಒಂದು ಆದಿವಾಸಿ ಗೀತೆ

ಸೀದೋ, ನೀನ್ಯಾಕೆ ಹೀಗೆ
ರಕ್ತದಲ್ಲಿ ಮಿಂದಿರುವೆ?
ಕಾನ್‌ಹೂ ನೀನ್ಯಾಕೆ ಹೀಗೆ
ಹೋ ಹೋ ಎಂದು ಬೊಬ್ಬಿಡುವೆ?
ಈ ವ್ಯಾಪಾರಿಗಳು ಕಳ್ಳರು
ಭೂರಹಿತರನ್ನಾಗಿ ಮಾಡಿದರು ನಮ್ಮನ್ನು
ನಮ್ಮ ಜನತೆಗಾಗಿ
ನಾವು ರಕ್ತದ ಮಡುವಿನಲ್ಲಿ ಮಿಂದಿದ್ದೇವೆ.

ಆಕರ:
Ranajith Guha
Elementary Aspect of Peasant Insurgency

ಸಾಂತಾಳ ಮೂಲ ನಿವಾಸಿಗಳನ್ನು ದಂಗೆಗೆ ಪ್ರೇರೇಪಿಸಿದ ಸನ್ನಿವೇಶಗಳ ಕುರಿತು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

ಅಧಿಕಾರ ಕಳೆದುಕೊಂಡ ದೇಶೀಯ ರಾಜರುಗಳು ಮತ್ತು ಭೂಮಾಲಿಕರು ದಂಗೆಯಲ್ಲಿ ಪಾಲ್ಗೊಂಡ ಇನ್ನೊಂದು ವಿಭಾಗದವರಾಗಿದ್ದಾರೆ. ಇಂತಹ ದಂಗೆಗಳಿಗೆ ನೇತೃತ್ವವನ್ನು ನೀಡಿದವರೆಂದರೆ:

- ಔದ್‌ನ ರಾಜಾ ಚೈತ್ ಸಿಂಗ್
- ತಿರುನಲ್ವೇಲಿಯ ವೀರ ಪಾಂಡ್ಯ ಕಟ್ಟಬೊಮ್ಮನ್
- ಶಿವಗಂಗೆಯ ಮರುತು ಪಾಂಡ್ಯನ್

- ಮಲಬಾರಿನ ಪಳಶ್ಶಿ ರಾಜ
- ಕರ್ನಾಟಕದ ಕಿತ್ತೂರು ಚೆನ್ನಮ್ಮ
- ತಿರುವಾಂಕೂರಿನ ವೇಲುತಂಬಿ
- ಕೊಚ್ಚಿಯ ಪಾಲಿಯತ್ತಚ್ಚನ್

ಕೇರಳದ ದಂಗೆಗಳು

ಪಳಶ್ಶಿ ದಂಗೆಗಳು ಎಂಬುದು ಬ್ರಿಟಿಷರಿಗೆದುರಾಗಿ ಕೇರಳದಲ್ಲಿ ನಡೆದ ಪ್ರಧಾನ ಪ್ರತಿಭಟನೆಗಳಲ್ಲೊಂದಾಗಿದೆ. ಉತ್ತರ ಮಲಬಾರಿನ ಕೋಟ್ಟಯಂ ಪ್ರದೇಶದ ತೆರಿಗೆ ವಸೂಲು ಮಾಡುವ ತನ್ನ ಹಕ್ಕನ್ನು ನಿಷೇಧಿಸಿದುದು ಪಳಶ್ಶಿ ರಾಜನನ್ನು ಯುದ್ಧಕ್ಕೆ ಪ್ರೇರೇಪಿಸಿತು. ವಯನಾಡಿನ ಕಾಡುಗಳನ್ನು ಕೇಂದ್ರೀಕರಿಸಿಕೊಂಡು ಪಳಶ್ಶಿರಾಜನು ಬ್ರಿಟಿಷರಿಗೆದುರಾಗಿ ಗೆರಿಲ್ಲಾ ಯುದ್ಧವನ್ನು ಮಾಡಿದನು.

ತಲೈಕ್ಕಲ್ ಚಂದು, ಕೈತೇರಿ ಅಂಬು, ಎಡಚ್ಚೆನ ಕುಂಕನ್, ಅತ್ತನ್ ಗುರುಕ್ಕಳ್‌ರವರ ನೇತೃತ್ವದಲ್ಲಿರುವ ಸೈನಿಕರು ಯುದ್ಧದಲ್ಲಿ ಪಳಶ್ಶಿ ರಾಜನಿಗೆ ಸಹಾಯಮಾಡಿದರು. ಆದರೆ ಪಳಶ್ಶಿ ರಾಜನ ಮರಣದೊಂದಿಗೆ ಈ ಯುದ್ಧವು ಕೊನೆಗೊಂಡಿತು.

ಪಳಶ್ಶಿ ರಾಜನ ಅಂತ್ಯ ಯಾತ್ರೆ

ಪಳಶ್ಶಿರಾಜನ ಮೃತ ಶರೀರವನ್ನು ನಾನು ಸಂಚರಿಸಿದ ಪಲ್ಲಕಿಗೆ ಬದಲಾಯಿಸಿ ರಾಜನ ಪತ್ನಿಯನ್ನು ಇನ್ನೊಂದಕ್ಕೆ ಹತ್ತಿಸಿದೆನು. ಮರುದಿನ ಪ್ರಬಲವಾದ ಸೈನಿಕರ ಬೆಂಗಾವಲಿನೊಂದಿಗೆ ಮೃತಶರೀರವನ್ನು ಮಾನಂತವಾಡಿಗೆ ಕಳುಹಿಸಿದೆನು. ಎಲ್ಲ ಬ್ರಾಹ್ಮಣರನ್ನು ಆಮಂತ್ರಿಸಿ ಶವಸಂಸ್ಕಾರ ಕಾರ್ಯಕ್ರಮವನ್ನು ಪರಂಪರೆಗೆ ತಕ್ಕುದಾದ ವಿಧಿವಿಧಾನಗಳೊಂದಿಗೆ ನಡೆಸಬೇಕೆಂಬ ಆದೇಶವನ್ನು ಮೃತ ಶರೀರದೊಂದಿಗೆ ಅಲ್ಲಿಗೆ ಕಳುಹಿಸಲಾದ ಶಿರಸ್ತೇದಾರರಿಗೆ ನೀಡಿದ್ದೆ. ಹೀಗೊಂದು ಗೌರವಕ್ಕೆ ಪಳಶ್ಶಿರಾಜನು ಅರ್ಹನಾಗಿದ್ದಾನೆಂದು ನನಗೆ ಅನ್ನಿಸಿತು...

ಕಣ್ಣೂರು — ಟಿ.ಎಚ್. ಬೇಬರ್

1805 ಡಿಸೆಂಬರ್ 31 — ಉಪಜಿಲ್ಲಾಧಿಕಾರಿ, ಮಲಬಾರ್

ತಿರುವಾಂಕೂರಿನಲ್ಲಿ ದಳವಾಯಿಯಾದ ವೇಲುತಂಬಿಯು ಬ್ರಿಟಿಷರ ವಿರುದ್ಧವಾದ ಹೋರಾಟಗಳಿಗೆ ನೇತೃತ್ವವನ್ನು ನೀಡಿದನು. ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯ ನಿರಂತರವಾದ ಆಂತರಿಕ ಹಸ್ತಕ್ಷೇಪವು ವೇಲುತಂಬಿಯ ಆಡಳಿತಕ್ಕೆ ಧಕ್ಕೆಯನ್ನುಂಟುಮಾಡಿತು. ಇದು ಬ್ರಿಟಿಷರ ಆಧಿಪತ್ಯಕ್ಕೆದುರಾಗಿ ಹೋರಾಡಲು ಆತನನ್ನು ಪ್ರೇರೇಪಿಸಿತು. ಕೊಚ್ಚಿಯಲ್ಲಿ ಮಂತ್ರಿಯಾಗಿದ್ದ ಪಾಲಿಯತ್ತಚ್ಚನ್ ವೇಲುತಂಬಿಗೆ ಸಹಾಯಮಾಡಿದನು. 1809ರಲ್ಲಿ ಕುಂಡರದಲ್ಲಿ ಬ್ರಿಟಿಷರಿಗೆದುರಾಗಿ ಹೋರಾಡಲು ಅವನು ಜನರಿಗೆ ಕರೆ ನೀಡಿದನು. ಇದು ವೇಲುತಂಬಿಯು ಮಾಡಿದ ಪ್ರಸಿದ್ಧವಾದ ಕುಂಡರ ಘೋಷಣೆಯಾಗಿದೆ. ಬ್ರಿಟಿಷರ ಬಲವಾದ ಪ್ರತಿರೋಧವು ಅವನ ತಂತ್ರಗಳನ್ನು ಪರಾಜಯಗೊಳಿಸಿತು.

1857ರ ಪ್ರಥಮ ಸ್ವಾತಂತ್ರ್ಯ ಹೋರಾಟ

ಭಾರತದ ವಿವಿಧ ಭಾಗಗಳಲ್ಲಿ ನಡೆದ ಕೆಲವು ಪ್ರತಿಭಟನೆಗಳ ಕುರಿತು ನಾವು ತಿಳಿದೆವಲ್ಲವೆ? ಅವುಗಳನ್ನೆಲ್ಲಾ ಕಂಪೆನಿಯ ಸೈನ್ಯವು ದಮನಿಸಿತು. 1857ರ ವರೆಗೆ ಕಂಪೆನಿಯೊಂದಿಗೆ ಸಹಕಾರ ಮನೋಭಾವದಿಂದ ಇದ್ದ ಜನವರ್ಗಗಳೂ ಅವರಿಗೆದುರಾದರು. ಕಂಪೆನಿಯ ಸೈನ್ಯದಲ್ಲಿರುವ ಭಾರತೀಯ ಸೈನಿಕರು (ಸಿಪಾಯಿಗಳು) ಹಾಗೂ ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನಿಯಮದಿಂದಾಗಿ ಅಧಿಕಾರ ನಷ್ಟವಾಗಬಹುದೆಂದು ಭೀತಿವಾದ ದೇಶೀಯ ರಾಜರುಗಳು ಈ ಹೋರಾಟಗಳಿಗೆ ನೇತೃತ್ವವನ್ನು ನೀಡಿದರು.

ಸಿಪಾಯಿಗಳ ಜೀವನವು ಶೋಚನೀಯವಾಗಿತ್ತು.

- ಅತ್ಯಲ್ಪ ಸಂಬಳ
- ಅತಿ ಹೆಚ್ಚು ಸಮಯದ ಕೆಲಸ
- ರಜೆಯಿಲ್ಲದಿರುವುದು
- ಸಿಪಾಯಿಗಳನ್ನು ಗುಲಾಮರಂತೆ ಕಾಣುವ ಅಧಿಕಾರಿಗಳ ವರ್ತನೆ
- ಕಳಪೆ ಆಹಾರ

ಮಂಗಲ್ ಪಾಂಡೆ

ಮೇಲೆ ಸೂಚಿಸಲಾದ ಕಾರಣಗಳಿಂದ ಸಿಪಾಯಿಗಳು ಅಸಂತೃಪ್ತರಾಗಿದ್ದರು. ಈ ಸಂದರ್ಭದಲ್ಲಿ ಸೈನಿಕರಿಗೆ ಹೊಸ ಮಾದರಿಯ ಎನ್‌ಫೀಲ್ಡ್ ಕೋವಿಗಳನ್ನು ವಿತರಣೆ ಮಾಡಿದರು. ಈ ಕೋವಿಗಳಲ್ಲಿ ಬಳಸಬೇಕಾದ ಮದ್ದುಗುಂಡು ವಿಶೇಷತೆಗಳನ್ನೊಳಗೊಂಡಿತ್ತು. ಅವುಗಳನ್ನು ನಿರ್ಮಿಸಲು ದನದ ಮತ್ತು ಹಂದಿಯ ಕೊಬ್ಬನ್ನು ಉಪಯೋಗಿಸುತ್ತಾರೆ ಎಂಬ ವಾರ್ತೆಯು ಪ್ರಚಾರವಾಯಿತು. ಅದಲ್ಲದೆ ಸಿಪಾಯಿಗಳಿಗೆ ವಿತರಣೆ ಮಾಡುವ ರೊಟ್ಟಿಯು ಎಲುಬಿನ ಹುಡಿಯನ್ನು ಸೇರಿಸಿದ ಗೋಧಿ ಹುಡಿಯಿಂದ ತಯಾರಿಸಲಾದುದೆಂಬ ವಾರ್ತೆಯೂ ಪ್ರಚಾರವಾಯಿತು. ಇದರಿಂದ ಸಿಟ್ಟುಗೊಂಡ ಸೈನಿಕರು ದಂಗೆಯನ್ನಾರಂಭಿಸಿದರು. ಸಿಪಾಯಿಗಳಲ್ಲಿ ಒಬ್ಬನಾದ ಮಂಗಲಪಾಂಡೆ ಎಂಬವನು ಮೊತ್ತ ಮೊದಲಿಗೆ ಪ್ರತಿಭಟನೆಯನ್ನು ವ್ಯಕ್ತಪಡಿಸಿದನು.

ಎರಡನೇ ಬಹಾದ್ದೂರ್ ಷಾ

ಸೈನಿಕ ಅಧಿಕಾರಿಗಳಿಗೆದುರಾಗಿ ಸಂಘಟಿತವಾದ ದಂಗೆಗಳು ಮೊತ್ತಮೊದಲು ಮೀರತ್ತಿನಲ್ಲಿ ಆರಂಭವಾದುವು. ದಂಗೆಗಳಲ್ಲಿ ಪಾಲ್ಗೊಂಡ ಸೈನಿಕರು ಡೆಲ್ಲಿಗೆ ತಲುಪಿ ಕೊನೆಯ ಮೊಗಲ ದೊರೆಯಾದ ಎರಡನೇ ಬಹದ್ದೂರ್ ಷಾನನ್ನು ಭಾರತದ ಚಕ್ರವರ್ತಿಯಾಗಿ ಘೋಷಿಸಿದರು. ದಂಗೆಯು ಮೀರತ್ತಿನಲ್ಲಿ ಮಾತ್ರವಲ್ಲದೆ ಉತ್ತರ ಭಾರತದ ಇತರ ಭಾಗಗಳಿಗೂ ವ್ಯಾಪಿಸಿತು. ಅಧಿಕಾರ ಕಳೆದುಕೊಂಡ ದೇಶೀಯ ರಾಜರುಗಳೂ ದಂಗೆಯಲ್ಲಿ ಪಾಲ್ಗೊಂಡರು. ಕಾನ್ಪುರ, ಲಕ್ನೋ, ಅಲಹಾಬಾದ್, ಝಾನ್ಸಿ, ಆರ, ಫೈಜಾಬಾದ್ ಎಂಬೀ ಪ್ರದೇಶಗಳಿಗೆ ದಂಗೆಯು ವ್ಯಾಪಿಸಿತು.

ನಾನಾ ಸಾಹೇಬ್

ತಾಂತಿಯಾ ಟೋಪಿ


ಬೇಗಂ ಹಜ್ರತ್ ಮಹಲ್


ಝಾನ್ಸಿ ರಾಣಿ

ಕಾನ್ಪುರದಲ್ಲಿ ನಾನಾ ಸಾಹೇಬ್ ಮತ್ತು ತಾಂತಿಯಾ ಟೋಪಿ, ಝಾನ್ಸಿಯಲ್ಲಿ ರಾಣಿ ಲಕ್ಷ್ಮೀಬಾಯಿ, ಲಕ್ನೋವಿನಲ್ಲಿ ಬೇಗಂ ಹಸ್ರತ್ ಮಹಲ್ ಫೈಜಾಬಾದಿನಲ್ಲಿ ಮೌಲವಿ ಅಹಮ್ಮದುಲ್ಲ, ಆರದಲ್ಲಿ ಕನ್ವರ್ ಸಿಂಗ್‌ರವರು ಹೋರಾಟವನ್ನು ಮುನ್ನಡೆಸಿದರು. ಆದರೆ ಈ ದಂಗೆಯನ್ನು ಕಂಪೆನಿಯು ದಮನಿಸಿತು. ಬಹದ್ದೂರ್ ಷಾ ಸಫರನನ್ನು ರಂಗೂನಿಗೆ ಗಡಿಪಾರು ಮಾಡಿದರು.

ಲಗ್‌ತಾ ನಹಿ ಹೈ ಜಿ ಮೇರಾ

'ಜೀವನದ ಹಗಲು ಕೊನೆಯಾಗುತ್ತಾ ಇದೆ. ಮುಸ್ಸಂಜೆ ಕವಿಯ ತೊಡಗಿದೆ. ಇನ್ನು ಎರಡು ಕಾಲುಗಳನ್ನು ಚಾಚಿ ಸಮಾಧಿಯ ನಿದ್ದೆ ಮಾಡುವ. ಹುಟ್ಟಿದ ಮಣ್ಣಿನಲ್ಲಿ ಬೆರೆಯಲು 6 ಅಡಿಯಷ್ಟು ಮಣ್ಣು ಕೂಡಾ ಲಭಿಸದ ಸಫರ್, ನೀನೆಷ್ಟು ನಿರ್ಭಾಗ್ಯವಂತ'

ಬಹಾದ್ದೂರ್ ಷಾ ಸಫರ್

ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಪರಾಜಯಗೊಳ್ಳಲು ಕಾರಣಗಳಾವುವು? ನಾವು ಪರಿಶೀಲಿಸೋಣ.

- ಉತ್ತರಭಾರತದಲ್ಲಿ ಹೆಚ್ಚಿನ ಪ್ರದೇಶಗಳಲ್ಲಿ ದಂಗೆಗಳು ನಡೆದರೂ ಅದಕ್ಕೆ ಸಂಘಟಿತ ಸ್ವರೂಪವಿರಲಿಲ್ಲ.
- ದಂಗೆಗಾರರಿಗಿಂತ ಹೆಚ್ಚು ಸೈನಿಕ ಸಾಮರ್ಥ್ಯ, ಸಂಘಟನ ಚತುರತೆ ಹಾಗೂ ಆಧುನಿಕ ಆಯುಧಗಳು ಕಂಪೆನಿಗಿದ್ದುವು.
- ಭಾರತೀಯರಲ್ಲಿ ಎಲ್ಲ ಜನ ವಿಭಾಗದವರ ಬೆಂಬಲವನ್ನು ಗಳಿಸುವುದರಲ್ಲಿ ದಂಗೆಗಾರರು ವಿಫಲಗೊಂಡರು.
- ಇಂಗ್ಲಿಷ್ ವಿದ್ಯಾಭ್ಯಾಸ ಪಡೆದ ಭಾರತೀಯರು ಹೋರಾಟಗಳಿಗೆದುರಾಗಿದ್ದರು.
- ಶ್ರೀಮಂತರಾದ ದೇಶೀಯ ರಾಜರುಗಳು ಕಂಪೆನಿಗೆ ಬೆಂಬಲವನ್ನು ನೀಡಿದರು.

ಭೂಪಟವನ್ನು ಗಮನಿಸಿದಿರಲ್ಲವೇ.

1857ರ ಪ್ರಥಮ ಸ್ವಾತಂತ್ರ್ಯ ಹೋರಾಟದ ಪ್ರಧಾನ ಕೇಂದ್ರಗಳು

- ದಂಗೆ ನಡೆದ ಪ್ರಧಾನ ಸ್ಥಳಗಳನ್ನು ಕಂಡುಹಿಡಿಯಿರಿ.
- ಅವುಗಳು ಇಂದು ಯಾವ ರಾಜ್ಯಗಳಲ್ಲಿವೆಯೆಂದು ಪಟ್ಟಿ ಮಾಡಿರಿ.

ದಂಗೆಯು ಮೇಲ್ನೋಟಕ್ಕೆ ಪರಾಜಯಗೊಂಡಂತೆ ಕಂಡರೂ ಇದು ಕಂಪೆನಿಯ ಆಡಳಿತಕ್ಕೆದುರಾಗಿ, ದೇಶದ ವಿಮೋಚನೆಗಾಗಿ ನಡೆದ ಪ್ರಥಮ ಸಾರ್ವತ್ರಿಕ ಹೋರಾಟವಾಗಿತ್ತು. ಆದುದರಿಂದ ಈ ಹೋರಾಟವನ್ನು ಭಾರತದ ಪ್ರಥಮ ಸ್ವಾತಂತ್ರ್ಯ ಹೋರಾಟವಾಗಿ ಪರಿಗಣಿಸಲಾಗುತ್ತದೆ.

ಈ ದಂಗೆಯ ಅತಿ ಪ್ರಧಾನವಾದ ಪ್ರಯೋಜನವೆಂದರೆ ಮತಕ್ಕೆ ಅತೀತವಾಗಿ ಭಾರತೀಯರಲ್ಲಿ ಮೂಡಿಬಂದ ಐಕ್ಯದ ಪ್ರಜ್ಞೆಯಾಗಿದೆ. ಈ ಏಕತೆಯು ಬಹದ್ದೂರ್ ಷಾರವರನ್ನು ಷಾಹಿನ್ – ಷಾಯೆ–ಹಿಂದುಸ್ತಾನ್ (ಭಾರತದ ಚಕ್ರವರ್ತಿ) ಎಂದು ಘೋಷಿಸಲು ಪ್ರೇರೇಪಿಸಿತು. ಮತೀಯತೆಯನ್ನು ಬೆಳೆಸಲು ಬ್ರಿಟಿಷರು ನಡೆಸಿದ ಈ ಪ್ರಯತ್ನವು ದಂಗೆ ಕೊನೆಗೊಳ್ಳುವ ಮೊದಲೇ ವಿಫಲವಾಯಿತೆನ್ನುವುದನ್ನು ಸ್ಪಷ್ಟಪಡಿಸುತ್ತದೆ.

ಪಟ್ಟಿಯನ್ನು ಪೂರ್ತಿಗೊಳಿಸಿರಿ.

ದಂಗೆ ನಡೆದ ಪ್ರದೇಶಗಳು	ನೇತೃತ್ವ ನೀಡಿದವರು
ಝಾನ್ಸಿ	ರಾಣಿ ಲಕ್ಷ್ಮೀ ಬಾಯಿ

ಭಾರತದ ಆಡಳಿತವು ಬ್ರಿಟಿಷ್ ರಾಣಿಯ ವಶಕ್ಕೆ

1857ರ ಪ್ರಥಮ ಸ್ವಾತಂತ್ರ್ಯ ಹೋರಾಟವು ಭಾರತದ ಆಡಳಿತ ಕ್ರಮದಲ್ಲಿ ಬದಲಾವಣೆಯನ್ನುಂಟುಮಾಡಿತು. ಬ್ರಿಟಿಷ್ ರಾಣಿಯ 1858ರ ಘೋಷಣೆಯೊಂದಿಗೆ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತವು ಕೊನೆಗೊಂಡಿತು. ಭಾರತದ ಆಡಳಿತವು ಬ್ರಿಟಿಷ್ ರಾಣಿಯ ನೇರವಾದ ನಿಯಂತ್ರಣಕ್ಕೊಳಪಟ್ಟಿತು.

'1857ರ ಪ್ರಥಮ ಸ್ವಾತಂತ್ರ್ಯ ಹೋರಾಟ' ಎಂಬ ವಿಷಯವನ್ನು ಆಧರಿಸಿ ತರಗತಿಯಲ್ಲೊಂದು ವಿಚಾರಗೋಷ್ಠಿಯನ್ನು ನಡೆಸಿರಿ.

ಕ್ರೋಡೀಕರಣ

- ಬ್ರಿಟಿಷರು ಭಾರತದಲ್ಲಿ ಜಾರಿಗೊಳಿಸಿದ ಕಾನೂನುಗಳು ವಿವಿಧ ವಿಭಾಗಗಳ ಜನರನ್ನು ಸಂಕಷ್ಟಕ್ಕೀಡುಮಾಡಿದುವು.
- ಸಂಕಷ್ಟಕ್ಕೀಡಾದ ಕೃಷಿಕರು, ಕರಕುಶಲ ಕೆಲಸಗಾರರು, ಪ್ರಭುಗಳು, ಮೂಲ ನಿವಾಸಿಗಳು, ರಾಜರು ಬ್ರಿಟಿಷರಿಗೆದುರಾಗಿ ದಂಗೆಯೆದ್ದರು.
- ಪ್ರಥಮ ಸ್ವಾತಂತ್ರ್ಯ ಹೋರಾಟದ ತರುವಾಯ ಭಾರತದ ಆಡಳಿತವನ್ನು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯ ವಶದಿಂದ ತೆಗೆದು ಬ್ರಿಟಿಷ್ ಸರಕಾರವು ತಾನೇ ವಹಿಸಿಕೊಂಡಿತು.

ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಬ್ರಿಟಿಷರು ಭಾರತದಲ್ಲಿ ಜಾರಿಗೊಳಿಸಿದ ಆರ್ಥಿಕ ನೀತಿಗಳು ಜನಜೀವನವನ್ನು ಸಂಕಷ್ಟಕ್ಕೀಡುಮಾಡಿದುವು ಎಂಬ ತಿಳುವಳಿಕೆಯನ್ನು ಗಳಿಸುವುದು.
- ಕೃಷಿಕರು, ಕರಕುಶಲ ಕೆಲಸಗಾರರು, ಮೂಲ ನಿವಾಸಿಗಳು, ಪ್ರಭುಗಳು, ರಾಜರುಗಳು ಬ್ರಿಟಿಷರಿಗೆದುರಾಗಿ ನಡೆಸಿದ ದಂಗೆಗಳ ಕುರಿತು ತಿಳಿದುಕೊಳ್ಳುವುದು.
- 1857ರಲ್ಲಿ ನಡೆದ ಪ್ರಥಮ ಸ್ವಾತಂತ್ರ್ಯ ಹೋರಾಟದ ವಿಶೇಷತೆಗಳನ್ನು ತಿಳಿದುಕೊಳ್ಳುವುದು.
- ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯಿಂದ ಭಾರತದ ಆಡಳಿತವನ್ನು ಬ್ರಿಟಿಷ್ ಸರಕಾರವು ಕೈಗೆತ್ತಿಕೊಳ್ಳಲು ಕಾರಣವಾದ ಸನ್ನಿವೇಶವನ್ನು ತಿಳಿದುಕೊಳ್ಳುವುದು.

ಮೌಲ್ಯ ನಿರ್ಣಯ ಮಾಡುವ

ಕೆಳಗೆ ನೀಡಿದ ಪಟ್ಟಿಯನ್ನು ಯೋಗ್ಯವಾದ ರೀತಿಯಲ್ಲಿ ಜೊತೆಗೊಳಿಸಿರಿ.

ಎ	ಬಿ
ಸಾಂತಾಳರು	ತಲೈಕ್ಕಲ್ ಚಂದು
ಎರಡನೇ ಬಹದ್ದೂರ್ ಷಾ	ಕಾನ್ಪುರ
ಪಳಶ್ಶಿ ರಾಜ	ಸಿದ್ದು ಮತ್ತು ಕಾನ್‌ಹೂ
ನಾನಾ ಸಾಹೇಬ್	ಡೆಲ್ಲಿ

1. ಬ್ರಿಟಿಷರು ಭಾರತದಲ್ಲಿ ಜಾರಿಗೊಳಿಸಿದ ವಿವಿಧ ತೆರಿಗೆ ವ್ಯವಸ್ಥೆಗಳಿಂದ ಕೃಷಿಕರು ಯಾವೆಲ್ಲ ಸಮಸ್ಯೆಗಳನ್ನು ಅನುಭವಿಸಿದರೆಂದು ಸ್ಪಷ್ಟಪಡಿಸಿರಿ.
2. ಬ್ರಿಟಿಷರ ಆಮದು ನೀತಿಯು ಬಂಗಾಳದ ವಿವಿಧ ಜನವಿಭಾಗಗಳನ್ನು ಯಾವೆಲ್ಲ ರೀತಿಯಲ್ಲಿ ಬಾಧಿಸಿತು?
3. 1857ರ ಹೋರಾಟವು ಆಡಳಿತ ಕ್ರಮದಲ್ಲಿ ಯಾವ ಬದಲಾವಣೆಯನ್ನು ಉಂಟುಮಾಡಿತು?

ಮುಂದುವರಿದ ಚಟುವಟಿಕೆಗಳು

1. ಕೇರಳದಲ್ಲಿ ನಡೆದ ಪ್ರತಿಭಟನಾ ಹೋರಾಟಗಳ ಮತ್ತು 1857ರ ಸ್ವಾತಂತ್ರ್ಯ ಹೋರಾಟದ ನೇತಾರರ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿರಿ.
2. ವಿವಿಧ ಪ್ರತಿಭಟನಾ ಹೋರಾಟಗಳು ನಡೆದ ಪ್ರದೇಶಗಳನ್ನು ಭಾರತದ ಭೂಪಟದಲ್ಲಿ ಗುರುತಿಸಿರಿ.

4 ನವಯುಗದತ್ತ ಭಾರತ

ಕ್ರಿ. ಶ. 1612–'16ರ ಕಾಲಘಟ್ಟ

ಸೂರತ್ತಿನ ಒಂದು ದಿನ

ಬನಿಯ ವರ್ಗದವರೊಬ್ಬರು ಮರಣ ಹೊಂದಿದರು.

ಮೃತಶರೀರವನ್ನು ದಹನ ಮಾಡಲು ದೂರದಲ್ಲಿರುವ ಒಂದು ಸ್ಮಶಾನಕ್ಕೆ ಕೊಂಡು ಹೋದರು.

ಚಟ್ಟವನ್ನು ನೂರಾರು ಜನರು ಹಿಂಬಾಲಿಸಿದರು.

ಮರಣ ಹೊಂದಿದ ವ್ಯಕ್ತಿಯ ಹೆಂಡತಿಯು ಹೊಸ ಬಟ್ಟೆಬರೆಗಳನ್ನೂ ಆಭರಣಗಳನ್ನೂ ಧರಿಸಿ ಆ ಗುಂಪಿನೊಂದಿಗಿದ್ದಳು.

ವಿವಾಹ ಮಂಟಪಕ್ಕೆ ಕರೆದುಕೊಂಡು ಹೋಗುವ ರೀತಿಯಲ್ಲಿ ಬಂಧುಗಳು ಹಾಗೂ ಸಖಿಯರು ಅವಳನ್ನು ಕರೆದುಕೊಂಡು ಹೋಗುತ್ತಿದ್ದರು.

ಶವವನ್ನು ಚಿತೆಯಲ್ಲಿಟ್ಟರು. ಮೂರುಸಲ ಪ್ರದಕ್ಷಿಣೆ ಬಂದು ಅವಳು ಚಿತೆಯ ಮೇಲೆ ಹತ್ತಿ ಕುಳಿತಳು. ನಂತರ ಗಂಡನ ತಲೆಯನ್ನು ಎತ್ತಿ ಮಡಿಲಲ್ಲಿಟ್ಟಳು.

ಗಂಡನೊಂದಿಗೆ ಅವಳು ವಾಸಿಸಲು ಹೋಗುತ್ತಿರುವಳೆಂಬುದು ಅಂದಿನ ನಂಬಿಕೆಯಾಗಿತ್ತು.

ಒಣಗಿದ ಸೌದೆಗಳು, ತುಪ್ಪ ಮತ್ತು ಎಣ್ಣೆ ಅವಳ ಸುತ್ತಲೂ ತುಂಬಿದುವು. ಸುಗಂಧ ದ್ರವ್ಯಗಳನ್ನು ಅವಳ ಮೇಲೆ ಚಿಮುಕಿಸಿದರು. ಚಿತೆಗೆ ಬೆಂಕಿ ಕೊಟ್ಟರು.

ಇನ್ನೂ ಹತ್ತು ವರ್ಷ ದಾಟದ ಅವಳು ಈ ವರೆಗೆ ಗಂಡನೊಂದಿಗೆ ವಾಸವಾಗಿರಲಿಲ್ಲ. ಆದರೂ ಹೆಂಡತಿ ಎಂಬ ನೆಲೆಯಲ್ಲಿ ಅವಳು ಚಿತೆಯಲ್ಲಿ ಸುಟ್ಟುಹೋದಳು.

ಆಕರ

ವಿಲ್ಯಂ ಫೋಸ್ಟರ್ CIE, Early Travels in India 1583-1619

ಭಾರತದಲ್ಲಿ ನೆಲೆನಿಂತಿದ್ದ ಸತಿಸಹಗಮನ ಎಂಬ ಸಾಮಾಜಿಕ ಅನಾಚಾರದ ಬಗ್ಗೆ ಮೇಲೆ ವಿವರಿಸಲಾಗಿದೆ. ಈ ರೀತಿಯ ಅನೇಕ ಸಾಮಾಜಿಕ ಅನಾಚಾರಗಳು ಭಾರತದಲ್ಲಿ ನೆಲೆನಿಂತಿದ್ದುವು. ಅವುಗಳು ಯಾವುವು?

- ಬಾಲ್ಯ ವಿವಾಹ
- ವಿಧವಾ ವಿವಾಹಕ್ಕೆ ವಿರೋಧ
- ನರಬಲಿ
- ಹೆಣ್ಣು ಶಿಶುಗಳ ಹತ್ಯೆ
- ಗುಲಾಮಗಿರಿ
-
-

ಈ ರೀತಿಯ ಸಾಮಾಜಿಕ ಅನಾಚಾರಗಳಿಗೆ ಎದುರಾಗಿ19 ನೇ ಶತಮಾನದಲ್ಲಿ ಅನೇಕ ಚಳುವಳಿಗಳು ಆರಂಭಗೊಂಡವು. ಸರಿತಪ್ಪುಗಳನ್ನು ಕುರಿತ ಚಿಂತನೆಗಳು ಮತ್ತು ಇಂಗ್ಲೀಷ್ ವಿದ್ಯಾಭ್ಯಾಸ ಉಂಟುಮಾಡಿದ ಸಾಮಾಜಿಕ ಪ್ರಜ್ಞೆಗಳು ಇದಕ್ಕೆ ಪ್ರೇರಕವಾದುವು. ಅನಾಚಾರ ಮತ್ತು ಮೂಢನಂಬಿಕೆಗಳ ಬಗೆಗಿನ ವಿರೋಧ, ಮಹಿಳಾ ಸ್ವಾತಂತ್ರ್ಯ, ವಿದ್ಯಾಭ್ಯಾಸದ ವ್ಯಾಪಕತ್ವ, ಭಾರತೀಯ ಸಂಸ್ಕೃತಿಯ ಬಗೆಗಿನ ಸರಿಯಾದ ತಿಳುವಳಿಕೆ ಮುಂತಾದುವು ಇದರ ಸಾಮಾನ್ಯ ಲಕ್ಷಣಗಳಾಗಿದ್ದುವು. ಸಾಮಾಜಿಕ ಅನಾಚಾರಗಳಿಗೆ ಎದುರಾಗಿ ಹಾಗೂ ಸಮಾಜದ ಒಳಿತಿಗಾಗಿ ಪ್ರಯತ್ನಿಸಿದ ಪ್ರಧಾನ ವ್ಯಕ್ತಿಗಳನ್ನು ಮತ್ತು ಅವರು ಆರಂಭಿಸಿದ ಚಳುವಳಿಗಳ ಕುರಿತು ನಾವು ಪರಿಚಯಿಸಿಕೊಳ್ಳೋಣ.

ರಾಜಾರಾಮ್ ಮೋಹನರಾಯ್

ಪಾಶ್ಚಾತ್ಯ ವಿದ್ಯಾಭ್ಯಾಸ ಪಡೆದ ರಾಜಾರಾಮ್ ಮೋಹನರಾಯ್ ಭಾರತದಲ್ಲಿ ನೆಲೆನಿಂತಿದ್ದ ಅನೇಕ ಅನಾಚಾರಗಳನ್ನು ಪ್ರಬಲವಾಗಿ ವಿರೋಧಿಸಿದರು. ಸತಿಸಹಗಮನ, ಬಾಲ್ಯವಿವಾಹ ಮುಂತಾದ ಸಾಮಾಜಿಕ ಅನಾಚಾರಗಳಿಗೆದುರಾಗಿ ದನಿಯೆತ್ತಿದರು. ಬ್ರಿಟಿಷ್ ಗವರ್ನರ್ ಜನರಲ್ ಆಗಿದ್ದ ವಿಲಿಯಂ ಬೆಂಟಿಕ್ ಪ್ರಭುವು ಸತಿಸಹಗಮನ ಪದ್ಧತಿಯನ್ನು ನಿಷೇಧಿಸಿದನು. ಇದಕ್ಕೆ ಪ್ರಧಾನ ಕಾರಣ ರಾಜಾರಾಮ್ ಮೋಹನರಾಯ್‌ರವರ ಕಾರ್ಯ ಚಟುವಟಿಕೆಗಳಾಗಿದ್ದುವು. ತನ್ನ ಆಶಯಗಳನ್ನು ಪ್ರಚಾರಮಾಡಲು ಬ್ರಹ್ಮಸಮಾಜ ಎಂಬ ಸಂಘಟನೆಯನ್ನು ಸ್ಥಾಪಿಸಿದ ರಾಜಾರಾಂ ಮೋಹನರಾಯ್ ಮೂಲಭೂತವಾಗಿ ಎಲ್ಲ ಧರ್ಮಗಳೂ ಒಂದೇ ಎಂಬ ಸಾಮಾನ್ಯ ಸಂದೇಶವನ್ನು ಪ್ರಚಾರಮಾಡಿದರು. 'ಜಾತಿ ವ್ಯವಸ್ಥೆಯು ಭಾರತೀಯರ ಮಧ್ಯೆಯಿರುವ ಅನೈತಿಕತೆಗೆ ಮೂಲ' ಎಂದು ಅವರು ನಂಬಿದ್ದರು. ಅವರನ್ನು 'ಭಾರತದ ನವೋತ್ಥಾನದ ಪಿತಾಮಹ' ರೆಂದು ತಿಳಿಯಲಾಗುತ್ತದೆ.

ಸ್ವಾಮಿ ದಯಾನಂದ ಸರಸ್ವತಿ

ಸ್ವಾಮಿ ದಯಾನಂದ ಸರಸ್ವತಿಯವರು ಜಾತಿ ವ್ಯವಸ್ಥೆ ಮತ್ತು ವಿಗ್ರಹಾರಾಧನೆಯನ್ನು ವಿರೋಧಿಸಿದ ನವೋತ್ಥಾನ ನಾಯಕರಾಗಿದ್ದಾರೆ. ತಮ್ಮ ಚಿಂತನೆಗಳ ಪ್ರಸಾರಕ್ಕಾಗಿ ಅವರು ಆರ್ಯಸಮಾಜ ಎಂಬ ಸಂಘಟನೆಯನ್ನು ರೂಪಿಸಿದರು. 'ವೇದಗಳಿಗೆ ಹಿಂತಿರುಗಿ' ಎಂಬ ಸಂದೇಶವನ್ನು ನೀಡಿದರು.

ಜೋತಿರಾವು ಫುಲೆ

ಜೋತಿರಾವು ಫುಲೆಯವರು ವಿಧವಾ ವಿವಾಹಕ್ಕೆ ಪ್ರೋತ್ಸಾಹ ನೀಡಿದರು. ಜಾತಿವ್ಯವಸ್ಥೆಯನ್ನು ಪ್ರಬಲವಾಗಿ ವಿರೋಧಿಸಿದರು. ಹನ್ನೆರಡು ವರ್ಷಗಳವರೆಗಿನ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ನೀಡಬೇಕೆಂದು ಆಗ್ರಹಿಸಿದ ಅವರು ತುಳಿತಕ್ಕೊಳಗಾದವರ ಮತ್ತು ಮಹಿಳೆಯರ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟರು. ಇದರ ಪ್ರಚಾರಕ್ಕಾಗಿ ಫುಲೆಯವರು ಸತ್ಯಶೋಧಕ ಸಮಾಜ ಎಂಬ ಸಂಘಟನೆಯನ್ನು ಸ್ಥಾಪಿಸಿದರು.

ಪಂಡಿತ್ ರಮಾಬಾಯಿ

ಮಹಿಳೆಯರ ಏಳಿಗೆಗಾಗಿ ಆರ್ಯ ಮಹಿಳಾ ಸಭೆ ಎಂಬ ಸಂಘಟನೆಯನ್ನು ಸ್ಥಾಪಿಸಿದ ರಮಾಬಾಯಿಯವರು ಮಹಿಳೆಯರು ಅನುಭವಿಸುವ ಸಾಮಾಜಿಕ ಅಸಮಾನತೆಗೆ ಎದುರಾಗಿ ಹೋರಾಡಿದರು. ವಿಧವೆಯರ ಏಳಿಗೆಗಾಗಿ ಮತ್ತು ಮಹಿಳಾ ವಿದ್ಯಾಭ್ಯಾಸಕ್ಕಾಗಿ ಅವರು ಕಾರ್ಯಪ್ರವೃತ್ತರಾದರು.

ಸರ್ ಸಯ್ಯದ್ ಅಹಮ್ಮದ್ ಖಾನ್



ಮುಸ್ಲಿಮರ ಮಧ್ಯೆ ಆಧುನಿಕ ಶಿಕ್ಷಣವನ್ನು ಪ್ರಚಾರಮಾಡಿದ ಅಹಮ್ಮದ್ ಖಾನ್‌ರವರು ಮಹಮ್ಮದನ್ ಆಂಗ್ಲೋ ಒರಿಯೆಂಟಲ್ ಕಾಲೇಜನ್ನು ಸ್ಥಾಪಿಸಿದರು. ಮುಂದೆ ಇದು ಪ್ರಸಿದ್ಧವಾದ ಆಲಿಘಡ್ ಮುಸ್ಲಿಂ ವಿಶ್ವವಿದ್ಯಾಲಯವಾಗಿ ಬದಲಾಯಿತು. ಹಿಂದೂ ಮುಸ್ಲಿಂ ಐಕ್ಯದ ಕುರಿತು ಅವರು ಹೀಗೆ ಹೇಳಿದರು: "ಹಿಂದುಗಳು ಮತ್ತು ಮುಸ್ಲಿಮರು ಭಾರತದ ಗಾಳಿಯನ್ನು ಉಸಿರಾಡಿ ಗಂಗೆಯ ಮತ್ತು ಯಮುನೆಯ ನೀರನ್ನು ಕುಡಿದು ಜೀವಿಸುತ್ತಾರೆ. ನಾವೆಲ್ಲರೂ ಭಾರತದ ಮಣ್ಣಿನ ಬೆಳೆಗಳನ್ನು ತಿನ್ನುತ್ತೇವೆ. ಬದುಕಿನಲ್ಲೂ, ಸಾವಿನಲ್ಲೂ ನಾವು ಜೊತೆಗಿರುತ್ತೇವೆ."

ಸ್ವಾಮಿ ವಿವೇಕಾನಂದ

ಸ್ವಾಮಿ ವಿವೇಕಾನಂದರು ಜಾತಿಗಳೊಳಗಿನ ಮೇಲು ಕೀಳು ಭೇದವನ್ನು ಪ್ರಬಲವಾಗಿ ವಿರೋಧಿಸಿದ ಮತ್ತು ಮಹಿಳಾ ಶಿಕ್ಷಣಕ್ಕೆ ಪ್ರೋತ್ಸಾಹವನ್ನು ಕೊಟ್ಟ ಸಮಾಜ ಸುಧಾರಕ. ವಿಶ್ವ ಭ್ರಾತೃತ್ವಕ್ಕೆ ಒತ್ತುಕೊಟ್ಟ ಅವರು ಹೀಗೆ ಅಭಿಪ್ರಾಯಪಟ್ಟರು: "ಎರಡು ಮಹತ್ತರ ಸಂಪ್ರದಾಯಗಳಾದ ಹಿಂದು ಮತ್ತು ಇಸ್ಲಾಂ ಧರ್ಮಗಳು ಒಂದಾಗಿ ಬಾಳಬೇಕೆಂಬುದೇ ನಮ್ಮ ತಾಯ್ನಾಡಿನ ನಿರೀಕ್ಷೆಯಾಗಿದೆ." ಶ್ರೀ ರಾಮಕೃಷ್ಣ ಪರಮಹಂಸರು ಸ್ವಾಮಿ ವಿವೇಕಾನಂದರ ಗುರುಗಳಾಗಿದ್ದರು. ಗುರುಗಳ ವಿಚಾರಧಾರೆಯನ್ನು ಪ್ರಚಾರ ಮಾಡಲು ವಿವೇಕಾನಂದರು ಶ್ರೀ ರಾಮಕೃಷ್ಣ ಮಿಶನ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಯ ನೇತೃತ್ವದಲ್ಲಿ ದೇಶದ ವಿವಿಧೆಡೆಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಭಾರತೀಯರಲ್ಲಿ ರಾಷ್ಟ್ರೀಯ ಪ್ರಜ್ಞೆ ಮತ್ತು ಆತ್ಮಾಭಿಮಾನವನ್ನು ಬೆಳೆಸಲು ವಿವೇಕಾನಂದರ ಕಾರ್ಯಚಟುವಟಿಕೆಗಳು ಪ್ರಧಾನ ಪಾತ್ರವಹಿಸಿದವು.



ಪಟ್ಟಿಯನ್ನು ಪೂರ್ತಿಗೊಳಿಸಿರಿ

ನವೋತ್ಥಾನದ ನಾಯಕರು	ಚಳುವಳಿ	ಮುಖ್ಯ ಕಾರ್ಯಚಟುವಟಿಕೆಗಳು

ಭಾರತದಲ್ಲಿ ನೆಲೆನಿಂತಿದ್ದ ಸಾಮಾಜಿಕ ಅನಾಚಾರಗಳ ಕುರಿತಾದ ನಿಮ್ಮ ಪ್ರತಿಕ್ರಿಯೆಗಳನ್ನು ಟಿಪ್ಪಣಿಯಾಗಿ ಬರೆಯಿರಿ. ಧಾರ್ಮಿಕ ಪ್ರಜ್ಞೆಯನ್ನು ಮೀರಿ ಸಾಮಾಜಿಕ ಪ್ರಜ್ಞೆಯನ್ನುಂಟುಮಾಡಲು ನವೋತ್ಥಾನ ನಾಯಕರು ಮಾಡಿದ ಪ್ರಯತ್ನಗಳ ಕುರಿತು ಚರ್ಚಿಸಿರಿ.

ಬದಲಾಗುತ್ತಿರುವ ಜನರು

ಧರ್ಮ ಮತ್ತು ಜಾತಿಗಳಿಗೆ ಮಿಗಿಲಾಗಿ ಮಾನವೀಯತೆಗೆ ಒತ್ತು ನೀಡುವ ವಿಶ್ವಭ್ರಾತೃತ್ವದ ಕಡೆಗೆ ಭಾರತೀಯರನ್ನು ಮುನ್ನಡೆಸಲು ಸಮಾಜ ಸುಧಾರಕರಿಗೆ ಸಾಧ್ಯವಾಯಿತು.

ಎಲ್ಲ ಸಮಾಜ ಸುಧಾರಕರೂ ಶಿಕ್ಷಣದ ಪ್ರಾಧಾನ್ಯವನ್ನು ಒತ್ತಿ ಹೇಳಿದರು. ಅವರು ಹೊಸ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಇದು ಭಾರತದ ಶೈಕ್ಷಣಿಕ ಪ್ರಗತಿಗೆ ಕಾರಣವಾಯಿತು. ಸಾಮಾಜಿಕ ಬದಲಾವಣೆ ಅಲ್ಲದೆ ಭಾರತದ ಪ್ರಾಚೀನ ಪರಂಪರೆಯ ಪ್ರಾಧಾನ್ಯವನ್ನು ಈ ಸಮಾಜ ಸುಧಾರಕರು ಎತ್ತಿ ಹಿಡಿದರು. ಇದು ಭಾರತೀಯರಲ್ಲಿ ತಮ್ಮ ರಾಷ್ಟ್ರದ ಕುರಿತು ಅಭಿಮಾನ ಮತ್ತು ಆತ್ಮವಿಶ್ವಾಸವನ್ನು ಬೆಳೆಸಿತು. ಹೀಗೆ ಸಮಾಜ ಸುಧಾರಕರು ಭಾರತೀಯರಲ್ಲಿ ನವಚೈತನ್ಯವನ್ನು ತುಂಬುವುದರಲ್ಲಿ ಮುಖ್ಯ ಪಾತ್ರವಹಿಸಿದರು.

ರಾಷ್ಟ್ರೀಯ ಪ್ರಜ್ಞೆ ಬೆಳೆಯುತ್ತಿದೆ

ನಾವು ಇದುವರೆಗೆ ಚರ್ಚಿಸಿದ ಸಮಾಜ ಸುಧಾರಣ ಚಳುವಳಿಗಳು ಹಾಗೂ ಅವುಗಳ ನಾಯಕರ ಕಾರ್ಯಚಟುವಟಿಕೆಗಳು ಭಾರತೀಯರಲ್ಲಿ ಹೊಸ ಪ್ರಜ್ಞೆಯನ್ನುಂಟುಮಾಡಿದುವು. ಆ ಹೊತ್ತಿಗೆ ಭಾರತೀಯರಲ್ಲಿ ರೂಪುಗೊಂಡ ರಾಜಕೀಯ, ಆರ್ಥಿಕ ಸನ್ನಿವೇಶಗಳ ಕುರಿತು ಹಿಂದಿನ ಅಧ್ಯಾಯಗಳಲ್ಲಿ ನಾವು ತಿಳಿದಿದ್ದೇವಲ್ಲವೇ.
ಅವುಗಳು ಯಾವುವು?

- ಬ್ರಿಟಿಷರು ದೇಶೀಯ ರಾಜ್ಯಗಳನ್ನು ವಶಪಡಿಸಿ ಒಂದೇ ಆಡಳಿತದ ಕೈಕೆಳಗೆ ತಂದರು. ಇದು ರಾಜಕೀಯವಾಗಿ ಭಾರತವನ್ನು ಏಕೀಕರಿಸಿತು.
- ಬ್ರಿಟಿಷ್ ಸರಕಾರದ ಆರ್ಥಿಕ ಶೋಷಣೆಯು ಭಾರತೀಯರಲ್ಲಿ ಬ್ರಿಟಿಷ್ ವಿರೋಧಿ ಮನೋಭಾವವನ್ನುಂಟುಮಾಡಿತು.
- ಇಂಗ್ಲಿಷ್ ವಿದ್ಯಾಭ್ಯಾಸದ ಹರಡುವಿಕೆ, ಸಾರಿಗೆ ಮತ್ತು ವಾರ್ತಾವಿನಿಮಯ ಸೌಲಭ್ಯಗಳ ಪ್ರಗತಿಯು ವಿವಿಧ ಜನವಿಭಾಗಗಳನ್ನು ಒಂದುಗೂಡಿಸಿತು.
- ಪ್ರಥಮ ಸ್ವಾತಂತ್ರ್ಯ ಹೋರಾಟವನ್ನು ಹಿಮ್ಮೆಟ್ಟಿಸಲು ಬ್ರಿಟಿಷರು ಸ್ವೀಕರಿಸಿದ ಮಾರ್ಗಗಳು ಭಾರತೀಯರನ್ನು ಏಕೀಕರಿಸಲು ಮತ್ತು ನಾವೆಲ್ಲರು ಒಂದೇ ರಾಷ್ಟ್ರದವರು ಎಂಬ ಪ್ರಜ್ಞೆಯನ್ನುಂಟುಮಾಡಲು ಸಹಾಯ ಮಾಡಿತು.

ಭಾರತೀಯರೆಲ್ಲರೂ ಒಂದೇ ಎಂಬ ಪ್ರಜ್ಞೆಯನ್ನು ಉಂಟುಮಾಡಲು ಮೇಲೆ ತಿಳಿಸಿದ ಘಟಕಗಳು ಸಹಾಯಕವಾದುವು. ಮತ, ಭಾಷೆ, ಪ್ರದೇಶ ಎಂಬೀ ವೈವಿಧ್ಯಗಳಿಗಿಂತ ಮಿಗಿಲಾಗಿ ಭಾರತೀಯರೆಲ್ಲರೂ ಒಂದೇ ಎಂಬ ಭಾವನೆಯು ಭಾರತದ ರಾಷ್ಟ್ರೀಯತೆಯನ್ನು ರೂಪಿಸಿತು.

ಭಾರತೀಯರಲ್ಲಿ ರಾಷ್ಟ್ರೀಯತೆಯ ಬೆಳವಣಿಗೆಗೆ ಸಹಾಯಕವಾದ ಘಟಕಗಳನ್ನು



"ಭಾರತದಲ್ಲಿರುವ ಪರ್ವತಗಳು, ನದಿಗಳು, ಅರಣ್ಯಗಳು, ನಮಗೆ ಆಹಾರವನ್ನು ಒದಗಿಸುವ ವಿಶಾಲವಾದ ಬಯಲುಗಳು ಎಲ್ಲವೂ ನಮಗೆ ಪ್ರಿಯವಾದವುಗಳಾಗಿವೆ. ಇದಕ್ಕೆಲ್ಲ ಮಿಗಿಲಾಗಿ ಭಾರತದ ಜನತೆಯನ್ನು ನಾವು ಪರಿಗಣಿಸಬೇಕಾಗಿದೆ. ಅವರೆಲ್ಲರೂ ನಮ್ಮಂತೆ ಇರುವ ಜನರಾಗಿದ್ದಾರೆ. ಅವರು ಈ ವಿಶಾಲವಾದ ನಾಡಿನ ನಾನಾಭಾಗಗಳಲ್ಲಿ ವಾಸಿಸುತ್ತಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಈ ಕೋಟಿಗಟ್ಟಲೆ ಜನರನ್ನು ಒಳಗೊಂಡಿರುವುದೇ 'ಭಾರತ ಮಾತೆ'. ಅವರ ಗೆಲುವೆಂದರೆ ಈ ಜನತೆಯ ಗೆಲುವು ಎಂದು ಅರ್ಥ. ನೀವು ಪ್ರತಿಯೊಬ್ಬರು ಈ ಭಾರತ ಮಾತೆಯ ಭಾಗವಾಗಿದ್ದೀರಿ. ಒಂದು ರೀತಿಯಲ್ಲಿ ಗಮನಿಸಿದರೆ ನೀವೇ ಭಾರತ ಮಾತೆಯೆಂದು ನಾನು ಅವರಲ್ಲಿ ಹೇಳುತ್ತೇನೆ. ಈ ಆಶಯವು ನಿಧಾನವಾಗಿ ಅವರ ತಿಳುವಳಿಕೆಗೆ ಬಂದರೆ, ಅದೊಂದು ದೊಡ್ಡ ಸಂಶೋಧನೆಯನ್ನು ಮಾಡಿದ ಹಾಗೆ ಅವರ ಕಣ್ಣುಗಳು ಪ್ರಕಾಶಿಸಬಹುದು."

– ಜವಹರ್‌ಲಾಲ್ ನೆಹರು, 'ಭಾರತವನ್ನು ಕಂಡುಹಿಡಿಯುವ'

ಸ್ಪಷ್ಟಪಡಿಸಿರಿ.

ರಾಷ್ಟ್ರೀಯ ಪ್ರಜ್ಞೆಯು ಬೆಳವಣಿಗೆ ಹೊಂದಿದಾಗ ಬ್ರಿಟಿಷ್ ಆಡಳಿತದಿಂದ ಮುಕ್ತಿ ಪಡೆಯಲಿರುವ ಭಾರತೀಯರ ಚಟುವಟಿಕೆಗಳಿಗೆ ಪ್ರೋತ್ಸಾಹ ಹೆಚ್ಚಾಯಿತು. ಇದು ಸ್ವಾತಂತ್ರ್ಯಕ್ಕಾಗಿ ಹೋರಾಡುವ ಚಳುವಳಿಗಳ ಪ್ರಾಧಾನ್ಯವನ್ನು ಹೆಚ್ಚಿಸಿತು.

ರಾಷ್ಟ್ರೀಯತೆಯ ಬೆಳವಣಿಗೆಗೆ ಸಹಾಯ ಮಾಡಿದ ಸಾಹಿತ್ಯಕಾರರು

- ಬಂಕಿಮ್ ಚಂದ್ರ ಚಟರ್ಜಿ
- ರವೀಂದ್ರನಾಥ ಠಾಗೋರ್
- ಮುಹಮ್ಮದ್ ಇಕ್ಬಾಲ್
- ಲಕ್ಷ್ಮೀನಾಥ ಬೆಸ್‌ಬರುವ
- ಅಲ್ತಾಫ್ ಹುಸೈನ್

ಸಂಘಟನೆಗಳ ರೂಪೀಕರಣ

ಭಾರತೀಯರಿಗುಂಟಾದ ಅರಿವಿನ ಫಲವಾಗಿ ಭಾರತದ ಹಲವು ಭಾಗಗಳಲ್ಲಿ ಪ್ರಾದೇಶಿಕ ಸಂಘಟನೆಗಳು ರೂಪುಗೊಂಡವು. ಮದ್ರಾಸ್ ನೇಟಿವ್ ಅಸೋಸಿಯೇಶನ್, ಪೂನಾ ಸಾರ್ವಜನಿಕ ಸಭಾ, ಇಂಡಿಯನ್ ಅಸೋಸಿಯೇಶನ್ ಮೊದಲಾದುವು ಅವುಗಳಲ್ಲಿ ಕೆಲವು. ಆದರೆ ಇವುಗಳೆಲ್ಲ ಪ್ರಾದೇಶಿಕ ಆವಶ್ಯಕತೆಗಳಿಗೆ ಪ್ರಾಧಾನ್ಯ ನೀಡಿದ್ದವು. ರಾಷ್ಟ್ರೀಯ ಮಟ್ಟದಲ್ಲಿ ಒಂದು ಸಂಘಟನೆಯನ್ನು ರೂಪೀಕರಿಸಬೇಕಾದ ಆವಶ್ಯಕತೆಯು ಆ ಕಾಲದಲ್ಲಿ ಪ್ರಬಲವಾಗಿತ್ತು.

ಇಂಡಿಯನ್ ನ್ಯಾಶನಲ್ ಕಾಂಗ್ರೆಸಿನ ಉದಯ

1885 ಡಿಸೆಂಬರ್ 28. ಮುಂಬೈಯ ತೇಜ್‌ಪಾಲ್ ಸಂಸ್ಕೃತ ಕಾಲೇಜಿನ ವಿಶಾಲವಾದ ಕೋಣೆ. ಭಾರತದ ವಿವಿಧ ಪ್ರದೇಶಗಳಿಂದ ಬಂದ 72 ಮಂದಿ ಅಲ್ಲಿ ಒಟ್ಟು ಸೇರಿದ್ದರು. ಅವರು ವಿವಿಧ ವೇಷ ಭೂಷಣ ಧರಿಸಿದವರು, ಹಲವು ಮತದವರು ಹಾಗೂ ಹಲವು ಭಾಷೆಯವರು ಆಗಿದ್ದರು. ವಿಭಿನ್ನ

ಪ್ರಥಮ ಸಭೆಯ ಭಾಷಣದಿಂದ

"ಭಾರತದ ಆಡಳಿತ ವ್ಯವಸ್ಥೆಯು ಇನ್ನಷ್ಟು ಉತ್ತಮಗೊಳ್ಳಬೇಕೆಂದು ಮತ್ತು ನಮ್ಮನ್ನು ಆಡಳಿತದಲ್ಲಿ ಸೇರಿಸಿಕೊಳ್ಳಬೇಕೆಂದು ನಾವು ಬಯಸುತ್ತೇವೆ."

ಡಬ್ಲ್ಯು. ಸಿ. ಬ್ಯಾನರ್ಜಿ

ಸಂಘಟನೆಗಳ ಪ್ರತಿನಿಧಿಗಳಾಗಿ ಬಂದ ಅವರು ಡಬ್ಲ್ಯು. ಸಿ. ಬ್ಯಾನರ್ಜಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದರು. ಎ. ಒ. ಹ್ಯೂಮ್ ಎಂಬ ಮಾಜಿ ಬ್ರಿಟಿಷ್ ಅಧಿಕಾರಿಯು ಇಂತಹ ಒಂದು ಸಭೆ ಸೇರಲು ಕಾರಣನಾಗಿದ್ದನು.

ಇಂಡಿಯನ್ ನ್ಯಾಶನಲ್ ಕಾಂಗ್ರೆಸಿನ ಪ್ರಥಮ ಸಮ್ಮೇಳನದಲ್ಲಿ ಭಾಗವಹಿಸಿದವರು.

ಇಂಡಿಯನ್ ನ್ಯಾಶನಲ್ ಕಾಂಗ್ರೆಸಿನ ಪ್ರಧಾನ ಉದ್ದೇಶಗಳು:

- ಭಾರತದ ವಿವಿಧ ಭಾಗಗಳಲ್ಲಿರುವ ರಾಜಕೀಯ ಕಾರ್ಯಕರ್ತರ ಮಧ್ಯೆ ಸೌಹಾರ್ದವನ್ನು ಬೆಳೆಸುವುದು.
- ಜಾತಿ, ಮತ, ಪ್ರದೇಶ ಪರವಾದ ಚಿಂತನೆಗಳಿಗೆ ಅತೀತವಾಗಿ ರಾಷ್ಟ್ರೀಯ ಪ್ರಜ್ಞೆಯನ್ನು ಬೆಳೆಸುವುದು.
- ಭಾರತೀಯರ ಸಮಸ್ಯೆಗಳನ್ನು ಅಧಿಕಾರಿಗಳ ಗಮನಕ್ಕೆ ತರುವುದು.

ಇಂಡಿಯನ್ ನ್ಯಾಶನಲ್ ಕಾಂಗ್ರೆಸಿನ ರೂಪೀಕರಣದೊಂದಿಗೆ ಬ್ರಿಟಿಷ್ ವಿರೋಧಿ ಚಳುವಳಿಯು ಒಗ್ಗಟ್ಟಿನ ಸ್ವರೂಪ ತಾಳಿತು. ಬ್ರಿಟಿಷರ ಆಧಿಪತ್ಯಕ್ಕೆದುರಾಗಿ ನಡೆದ ಒಗ್ಗಟ್ಟಿನ ಹೋರಾಟಗಳನ್ನು ರಾಷ್ಟ್ರೀಯ ಚಳುವಳಿಯೆಂದು ಕರೆಯುತ್ತೇವೆ. ಹೋರಾಟಗಳ ಸ್ವರೂಪದ ಆಧಾರದಲ್ಲಿ ರಾಷ್ಟ್ರೀಯ ಚಳುವಳಿಯನ್ನು ಮೂರು ಹಂತಗಳಾಗಿ ವಿಭಾಗಿಸಬಹುದು.

- ಮಂದಗಾಮಿ ರಾಷ್ಟ್ರೀಯತೆಯ ಕಾಲಘಟ್ಟ
- ತೀವ್ರಗಾಮಿ ರಾಷ್ಟ್ರೀಯತೆಯ ಕಾಲಘಟ್ಟ
- ಗಾಂಧೀಜಿಯವರ ಕಾಲಘಟ್ಟ

1885ರಿಂದ 1905ರ ವರೆಗಿನ ಕಾಲಘಟ್ಟವು ಮಂದಗಾಮಿ ರಾಷ್ಟ್ರೀಯತೆಯ ಕಾಲವಾಗಿತ್ತು. ಇದರ ಆರಂಭ ಕಾಲದ ನೇತಾರರು ಇಂಗ್ಲೀಷ್ ವಿದ್ಯಾಭ್ಯಾಸ ಪಡೆದವರಾಗಿದ್ದರು. ದಾದಾಬಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ, ಬದರುದ್ದೀನ್ ತೈಯಬ್ಜಿ, ಫಿರೋಜ್ ಷಾ ಮೆಹ್ತಾ ಮೊದಲಾದವರು ಅವರಲ್ಲಿ ಪ್ರಮುಖರು. ದೂರುಗಳು, ಸೂಚನೆ, ಮನವಿಗಳು ಮತ್ತು ವಿರೋಧಿಸುವಿಕೆಯ ಮೂಲಕ ಸಾರ್ವಜನಿಕರ ಆವಶ್ಯಕತೆಗಳನ್ನು ಬ್ರಿಟಿಷ್ ಸರಕಾರದ ಗಮನಕ್ಕೆ ತರಲು ಅವರು ಪ್ರಯತ್ನಿಸಿದರು. ಆದರೆ ಈ ಬೇಡಿಕೆಗಳನ್ನು ಬ್ರಿಟಿಷ್ ಅಧಿಕಾರಿಗಳು ಸೂಕ್ತ ರೀತಿಯಲ್ಲಿ ಪರಿಗಣಿಸಲಿಲ್ಲ.

ಗೋಪಾಲಕೃಷ್ಣ ಗೋಖಲೆ

ಬದರುದ್ದೀನ್ ತೈಯಬ್ಜಿ

ಫಿರೋಜ್ ಷಾ ಮೆಹ್ತಾ

ಬ್ರಿಟಿಷರ ಆಡಳಿತದಲ್ಲಿ ಭಾರತವು ಬಡತನದ ಕಡೆಗೆ ಹೇಗೆ ಸಾಗಿತೆಂದು ಇವರು ಅಧ್ಯಯನ ನಡೆಸಿದರು. ಇವರು ನಡೆಸಿದ ಅಧ್ಯಯನವು ಭಾರತದ ರಾಷ್ಟ್ರೀಯ ಚಳುವಳಿಗೆ ಭದ್ರವಾದ ತಳಹದಿಯನ್ನು ಹಾಕಿತು.

ಸೋರಿಕೆಯ ಸಿದ್ಧಾಂತ

ದಾದಾಬಾಯಿ ನವರೋಜಿ

ಸೋರಿಕೆಯ ಸಿದ್ಧಾಂತವು ದಾದಾಬಾಯಿ ನವರೋಜಿಯವರ ಪ್ರಧಾನ ಕೊಡುಗೆಯಾಗಿದೆ. ಭಾರತದ ಸಂಪತ್ತನ್ನು ಹಲವು ವಿಧದಲ್ಲಿ ಸೂರೆ ಮಾಡಿ ಇಂಗ್ಲೆಂಡಿಗೆ ಕೊಂಡುಹೋಗಿದ್ದರು. ಈ ಆರ್ಥಿಕ ಶೋಷಣೆಯು ಸಂಬಳದ ರೂಪದಲ್ಲಿ, ಕೊಡುಗೆಯ ರೂಪದಲ್ಲಿ ಮತ್ತು ತೆರಿಗೆಯ ರೂಪದಲ್ಲಿ ನಡೆದಿತ್ತು. ಈ ಸೋರಿಕೆಯೇ ಭಾರತದ ಬಡತನಕ್ಕೆ ಮುಖ್ಯ ಕಾರಣ ಎಂದು ದಾದಾಬಾಯಿ ನವರೋಜಿಯವರು ಸಮರ್ಥಿಸಿದರು.

ಬ್ರಿಟಿಷರ ಧೋರಣೆಗಳನ್ನು ಎತ್ತಿ ತೋರಿಸಲು ಮಂದಗಾಮಿಗಳು ನಿರ್ವಹಿಸಿದ ಪಾತ್ರವನ್ನು ವಿಶ್ಲೇಷಿಸಿರಿ.

ಬಂಗಾಳದ ವಿಭಜನೆ

ಬಂಗಾಳವನ್ನು ಕೇಂದ್ರೀಕರಿಸಿ ಆಂಗ್ಲರು ಭಾರತವನ್ನು ಆಳಿದರು. ವಿವಿಧ ಜನವಿಭಾಗಗಳಲ್ಲೊಳಗೊಂಡ ಇಲ್ಲಿಯ ಜನರು ಸಹೋದರರಂತೆ ಜೀವಿಸುತ್ತಿದ್ದರು. ಬ್ರಿಟಿಷ್ ಸರಕಾರದ ಧೋರಣೆಗಳನ್ನು ವಿರೋಧಿಸುವ ಅನೇಕ ಕಾರ್ಯಚಟುವಟಿಕೆಗಳನ್ನು ಅವರು ಕೈಗೊಂಡರು.

"ಒಗ್ಗಟ್ಟಿನಿಂದ ಇರುವ ಬಂಗಾಳ ಒಂದು ಪ್ರಬಲ ಶಕ್ತಿಯಾಗಿದೆ. ಬಂಗಾಳವನ್ನು ವಿಭಜಿಸಿದರೆ ಅದರ ಶಕ್ತಿ ಕಡಿಮೆಯಾಗಬಹುದು. ನಮ್ಮನ್ನು ಎದುರಿಸುವವರ ಸಾಮರ್ಥ್ಯ ಕಡಿಮೆಯಾಗಬಹುದು". 1904ರಲ್ಲಿ ಬ್ರಿಟಿಷರ ಆಧಿಪತ್ಯದಲ್ಲಿದ್ದ ಭಾರತದ ಗೃಹ ಕಾರ್ಯದರ್ಶಿಯಾಗಿದ್ದ ರಿಸ್ಲೆ ಬಂಗಾಳದಲ್ಲಿ ನೆಲೆನಿಂತಿದ್ದ ಜನರ ಒಗ್ಗಟ್ಟಿನ ಕುರಿತು ಹೇಳಿದ ಮಾತಿದು. ಬ್ರಿಟಿಷರ ಆಡಳಿತಕ್ಕೆದುರಾಗಿ ಬೆಳೆದು ಬರುವ ಸಂಘಟಿತ ಶಕ್ತಿಯಾಗಿ ಬಂಗಾಳವನ್ನು ಅಧಿಕಾರಿಗಳು ಕಂಡರು. ಈ ಸಂದರ್ಭದಲ್ಲಿ ವೈಸರಾಯಿಯಾಗಿದ್ದ ಕರ್ಜನ್ ಪ್ರಭುವು 1905 ರಲ್ಲಿ ಬಂಗಾಳವನ್ನು ಎರಡಾಗಿ ವಿಭಜಿಸಿದನು.

1905 ರಲ್ಲಿ ವಿಭಜನೆಗೊಂಡ ಬಂಗಾಳದ ಭೂಪಟ

ಬಂಗಾಳವನ್ನು ವಿಭಜಿಸಲು ಬ್ರಿಟಿಷರನ್ನು ಪ್ರೇರೇಪಿಸಿದ ಘಟಕಗಳು ಯಾವುವು?

ರಾಷ್ಟ್ರೀಯ ಪತ್ರಿಕೆಗಳು, ಕವಿಗಳು ಮತ್ತು ಸಮಾಜ ಸುಧಾರಕರು ಬಂಗಾಳದ ವಿಭಜನೆಯನ್ನು ವಿರೋಧಿಸಿದರು. ಮಹಾಕವಿ ರವೀಂದ್ರನಾಥ ಠಾಗೋರರು ಬಂಗಾಳ ವಿಭಜನೆಗೆದುರಾಗಿ ತಮ್ಮ ರಾಷ್ಟ್ರೀಯ ತೀರ್ಮಾನವನ್ನು ಹೀಗೆ ಸ್ಪಷ್ಟಪಡಿಸಿದರು: "ಪಶ್ಚಿಮ ಬಂಗಾಳ ಮತ್ತು ಪೂರ್ವ ಬಂಗಾಳವು ಒಂದು ಹೃದಯದ ಎರಡು ಕೋಣೆಗಳಾಗಿವೆ. ಇವು ಗಂಗೆ ಮತ್ತು ಬ್ರಹ್ಮಪುತ್ರಗಳು ಸಂಗಮಿಸುವ ಮತ್ತು ಫಲವತ್ತಾಗಿಸುವ ಎರಡು ಪ್ರದೇಶಗಳಾಗಿವೆ. ಬಂಗಾಳದ ನರಗಳಲ್ಲಿ ಹರಿಯುವುದು ಈ ಕೋಣೆಗಳಿಂದ ಉದ್ಭವಿಸುವ ಬಿಸಿರಕ್ತವಾಗಿದೆ."



ರವೀಂದ್ರನಾಥ ಠಾಗೋರ್

ಬಂಗಾಳದ ವಿಭಜನೆಗೆದುರಾಗಿ ಪ್ರತಿಭಟನೆಯನ್ನು ಸೂಚಿಸುವ ಪೋಸ್ಟರ್ ತಯಾರಿಸಿರಿ.

ಬಂಗಾಳ ಉರಿಯುತ್ತಿದೆ

ವಿಭಜನೆಗೆದುರಾದ ಹೋರಾಟವು ಬಂಗಾಳದ ಎಲ್ಲೆಡೆ ಹರಡಿತು. ಜನರು ಬಂಗಾಳ ವಿಭಜನೆಗೆದುರಾಗಿ ಯಾವೆಲ್ಲಾ ರೀತಿಯಲ್ಲಿ ಪ್ರತಿಭಟಿಸಿದರು?

- ಪ್ರತಿಭಟನೆಯ ಮೆರವಣಿಗೆಗಳನ್ನು ಸಂಘಟಿಸಿದರು.
- ವಿದೇಶಿ ವಸ್ತುಗಳನ್ನು ಮಾರಾಟ ಮಾಡುವ ಅಂಗಡಿಗಳಿಗೆ ನಿರ್ಬಂಧ ಹೇರಿದರು.
- ವಿದೇಶಿ ಬಟ್ಟೆಬರೆಗಳನ್ನು ಉರಿಸಿ ನಾಶಗೊಳಿಸಿದರು.
- ಸ್ವದೇಶಿ ಉತ್ಪನ್ನಗಳನ್ನು ಬಳಸಲು ಪ್ರೇರೇಪಿಸಿದರು.
- ಬ್ರಿಟಿಷರಿಗೆದುರಾಗಿ ಮೆರವಣಿಗೆಗಳನ್ನೂ ಸಾರ್ವಜನಿಕ ಸಭೆಗಳನ್ನೂ ನಡೆಸಿದರು.

ಸಕ್ಕರೆಗೂ ನಿಯಂತ್ರಣ

ಸ್ವದೇಶಿ ಉತ್ಪನ್ನಗಳನ್ನು ಬಳಸಿರಿ, ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿರಿ ಎಂಬುದು ಬಂಗಾಳ ವಿಭಜನೆಯ ವಿರುದ್ಧವಾದ ಹೋರಾಟದ ಪ್ರಧಾನವಾದ ಘೋಷಣೆಯಾಗಿತ್ತು. ಈ ರೀತಿಯಲ್ಲಿ ವಿದೇಶದಲ್ಲಿ ತಯಾರಿಸಿದ ಸಕ್ಕರೆಯನ್ನು ಬಳಸಿ ತಯಾರಿಸಿದ ಚಾ ಸತ್ಕಾರವನ್ನು ಮಾಡುವ ವಿವಾಹ ಸಮಾರಂಭಗಳನ್ನು ಬಹಿಷ್ಕರಿಸಲು ಕರೆ ನೀಡಿದರು. ಸಕ್ಕರೆಗೆ ಬದಲು ಬೆಲ್ಲವನ್ನುಪಯೋಗಿಸಲು ರಾಷ್ಟ್ರೀಯವಾದಿಗಳು ಪ್ರೋತ್ಸಾಹವನ್ನಿತ್ತರು.

ಹೋರಾಟದ ತೀವ್ರ ಸ್ವರೂಪವನ್ನು ಗಮನಿಸಿದ ಸರಕಾರವು ಬಂಗಾಳದ ವಿಭಜನೆಯನ್ನು ಹಿಂತೆಗೆಯಬೇಕಾಯಿತು.

ಬಂಗಾಳದ ವಿಭಜನೆ ಮತ್ತು ವಿಭಜನೆಗೆದುರಾದ ಹೋರಾಟಗಳನ್ನು ಆಧಾರವಾಗಿಟ್ಟುಕೊಂಡು ತರಗತಿಯಲ್ಲಿ ಒಂದು ಪತ್ರಿಕೆಯನ್ನು ತಯಾರಿಸಿರಿ.

ಬಂಗಾಳ ವಿಭಜನೆಯ ವಿರುದ್ಧ ನಡೆದ ಹೋರಾಟಗಳು ಮಂದಗಾಮಿ ಕಾಲಘಟ್ಟದ ರಾಷ್ಟ್ರೀಯ ಹೋರಾಟಗಳಿಗಿಂತ ಹೇಗೆ ಭಿನ್ನವಾಗಿದ್ದುವು?

ಸ್ವಾತಂತ್ರ್ಯ ನನ್ನ ಜನ್ಮಸಿದ್ಧ ಹಕ್ಕು

ಬಂಗಾಳದ ವಿಭಜನೆ ಮತ್ತು ಅನಂತರ ನಡೆದ ಹೋರಾಟಗಳು ರಾಷ್ಟ್ರೀಯ ಚಳುವಳಿಯನ್ನು ಹೊಸ ಹಾದಿಯತ್ತ ಮುನ್ನಡೆಸಿತು. ಈ ಕಾಲಘಟ್ಟವನ್ನು ತೀವ್ರಗಾಮಿ ರಾಷ್ಟ್ರೀಯತೆಯ ಕಾಲಘಟ್ಟವೆಂದು ಕರೆಯುತ್ತೇವೆ. ಬಾಲಗಂಗಾಧರ ತಿಲಕ್, ಬಿಪಿನ್ ಚಂದ್ರಪಾಲ್, ಲಾಲಾ ಲಜಪತ್ ರಾಯ್ ಇದರ ಪ್ರಧಾನ ನೇತಾರರಾಗಿದ್ದರು. 'ಲಾಲ್, ಬಾಲ್, ಪಾಲ್' ಎಂಬ ಕಿರುನಾಮಗಳಿಂದ ಇವರನ್ನು ಗುರುತಿಸಲಾಗುತ್ತಿತ್ತು.

ತೀವ್ರ ರಾಷ್ಟ್ರೀಯವಾದಿಗಳಾದ ಇವರ ಕಾರ್ಯಚಟುವಟಿಕೆಗಳು ದೇಶದ ಎಲ್ಲರ ಗಮನವನ್ನು ಸೆಳೆಯುವುದರೊಂದಿಗೆ ಜನರನ್ನು ಪ್ರಚೋದಿಸಿದವು. ಬಾಲಗಂಗಾಧರ ತಿಲಕರು ತೀವ್ರಗಾಮಿಗಳ ಮುಖಂಡರಾಗಿದ್ದರು. ಅವರನ್ನು ಜನರು ಆದರದಿಂದ 'ಲೋಕಮಾನ್ಯ' ರೆಂದು ಕರೆದರು. ಮರಾಠ ಮತ್ತು ಕೇಸರಿಯು ಅವರು ಆರಂಭಿಸಿದ ಎರಡು ಪ್ರಮುಖ ಪತ್ರಿಕೆಗಳಾಗಿದ್ದುವು. "ಸ್ವಾತಂತ್ರ್ಯವು ನನ್ನ ಜನ್ಮಸಿದ್ಧ ಹಕ್ಕು, ನಾನದನ್ನು ಪಡೆದೇ ತೀರುವೆನು" ಎಂಬುದು ತಿಲಕರ ಪ್ರಸಿದ್ಧವಾದ ಘೋಷಣೆಯಾಗಿತ್ತು.

ಲಾಲಾ ಲಜಪತ್‌ರಾಯ್, ಬಾಲಗಂಗಾಧರ ತಿಲಕ್, ಬಿಪಿನ್‌ಚಂದ್ರಪಾಲ್

ಕೆಳಗೆ ನೀಡಿದ ಪಟ್ಟಿಯನ್ನು ಪೂರ್ತಿಗೊಳಿಸಿರಿ.

ಮಂದಗಾಮಿ ನಾಯಕರು	ತೀವ್ರಗಾಮಿ ನಾಯಕರು
ಗೋಪಾಲಕೃಷ್ಣ ಗೋಖಲೆ	ಬಾಲಗಂಗಾಧರ ತಿಲಕ್

ರಾಷ್ಟ್ರೀಯ ಚಳುವಳಿಯಲ್ಲಿ ಮಂದಗಾಮಿಗಳ ಮತ್ತು ತೀವ್ರಗಾಮಿಗಳ ಕಾರ್ಯ ಚಟುವಟಿಕೆಗಳನ್ನು ಹೋಲಿಸಿರಿ.

ಅಖಿಲ ಭಾರತ ಮುಸ್ಲಿಂಲೀಗ್

ಬಂಗಾಳ ವಿಭಜನೆಯ ವಿರುದ್ಧವಾದ ಹೋರಾಟದ ಕಾಲದಲ್ಲಿ ಭಾರತದಲ್ಲಿ ಅಖಿಲ ಭಾರತ ಮುಸ್ಲಿಂ ಲೀಗ್ ರೂಪುಗೊಂಡಿತು. 1906ರಲ್ಲಿ ಢಾಕ್ಕಾದಲ್ಲಿ ಆಗಾಖಾನ್ ಮತ್ತು ನವಾಬ್ ಸಲೀಮುಲ್ಲಖಾನರು ಜೊತೆಗೂಡಿ ಈ ಸಂಘಟನೆಯನ್ನು ರೂಪಿಸಿದರು.

ಸೂರತ್ ವಿಭಜನೆ

ಬಂಗಾಳ ವಿಭಜನೆಯ ವಿರುದ್ಧವಾದ ಹೋರಾಟಗಳ ಮೂಲಕ ರಾಷ್ಟ್ರೀಯ ಚಳುವಳಿಯು ತೀವ್ರಗೊಂಡಿತು. ಈ ಸಂದರ್ಭದಲ್ಲಿ ಇಂಡಿಯನ್ ನ್ಯಾಶನಲ್ ಕಾಂಗ್ರೆಸಿನಲ್ಲಿದ್ದ ಮಂದಗಾಮಿಗಳು ಮತ್ತು ತೀವ್ರಗಾಮಿಗಳ ಮಧ್ಯೆ ಇದ್ದ ಭಿನ್ನಾಭಿಪ್ರಾಯಗಳು ಉಲ್ಬಣಗೊಂಡವು. 1907ರ ಕಾಂಗ್ರೆಸಿನ ಅಖಿಲ ಭಾರತ ಸಮ್ಮೇಳನವು ಸೂರತ್ತಿನಲ್ಲಿ ನಡೆಯಿತು. ಸಮ್ಮೇಳನದಲ್ಲಿ ಕಾಂಗ್ರೆಸ್ ಇಬ್ಭಾಗವಾಯಿತು. ರಾಷ್ಟ್ರೀಯ ಚಳುವಳಿಯ ಚಟುವಟಿಕೆಗಳು ತಾತ್ಕಾಲಿಕವಾಗಿ ದುರ್ಬಲಗೊಂಡವು.

ಹೋಂ ರೂಲ್ ಚಳುವಳಿ

ಪ್ರಥಮ ಜಾಗತಿಕ ಯುದ್ಧಾನಂತರ ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡುವರೆಂಬ ನಿರೀಕ್ಷೆಯಿಂದ ಯುದ್ಧದಲ್ಲಿ ಕಾಂಗ್ರೆಸ್ ಬ್ರಿಟನ್‌ನನ್ನು ಬೆಂಬಲಿಸಿತು. ಈ ಸಂದರ್ಭದಲ್ಲಿ ಭಾರತದ ರಾಷ್ಟ್ರೀಯ ಚಳುವಳಿಯು ಸಜೀವವಾಗಿ ನೆಲೆನಿಲ್ಲುವಂತೆ ಮಾಡಿದುದು ಬಾಲಗಂಗಾಧರ ತಿಲಕರು ಮತ್ತು ಅನ್ನಿಬೆಸೆಂಟರು ಆರಂಭಿಸಿದ ಹೋಂ ರೂಲ್ ಚಳುವಳಿಯಾಗಿದೆ.

ಅನ್ನಿ ಬೆಸೆಂಟ್

ಭಾರತದ ಸಂಸ್ಕೃತಿಯಿಂದ ಪ್ರಭಾವಿತರಾಗಿ 1893ರಲ್ಲಿ ಭಾರತದ ಪೌರತ್ವವನ್ನು ಸ್ವೀಕರಿಸಿದ ಐರಿಷ್ ಮಹಿಳೆ. 1916 ರಲ್ಲಿ ಹೋಂ ರೂಲ್ ಚಳುವಳಿಯನ್ನು ಆರಂಬಿಸಿದರು.

ಲಕ್ನೋ ಒಪ್ಪಂದ

ಹೋಂ ರೂಲ್ ಚಳುವಳಿಯು ಸಜೀವವಾಗಿದ್ದ ಕಾಲದಲ್ಲಿ 1916ರಲ್ಲಿ ಇಂಡಿಯನ್ ನ್ಯಾಶನಲ್ ಕಾಂಗ್ರೆಸಿನ ಲಕ್ನೋ ಸಮ್ಮೇಳನವು ಜರಗಿತು. ಸೂರತ್ ಸಮ್ಮೇಳನದಲ್ಲಿ ಇಬ್ಭಾಗವಾದ ಮಂದಗಾಮಿಗಳು ಮತ್ತು ತೀವ್ರಗಾಮಿಗಳು ಒಂದಾಗಿ ಕಾರ್ಯನಿರ್ವಹಿಸಲು ತೀರ್ಮಾನಿಸಿದರು. ಅದಲ್ಲದೆ ಅಖಿಲ ಭಾರತ ಮುಸ್ಲಿಂ ಲೀಗ್‌ನೊಂದಿಗೆ ಸಹಕರಿಸಿಕೊಂಡು ಬ್ರಿಟಿಷರ ವಿರುದ್ಧ ಹೋರಾಟಗಳನ್ನು ಸಂಘಟಿಸಲು ತೀರ್ಮಾನಿಸಿದರು.

- ವಿಚಾರಗೋಷ್ಠಿಗಾಗಿ ಪ್ರಬಂಧವನ್ನು ತಯಾರಿಸಿರಿ.
  - 'ಭಾರತದ ರಾಷ್ಟ್ರೀಯ ಚಳುವಳಿಯ ಗತಿಯ ಮೇಲೆ ಪ್ರಭಾವಬೀರಿದ ಬಂಗಾಳದ ವಿಭಜನೆ'

    ವಿಷಯ ವಿಸ್ತಾರ:
  - ತೀವ್ರರಾಷ್ಟ್ರೀಯವಾದದ ಬೆಳವಣಿಗೆ
  - ಬಂಗಾಳದ ವಿಭಜನೆಯ ವಿರುದ್ಧವಾದ ಹೋರಾಟಗಳು

ಕ್ರೋಡೀಕರಣ

- ಭಾರತದಲ್ಲಿ ಸಾಕಷ್ಟು ಸಾಮಾಜಿಕ ಅನಾಚಾರಗಳು ನೆಲೆನಿಂತಿದ್ದುವು.
- ರಾಜಾರಾಮ್ ಮೋಹನರಾಯ್, ದಯಾನಂದ ಸರಸ್ವತಿ, ಜೋತಿರಾವು ಫುಲೆ, ಪಂಡಿತ್ ರಮಾಬಾಯಿ, ಸರ್ ಸೈಯದ್ ಅಹಮ್ಮದ್ ಖಾನ್, ಸ್ವಾಮಿ ವಿವೇಕಾನಂದ ಮೊದಲಾದವರು ಭಾರತದ ನವೋತ್ಥಾನದ ನಾಯಕರಾಗಿದ್ದರು.
- 1857ರ ಪ್ರಥಮ ಸ್ವಾತಂತ್ರ್ಯ ಹೋರಾಟದ ನಂತರ ಭಾರತದಲ್ಲಿ ರಾಷ್ಟ್ರೀಯತೆಯು ಬೆಳೆದುಬಂತು.
- 'ವಿಭಜಿಸಿ ಆಳು' ಎಂಬ ಬ್ರಿಟಿಷರ ಕುತಂತ್ರದ ಭಾಗವಾಗಿ ಬಂಗಾಳದ ವಿಭಜನೆಯನ್ನು ಮಾಡಲಾಯಿತು.
- ಹೋಂ ರೂಲ್ ಚಳುವಳಿಯು ರಾಷ್ಟ್ರೀಯ ಚಳುವಳಿಗೆ ಉತ್ತೇಜನವನ್ನು ಕೊಟ್ಟಿತು.

ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಭಾರತದಲ್ಲಿ ಅನೇಕ ಸಾಮಾಜಿಕ ಅನಾಚಾರಗಳು ನೆಲೆನಿಂತಿದ್ದುವು ಎಂದು ತಿಳಿದುಕೊಳ್ಳುವುದು.
- ರಾಜಾರಾಮ್ ಮೋಹನರಾಯ್, ಸ್ವಾಮಿ ದಯಾನಂದ ಸರಸ್ವತಿ, ಜೋತಿರಾವು ಫುಲೆ, ಸರ್ ಸೈಯದ್ ಅಹಮ್ಮದ್ ಖಾನ್, ಪಂಡಿತ್ ರಮಾಬಾಯಿ, ಸ್ವಾಮಿ ವಿವೇಕಾನಂದ ಎಂಬೀ ವ್ಯಕ್ತಿಗಳ ಸಮಾಜ ಸುಧಾರಣ ಚಟುವಟಿಕೆಗಳ ಕುರಿತು ತಿಳುವಳಿಕೆಯನ್ನು ಗಳಿಸುವುದು.
- ಸಮಾಜದಲ್ಲಿದ್ದ ಅನ್ಯಾಯಗಳಿಗೆದುರಾಗಿ ಕಾರ್ಯಪ್ರವೃತ್ತರಾದ ವ್ಯಕ್ತಿಗಳ ಮತ್ತು ಚಳುವಳಿಗಳ ಪಾತ್ರವನ್ನು ವಿಶ್ಲೇಷಿಸುವುದು.
- ಇಂದು ಜಾರಿಯಲ್ಲಿರುವ ಸಾಮಾಜಿಕ ಕೆಡುಕುಗಳಿಗೆದುರಾಗಿ ಪ್ರತಿಕ್ರಿಯೆ ವ್ಯಕ್ತಪಡಿಸುವ ಮನೋಭಾವವನ್ನು ಗಳಿಸುವುದು.
- ಭಾರತದ ರಾಷ್ಟ್ರೀಯತೆಯು ರೂಪುಗೊಳ್ಳಲು ಕಾರಣವಾದ ಘಟಕಗಳ ಕುರಿತು ತಿಳಿದುಕೊಳ್ಳುವುದು.
- ವಿಭಜಿಸಿ ಆಳುವುದು ಎಂಬ ಬ್ರಿಟಿಷರ ಕುತಂತ್ರದ ಭಾಗವಾಗಿ ಬಂಗಾಳವನ್ನು ವಿಭಜಿಸಲಾಯಿತೆಂಬುದನ್ನು ತಿಳಿದುಕೊಳ್ಳುವುದು.

ಮೌಲ್ಯ ನಿರ್ಣಯ ಮಾಡುವ

- ಭಾರತದಲ್ಲಿದ್ದ ಸಾಮಾಜಿಕ ಅನಾಚಾರಗಳನ್ನು ತಡೆಗಟ್ಟಲು ನವೋತ್ಥಾನ ನಾಯಕರು ನಿರ್ವಹಿಸಿದ ಪಾತ್ರದ ಕುರಿತು ಒಂದು ಟಿಪ್ಪಣಿ ತಯಾರಿಸಿರಿ.

‘ಎ’ ವಿಭಾಗದಲ್ಲಿ ಕೊಟ್ಟಿರುವವುಗಳಿಗೆ ‘ಬಿ’ ವಿಭಾಗದಿಂದ ಯೋಗ್ಯವಾದುದನ್ನು ಆರಿಸಿ ಬರೆಯಿರಿ.

ಎ	ಬಿ
ಬ್ರಹ್ಮ ಸಮಾಜ	ಸ್ವಾಮಿ ವಿವೇಕಾನಂದ
ಆರ್ಯ ಸಮಾಜ	ರಾಜಾರಾಮ್ ಮೋಹನ ರಾಯ್
ಆರ್ಯ ಮಹಿಳಾ ಸಭೆ	ಸ್ವಾಮಿ ದಯಾನಂದ ಸರಸ್ವತಿ
ಶ್ರೀರಾಮಕೃಷ್ಣ ಮಿಶನ್	ಪಂಡಿತ್ ರಮಾಬಾಯಿ

- ಪಟ್ಟಿಯನ್ನು ಪೂರ್ತಿಗೊಳಿಸಿರಿ.

1	ಗೋಪಾಲಕೃಷ್ಣ ಗೋಖಲೆ	ಮಂದಗಾಮಿ ರಾಷ್ಟ್ರೀಯತೆ
2	ಬಾಲಗಂಗಾಧರ ತಿಲಕ್	.....
3	.....	ಹೋಂ ರೂಲ್ ಚಳುವಳಿ
4	ಆಗಾಖಾನ್	.....

- ಕೆಳಗೆ ನೀಡಲಾದ ವಿಚಾರಗಳ ಆಧಾರದಲ್ಲಿ ಟಿಪ್ಪಣಿ ತಯಾರಿಸಿರಿ
  - ಸ್ವದೇಶಿ ಚಳುವಳಿ
  - ಹೋಂ ರೂಲ್ ಚಳುವಳಿ

ಮುಂದುವರಿದ ಚಟುವಟಿಕೆಗಳು

- ಭಾರತದ ನವೋತ್ಥಾನ ನಾಯಕರ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿರಿ.
- ನಮ್ಮ ಊರಿನಲ್ಲಿ ಇಂದು ಯಾವುದಾದರೂ ರೀತಿಯ ಸಾಮಾಜಿಕ ಅನಾಚಾರಗಳು ಜಾರಿಯಲ್ಲಿವೆಯೆ? ತರಗತಿಯಲ್ಲಿ ಚರ್ಚೆಯನ್ನು ನಡೆಸಿರಿ.
- ಸಾಮಾಜಿಕ ಅನಾಚಾರಗಳಿಗೆದುರಾದ ಆಶಯಗಳನ್ನು ಒಳಗೊಂಡಿರುವ ಸಾಹಿತ್ಯ ಕೃತಿಗಳನ್ನು ಕಂಡುಹಿಡಿಯಿರಿ.
- ದೇಶಪ್ರೇಮವನ್ನುಂಟುಮಾಡುವ ಕವಿತೆಗಳನ್ನು ಸಂಗ್ರಹಿಸಿರಿ.

5 ಆರ್ಥಿಕ ಮೂಲಗಳು

ಶಾಲೆಯ ಪ್ರತಿಯೊಂದು ಮಗುವಿಗೂ ಸಂಬಂಧಿಸಿದ ಎಲ್ಲ ಮಾಹಿತಿಗಳನ್ನು ಸಂಗ್ರಹಿಸಿ ದಾಖಲಿಸುವುದಕ್ಕಾಗಿ ಜಾರಿಗೊಳಿಸಿದ 'ಸಂಪೂರ್ಣ' ಎಂಬ ಯೋಜನೆಯ ಕುರಿತು ನೀವು ಕೇಳಿರಬಹುದಲ್ಲವೇ. ಇದರ ಅಂಗವಾಗಿ ಅಧ್ಯಾಪಕರೊಬ್ಬರು ತಮ್ಮ ತರಗತಿಯ ಮಕ್ಕಳ ಹೆತ್ತವರು ಮಾಡುವ ಕೆಲಸಗಳ ಪಟ್ಟಿಯನ್ನು ತಯಾರಿಸಿದರು. ಅದರ ಒಂದು ಭಾಗವನ್ನು ಕೆಳಗೆ ಕೊಡಲಾಗಿದೆ.

ಕೆಲಸಗಳು
• ಕೃಷಿ ಕೆಲಸ
• ಹೋಟೆಲಿನ ಕೆಲಸ
• ಅಧ್ಯಾಪನ ವೃತ್ತಿ
• ಕೈಗಾರಿಕಾ ಕೆಲಸ
• ಸರಕಾರಿ ಕೆಲಸ
• ಚಿಕಿತ್ಸೆ

ಪಟ್ಟಿ - 1

ಈ ಕೆಲಸಗಳೆಲ್ಲಾ ನಿಮಗೆ ಪರಿಚಿತವಲ್ಲವೇ. ಆದಾಯವನ್ನು ಕಂಡುಕೊಳ್ಳಲು ಸಹಾಯಕವಾಗುವ ಕಾರಣ ಇವುಗಳನ್ನು ಆರ್ಥಿಕ ಚಟುವಟಿಕೆಗಳೆಂದು ಕರೆಯುತ್ತಾರೆ. ನಿಮ್ಮ ಸುತ್ತಲೂ ಈ ರೀತಿಯ ಅನೇಕ ಆರ್ಥಿಕ ಚಟುವಟಿಕೆಗಳು ನಡೆಯುತ್ತಿವೆಯಲ್ಲವೇ. ಅವುಗಳನ್ನು ಕಂಡುಹಿಡಿದು ಪಟ್ಟಿ 1 ನ್ನು ಮುಂದುವರಿಸಿ ಬರೆಯಿರಿ.

ಈ ಆರ್ಥಿಕ ಚಟುವಟಿಕೆಗಳಲ್ಲಿ ಕೆಲವು ಕೃಷಿಗೆ ಸಂಬಂಧಿಸಿದವುಗಳಾಗಿವೆ. ಪಟ್ಟಿಯನ್ನು ವಿಶ್ಲೇಷಿಸಿದರೆ ಇತರ ಯಾವೆಲ್ಲ ವಲಯಗಳಲ್ಲಿನ ಚಟುವಟಿಕೆಗಳನ್ನು ಕಂಡುಕೊಳ್ಳಬಹುದು?

- ಕೈಗಾರಿಕೆ
- ಸೇವಾ ವಲಯ

ಪ್ರಾಕೃತಿಕ ಸಂಪನ್ಮೂಲಗಳನ್ನು ನೇರವಾಗಿ ಉಪಯೋಗಿಸಿಕೊಂಡು ಮಾಡುವ ಚಟುವಟಿಕೆಗಳನ್ನೊಳಗೊಂಡ ವಲಯವನ್ನು ಪ್ರಾಥಮಿಕ ವಲಯವೆಂದು ಕರೆಯುವರು. ಕೃಷಿಗೆ ಹೆಚ್ಚಿನ ಪ್ರಧಾನ್ಯವಿರುವ ಕಾರಣ ಇದನ್ನು ಕೃಷಿ ವಲಯವೆಂದೂ ಕರೆಯಲಾಗುತ್ತದೆ. ಪ್ರಾಥಮಿಕ ವಲಯದ ಉತ್ಪನ್ನಗಳನ್ನು ಕಚ್ಚಾವಸ್ತುಗಳನ್ನಾಗಿ ಉಪಯೋಗಿಸಿಕೊಂಡು ಹೊಸ ವಸ್ತುಗಳ ನಿರ್ಮಾಣದ ಚಟುವಟಿಕೆಗಳನ್ನು ನಡೆಸುವ ವಲಯವನ್ನು ದ್ವಿತೀಯ ವಲಯ ಎನ್ನುವರು. ಕೈಗಾರಿಕೆಗೆ ಪ್ರಾಧಾನ್ಯವಿರುವ ಈ ವಲಯವನ್ನು ಕೈಗಾರಿಕಾ ವಲಯ ಎಂದೂ ಕರೆಯುತ್ತಾರೆ. ಪ್ರಾಥಮಿಕ ಮತ್ತು ದ್ವಿತೀಯ ವಲಯಗಳ ಉತ್ಪನ್ನಗಳನ್ನು ಸಂಗ್ರಹಿಸುವುದು ಮತ್ತು ವಿತರಣೆ ಮಾಡುವುದು ಸೇವಾ ವಲಯದ ಚಟುವಟಿಕೆಗಳಾಗಿವೆ. ಇದಲ್ಲದೆ ಸೇವಾ ವಲಯವು ವಿದ್ಯಾಭ್ಯಾಸ, ಸಾರಿಗೆ, ಬ್ಯಾಂಕಿಂಗ್, ಮಾಹಿತಿ ತಂತ್ರಜ್ಞಾನ ಮೊದಲಾದುವುಗಳನ್ನು ಒಳಗೊಂಡಿದೆ. ತೃತೀಯ ವಲಯವು ಎಲ್ಲ ಸೇವಾ ಚಟುವಟಿಕೆಗಳನ್ನು ಒಳಗೊಂಡ ವಲಯವಾಗಿದೆ. ಇದನ್ನು ಸೇವಾ ವಲಯವೆಂದೂ ಕರೆಯುತ್ತಾರೆ.

ಪ್ರಾಥಮಿಕ, ದ್ವಿತೀಯ, ತೃತೀಯ ವಲಯಗಳಲ್ಲಿ ಒಳಗೊಳ್ಳದ ಯಾವುದಾದರೂ ಆರ್ಥಿಕ ಚಟುವಟಿಕೆಗಳಿವೆಯೇ? ಚರ್ಚಿಸಿರಿ.

ಪ್ರಾಥಮಿಕ, ದ್ವಿತೀಯ, ತೃತೀಯ ವಲಯಗಳು ಪರಸ್ಪರ ಹೊಂದಿಕೊಂಡು ನಡೆಸುವ ಚಟುವಟಿಕೆಗಳ ಪರಿಣಾಮವಾಗಿ ಆರ್ಥಿಕ ಬೆಳವಣಿಗೆಯು ಉಂಟಾಗುತ್ತದೆ. ಒಂದು ಉದಾಹರಣೆಯನ್ನು ಗಮನಿಸಿರಿ. ಪ್ರಾಥಮಿಕ ವಲಯದ ಉತ್ಪನ್ನವಾದ ಹತ್ತಿಯು ದ್ವಿತೀಯ ವಲಯವಾದ ಬಟ್ಟೆ ಕೈಗಾರಿಕೆಯ ಕಚ್ಚಾವಸ್ತುವಾಗಿದೆ. ಕೈಗಾರಿಕಾ ವಲಯದ ಬಟ್ಟೆಯನ್ನು ಅಗತ್ಯವಿರುವವರಿಗೆ ತಲುಪಿಸಲು ಸಾರಿಗೆ, ವಾರ್ತಾವಿನಿಮಯ ರಂಗಗಳ ಸಹಾಯ ಅತ್ಯಗತ್ಯವಾಗಿದೆ. ಇವುಗಳೆಲ್ಲ ತೃತೀಯ ವಲಯದ ಸೇವೆಗಳಾಗಿವೆ. ಈ ವಲಯಗಳ ಪರಸ್ಪರ ಸಂಬಂಧವನ್ನು ತೋರಿಸುವ ಚಿತ್ರವನ್ನು ಗಮನಿಸಿರಿ. ಚಿತ್ರಗಳ ಸಹಾಯದಿಂದ ಈ ವಲಯಗಳು ಪರಸ್ಪರ ಹೇಗೆ ಸಂಬಂಧವನ್ನು ಹೊಂದಿವೆಯೆಂದು ಕಂಡುಕೊಳ್ಳುವಿರಲ್ಲವೇ.

ವಲಯಗಳ ಪರಸ್ಪರ ಸಂಬಂಧಗಳನ್ನು ತೋರಿಸುವ ಇನ್ನೊಂದು ಉದಾಹರಣೆಯನ್ನು ಕಂಡುಕೊಳ್ಳಬಹುದಲ್ಲವೇ. ಕೇಂದ್ರ ದತ್ತಾಂಶ ಸಂಗ್ರಹಾಲಯ (ಸೆಂಟ್ರಲ್ ಸ್ಟಾಟಿಸ್ಟಿಕಲ್ ಆಫೀಸ್ - CSO) ವು ಪ್ರಾಥಮಿಕ, ದ್ವಿತೀಯ, ತೃತೀಯ ವಲಯಗಳಲ್ಲಿ ಒಳಗೊಳ್ಳುವ ಆರ್ಥಿಕ ಚಟುವಟಿಕೆಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿರುವಂತೆ ವರ್ಗೀಕರಿಸಿದೆ.

ಪ್ರಾಥಮಿಕ ವಲಯ	ದ್ವಿತೀಯ ವಲಯ	ತೃತೀಯ ವಲಯ
• ಕೃಷಿ ಮತ್ತು ಅನುಬಂಧ ಚಟುವಟಿಕೆಗಳು • ಅರಣ್ಯ ಸಂರಕ್ಷಣೆ • ನೀರಾವರಿ • ಮೀನುಗಾರಿಕೆ • ಗಣಿಗಾರಿಕೆ	• ಕೈಗಾರಿಕೆ • ವಿದ್ಯುತ್ ಉತ್ಪಾದನೆ • ವಾರ್ತಾವಿನಿಮಯ • ಕಟ್ಟಡ ನಿರ್ಮಾಣ	• ವ್ಯಾಪಾರ • ಸಾರಿಗೆ • ಹೋಟೆಲು • ದಾಸ್ತಾನು • ಬ್ಯಾಂಕಿಂಗ್ • ವಿಮೆ • ವಾಣಿಜ್ಯ • ರಿಯಲ್ ಎಸ್ಟೇಟ್ • ಸಾಮಾಜಿಕ ಕ್ಷೇಮ ಚಟುವಟಿಕೆಗಳು

Central Statistical Office (CSO)

ಇದು ಕೇಂದ್ರ ದತ್ತಾಂಶ ಸಂಗ್ರಹ ಮತ್ತು ನಿರ್ವಹಣ ಖಾತೆಯ ಕೈಕೆಳಗೆ ಕಾರ್ಯನಿರ್ವಹಿಸುವ ಸಂಸ್ಥೆಯಾಗಿದೆ.

ಪ್ರಧಾನ ಜವಾಬ್ದಾರಿಗಳು

- ದತ್ತಾಂಶ ಸಂಗ್ರಹದ ಸಂಯೋಜನೆ ಮತ್ತು ವಿಶ್ಲೇಷಣೆಯನ್ನು ಮಾಡುವುದು.
- ಎಲ್ಲ ವಲಯಗಳ ದತ್ತಾಂಶಗಳನ್ನು ಸಂಗ್ರಹಿಸಿ ಯೋಜನಾ ಚಟುವಟಿಕೆಗಳಿಗೆ ಉಪಯೋಗಿಸುವ ರೀತಿಯಲ್ಲಿ ಕ್ರಮೀಕರಿಸುವುದು.
- ದತ್ತಾಂಶಗಳನ್ನುಪಯೋಗಿಸಿ ರಾಷ್ಟ್ರೀಯ ಆದಾಯವನ್ನು ಕಂಡುಹಿಡಿಯುವುದು.

ವಿಸ್ತರಿಸಿ ಬರೆದ ಪಟ್ಟಿ 1ರ ಆರ್ಥಿಕ ಚಟುವಟಿಕೆಗಳನ್ನು ಕೆಳಗೆ ಕೊಟ್ಟಿರುವ ಪಟ್ಟಿಯಲ್ಲಿ ಕ್ರಮೀಕರಿಸಿ ಬರೆಯಿರಿ.

ಪ್ರಾಥಮಿಕ ವಲಯ	ದ್ವಿತೀಯ ವಲಯ	ತೃತೀಯ ವಲಯ

ವಲಯಗಳು ಮತ್ತು ಉದ್ಯೋಗ ಲಭ್ಯತೆ

ನಮ್ಮ ಸುತ್ತಲೂ ಕಾಣುವ ಎಲ್ಲ ಉದ್ಯೋಗಗಳೂ ಪ್ರಾಥಮಿಕ, ದ್ವಿತೀಯ, ತೃತೀಯ ವಲಯಗಳಲ್ಲಿ ಒಳಗೊಂಡಿರುವವುಗಳಾಗಿವೆ. ಭಾರತದಲ್ಲಿ ಪ್ರಾಥಮಿಕ, ದ್ವಿತೀಯ, ತೃತೀಯ ವಲಯಗಳಲ್ಲಿನ ಉದ್ಯೋಗಾವಕಾಶಗಳು

ವ್ಯತ್ಯಸ್ತವಾಗಿವೆ. ಕೆಲವು ವಲಯಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚುತ್ತಿರುವಾಗ ಇನ್ನು ಕೆಲವು ವಲಯಗಳಲ್ಲಿ ಉದ್ಯೋಗಾವಕಾಶಗಳು ಕಡಿಮೆಯಾಗುತ್ತಿರುವುದು ಕಂಡುಬರುತ್ತದೆ. 1993ರಿಂದ 2011ರ ವರೆಗೆ ಪ್ರತಿಯೊಂದು ವಲಯವು ನೀಡುವ ಉದ್ಯೋಗಾವಕಾಶವನ್ನು ವಿವರಿಸುವ ಪಟ್ಟಿಯನ್ನು ಪರಿಶೀಲಿಸಿರಿ.

ಭಾರತದ ಪ್ರತಿಯೊಂದು ವಲಯವು ನೀಡಿದ ಉದ್ಯೋಗಾವಕಾಶದ ಶೇಕಡಾಮಾನ

ವಲಯ	1993	2005	2011
ಪ್ರಾಥಮಿಕ ವಲಯ	64.9	56.5	53.2
ದ್ವಿತೀಯ ವಲಯ	14.2	18.7	21.5
ತೃತೀಯ ವಲಯ	20.9	24.8	25.3
ಒಟ್ಟು	100	100	100

ಪಟ್ಟಿ 2 (Source - Economic Survey 2012 - 13)

ಕೆಳಗೆ ಕೊಡಲಾದ ಸೂಚಕಗಳ ಆಧಾರದಲ್ಲಿ ಪಟ್ಟಿ 2 ನ್ನು ವಿಶ್ಲೇಷಿಸಿ ನಿಮ್ಮ ನಿಗಮನಗಳನ್ನು ಬರೆಯಿರಿ.

ಸೂಚಕಗಳು

- ಯಾವೆಲ್ಲ ವಲಯಗಳಲ್ಲಿನ ಉದ್ಯೋಗಾವಕಾಶಗಳು ಹೆಚ್ಚಾಗುತ್ತಾ ಹೋಗುತ್ತಿವೆ?
- ಎಲ್ಲ ಕಾಲಘಟ್ಟಗಳಲ್ಲಿಯೂ ಉದ್ಯೋಗಾವಕಾಶಗಳು ಹೆಚ್ಚು ಇರುವ ವಲಯ ಯಾವುದು?
- 2011ರಲ್ಲಿ ಪ್ರಾಥಮಿಕ ವಲಯದ ಉದ್ಯೋಗಾವಕಾಶಗಳು ಇತರ ಎರಡು ವಲಯಗಳಲ್ಲಿನ ಉದ್ಯೋಗ ಲಭ್ಯತೆಗಿಂತ ಶೇಕಡಾ ಎಷ್ಟು ಹೆಚ್ಚಾಗಿದೆ?

ಪ್ರಾಥಮಿಕ, ದ್ವಿತೀಯ, ತೃತೀಯ ವಲಯಗಳಲ್ಲಿ ಅತಿ ಹೆಚ್ಚು ಉದ್ಯೋಗಾವಕಾಶಗಳು ಲಭಿಸುವುದು ಪ್ರಾಥಮಿಕ ವಲಯದಲ್ಲಾಗಿದೆಯೆಂದು ತಿಳಿದುಕೊಂಡಿರಲ್ಲವೆ. ಇಲ್ಲಿ ಕೃಷಿ ಮತ್ತು ಅನುಬಂಧ ಚಟುವಟಿಕೆಗಳಲ್ಲಿ ಅತಿ ಹೆಚ್ಚು ಉದ್ಯೋಗಾವಕಾಶಗಳು ಲಭಿಸುತ್ತದೆ. ಈ ವಲಯದ ಚಟುವಟಿಕೆಗಳ ಮೂಲಕ ನಮಗೆ ಅಗತ್ಯವಾಗಿರುವ ಆಹಾರಧಾನ್ಯಗಳನ್ನು ಉತ್ಪಾದಿಸಲಾಗುತ್ತದೆ.

ಆಹಾರಧಾನ್ಯಗಳ ಉತ್ಪಾದನೆ

ಸ್ವಾತಂತ್ರ್ಯಾನಂತರ ಭಾರತವು ಪ್ರಾಥಮಿಕ ವಲಯದ ಪ್ರಗತಿಗೆ ಅತಿ ಹೆಚ್ಚು ಪ್ರಾಧಾನ್ಯವನ್ನು ನೀಡಿದೆ. ಯೋಜನಾಬದ್ಧವಾದ ಚಟುವಟಿಕೆಗಳು ನಮ್ಮ ಆಹಾರಧಾನ್ಯಗಳ ಉತ್ಪಾದನಾ ವಲಯದಲ್ಲಿ ಧಾರಾಳ ಬದಲಾವಣೆಗಳನ್ನು ಉಂಟುಮಾಡಿದುವು. ಉದ್ಯೋಗಾವಕಾಶಗಳು ಹೆಚ್ಚಾದುದಲ್ಲದೆ ಆಹಾರಧಾನ್ಯಗಳ ಉತ್ಪಾದನೆಯೂ ಗಣನೀಯವಾಗಿ ಹೆಚ್ಚಾಯಿತು. ಭಾರತದಲ್ಲಿ ವಿವಿಧ ಕಾಲಘಟ್ಟಗಳಲ್ಲಿ ಆಹಾರಧಾನ್ಯಗಳ ಉತ್ಪಾದನ ವಲಯದಲ್ಲಿ ಉಂಟಾದ ಬದಲಾವಣೆಗಳನ್ನು ವಿವರಿಸುವ ಗ್ರಾಫನ್ನು ಇಲ್ಲಿ ಕೊಡಲಾಗಿದೆ.



Source - Economic Survey 2012-13

ಆಹಾರಧಾನ್ಯಗಳ ಉತ್ಪಾದನೆಯಲ್ಲಿ ಯಾವ ರೀತಿಯ ಬದಲಾವಣೆಯನ್ನು ಗ್ರಾಫ್ ಸೂಚಿಸುತ್ತದೆ?

ಭಾರತದಲ್ಲಿ ಆಹಾರಧಾನ್ಯಗಳ ಉತ್ಪಾದನೆಯು ಹೆಚ್ಚುತ್ತಿದೆಯೆಂಬುದು ಗ್ರಾಫಿನಿಂದ ಸ್ಪಷ್ಟವಾಯಿತಲ್ಲವೇ. ಆಹಾರಧಾನ್ಯಗಳ ಉತ್ಪಾದನೆಯು ಹೆಚ್ಚಾದರೂ ಭಾರತದ ಅನೇಕ ಕಡೆಗಳಲ್ಲಿ ಬಡತನವು ನೆಲೆನಿಂತಿದೆ. ಇದಕ್ಕೆ ಕಾರಣಗಳಾವುವು?

- ವಿತರಣ ವ್ಯವಸ್ಥೆಯ ನ್ಯೂನತೆ
- ವ್ಯಕ್ತಿಗಳಿಗೆ ವಸ್ತುಗಳನ್ನು ಕೊಂಡುಕೊಳ್ಳಲಿರುವ ಸಾಮರ್ಥ್ಯದ ಕೊರತೆ.

ಬಡತನ (Poverty)

ಯೋಜನಾ ಆಯೋಗದ ಶಿಫಾರಿಸಿನ ಪ್ರಕಾರ ನಗರಪ್ರದೇಶಗಳಲ್ಲಿ 2100 ಕ್ಯಾಲರಿಗಿಂತ ಕಡಿಮೆ ಪೋಷಕಾಹಾರ ಲಭಿಸುವವರು ಹಾಗೂ ಗ್ರಾಮ ಪ್ರದೇಶಗಳಲ್ಲಿ 2400 ಕ್ಯಾರಿಗಿಂತ ಕಡಿಮೆ ಪೋಷಕಾಹಾರ ಲಭಿಸುವವರು ಬಡತನವನ್ನು ಅನುಭವಿಸುವವರಾಗಿದ್ದಾರೆ. 2011–12ರ ಆರ್ಥಿಕ ಸಮೀಕ್ಷೆಯ ಪ್ರಕಾರ ಭಾರತದ ಬಡತನವು 29.8% ಆಗಿದೆ. ಅತ್ಯಧಿಕ ಬಡತನವಿರುವುದು ಬಿಹಾರದಲ್ಲಿ 53.5%. ಅತ್ಯಂತ ಕಡಿಮೆ ಬಡತನವಿರವುದು ಹಿಮಾಚಲ ಪ್ರದೇಶದಲ್ಲಿ 9.5%. ಕೇರಳದಲ್ಲಿ ಇದು 12% ಆಗಿದೆ.

ಆಹಾರಧಾನ್ಯಗಳು ಅಗತ್ಯವಿರುವವರಿಗೆ ಅವರ ಆವಶ್ಯಾನುಸಾರವಾಗಿ ಲಭಿಸಿದಾಗ ಆಹಾರ ಸುರಕ್ಷೆಯು ಖಾತರಿಗೊಳ್ಳುತ್ತದೆ. ಎಲ್ಲ ಜನರಿಗೂ ಎಲ್ಲ ಕಾಲದಲ್ಲಿಯೂ ನೆಮ್ಮದಿಯ ಹಾಗೂ ಆರೋಗ್ಯಪೂರ್ಣವಾದ ಜೀವನವನ್ನು ಸಾಗಿಸುವುದಕ್ಕೆ ಅಗತ್ಯವಿರುವಷ್ಟು ಪೋಷಕಾಂಶಗಳಿಂದ ಕೂಡಿದ ಆಹಾರ ಪಡೆಯಲು ಭೌತಿಕ ಹಾಗೂ ಆರ್ಥಿಕ ಸಾಮರ್ಥ್ಯ ಇದೆ ಎಂದು ಖಾತರಿಪಡಿಸುವ ಸ್ಥಿತಿಯೇ ಆಹಾರ ಸುರಕ್ಷೆಯಾಗಿದೆ.

ಈ ನಿರ್ವಚನವನ್ನು ವಿಶ್ಲೇಷಿಸಿದರೆ ಆಹಾರ ಸುರಕ್ಷೆಯ ಕುರಿತು ಯಾವೆಲ್ಲ ವಿಚಾರಗಳನ್ನು ತಿಳಿದುಕೊಳ್ಳಬಹುದು?

- ಎಲ್ಲರಿಗೂ ಆಹಾರ ಲಭಿಸಬೇಕು.
- ಎಲ್ಲಾ ಕಾಲದಲ್ಲೂ ಆಹಾರ ಲಭಿಸಬೇಕು.
-
-
-

ಆಹಾರಧಾನ್ಯಗಳ ಸ್ವಾವಲಂಬನೆ (Self sufficiency in food)

ಒಂದು ದೇಶಕ್ಕೆ ಅಗತ್ಯವಿರುವಷ್ಟು ಆಹಾರಧಾನ್ಯಗಳನ್ನು ಆ ದೇಶದಲ್ಲೇ ಉತ್ಪಾದಿಸಲು ಸಾಧ್ಯವಾದರೆ ಆ ದೇಶವು ಆಹಾರಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಿದೆಯೆಂದು ಹೇಳಬಹುದು.

ಬಡತನ ನಿರ್ಮೂಲನ ಯೋಜನೆಗಳು

ಬಡತನ ನಿರ್ಮೂಲನದ ಹಲವು ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಹಾಗೂ ಸಾರ್ವಜನಿಕ ವಿತರಣ ವ್ಯವಸ್ಥೆಯನ್ನು ಹೆಚ್ಚು ಬಲಪಡಿಸುವುದರ ಮೂಲಕ ಸರಕಾರಗಳು ಆಹಾರ ಸುರಕ್ಷೆ ಎಂಬ ಗುರಿಯನ್ನು ಸಾಧಿಸಲು ಪ್ರಯತ್ನಿಸುತ್ತಿವೆ. ಸರಕಾರ ಜಾರಿಗೊಳಿಸಿದ ಪ್ರಧಾನ ಯೋಜನೆಗಳು ಮತ್ತು ಕಾರ್ಯಕ್ರಮಗಳು ಯಾವುವೆಂಬುದನ್ನು ಗಮನಿಸಿರಿ.

ಸರಕಾರದ ಯೋಜನೆಗಳು	ಸರಕಾರದ ಕಾರ್ಯಕ್ರಮಗಳು
• ಅನ್ನಪೂರ್ಣ	• ಸಂಯೋಜಿತ ಶಿಶುಕ್ಷೇಮ ಕಾರ್ಯಕ್ರಮ
• ಅಂತ್ಯೋದಯ ಅನ್ನ ಯೋಜನೆ	• ಶಾಲೆಗಳಲ್ಲಿ ಮಧ್ಯಾಹ್ನದ ಊಟ ಕಾರ್ಯಕ್ರಮ
• ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ	• ರಾಷ್ಟ್ರೀಯ ಗ್ರಾಮೀಣ ಉಪಜೀವನ ಮಾರ್ಗ
• ಸ್ವರ್ಣ ಜಯಂತಿ ಶಹಾರಿ ರೋಜ್‌ಗಾರ್ ಯೋಜನೆ	

ಸರಕಾರದ ಮಟ್ಟದಲ್ಲಿ ಜಾರಿಗೊಳ್ಳುತ್ತಿರುವ ಈ ಯೋಜನೆಗಳ ಮತ್ತು ಕಾರ್ಯಕ್ರಮಗಳ ಉದ್ದೇಶಗಳನ್ನು ವಿವರಿಸುವ ಪದಸೂರ್ಯವನ್ನು ನೋಡಿರಿ.



Source : India 2013

ಪ್ರತಿಯೊಂದು ಯೋಜನೆಯೂ ಕಾರ್ಯಕ್ರಮವೂ ಯಾವ ರೀತಿಯಲ್ಲಿ ಬಡತನ ನಿರ್ಮೂಲನ ಮತ್ತು ಆಹಾರ ಸುರಕ್ಷೆಯ ಉದ್ದೇಶವನ್ನು ಈಡೇರಿಸುವುದೆಂದು ತಿಳಿದುಕೊಳ್ಳಿರಿ.

ನಿಮ್ಮ ಪ್ರದೇಶದ ಜನರಿಗೆ ಇಲ್ಲಿರುವ ಯಾವ ಯಾವ ಯೋಜನೆಗಳಿಂದ ಯಾವೆಲ್ಲಾ ಪ್ರಯೋಜನಗಳು ದೊರೆಯುತ್ತವೆ ಎಂಬುದನ್ನು ಕಂಡುಕೊಳ್ಳಿರಿ.

ಕೇರಳ ಮತ್ತು ಸಾರ್ವಜನಿಕ ವಿತರಣ ವ್ಯವಸ್ಥೆ

ಕೇರಳವು ಆಹಾರದಲ್ಲಿ ಸ್ವಾವಲಂಬನೆಯನ್ನು ಪಡೆದ ರಾಜ್ಯವಲ್ಲ. ಆದ್ದರಿಂದ ನಾವು ಆಹಾರಕ್ಕಾಗಿ ಇತರ ರಾಜ್ಯಗಳನ್ನು ಆಶ್ರಯಿಸ ಬೇಕಾಗುತ್ತದೆ. ಆಹಾರ ಭದ್ರತೆಯನ್ನು ಖಚಿತಪಡಿಸಲು ಅಗತ್ಯವಾದ ಸಾರ್ವಜನಿಕ ವಿತರಣ ವ್ಯವಸ್ಥೆಯೊಂದು ಕೇರಳದಲ್ಲಿದೆ. ಕೇರಳದಲ್ಲಿ ಕಾರ್ಯನಿರ್ವಹಿಸುವ ಸಾರ್ವಜನಿಕ ವಿತರಣ ಕೇಂದ್ರಗಳ (ರೇಶನ್ ಅಂಗಡಿ) ಮೂಲಕ ಅಕ್ಕಿ ಹಾಗೂ ಇತರ ಆಹಾರ ವಸ್ತುಗಳನ್ನು, ನಿತ್ಯೋಪಯೋಗಿ ವಸ್ತುಗಳನ್ನು ಅಗತ್ಯವಿರುವ ಎಲ್ಲ ಜನರಿಗೂ ನ್ಯಾಯಯುತವಾದ ಬೆಲೆಯಲ್ಲಿ ಒದಗಿಸುವುದು ಇದರ ಉದ್ದೇಶವಾಗಿದೆ. ನಿತ್ಯೋಪಯೋಗಿ ವಸ್ತುಗಳನ್ನು ನ್ಯಾಯವಾದ ಬೆಲೆಗೆ ಒದಗಿಸುವ ಉದ್ದೇಶದೊಂದಿಗೆ ಕಾರ್ಯನಿರ್ವಹಿಸುವ ಹಲವಾರು ಕೇಂದ್ರಗಳಿವೆ. ಅವುಗಳಲ್ಲಿ ಕೆಲವನ್ನು ನೋಡೋಣ.

ಸಾರ್ವಜನಿಕ ವಿತರಣ ವ್ಯವಸ್ಥೆ
(Public Distribution System)

ಸಮಾಜದಲ್ಲಿ ಅಗತ್ಯವಿರುವವರಿಗೆಲ್ಲಾ ಆಹಾರ ವಸ್ತುಗಳು ಮತ್ತು ಇತರ ನಿತ್ಯೋಪಯೋಗಿ ವಸ್ತುಗಳನ್ನು ನ್ಯಾಯವಾದ ಬೆಲೆಯಲ್ಲಿ ನೀಡುವ ಜವಾಬ್ದಾರಿಯನ್ನು ಹೊಂದಿರುವ ಸರಕಾರಿ ನಿಯಂತ್ರಣದಿಂದ ಕಾರ್ಯನಿರ್ವಹಿಸುವ ಸಂಸ್ಥೆಗಳ ಶೃಂಖಲೆಯು ಸಾರ್ವಜನಿಕ ವಿತರಣ ವ್ಯವಸ್ಥೆಯಾಗಿದೆ.

ಕೇಂದ್ರ	ಲಭಿಸುವ ವಸ್ತುಗಳು
ಸಾರ್ವಜನಿಕ ವಿತರಣ ಕೇಂದ್ರ	ಅಕ್ಕಿ, ಗೋಧಿ, ಸಕ್ಕರೆ, ಸೀಮೆ ಎಣ್ಣೆ
ನೀತಿ ಮೆಡಿಕಲ್ ಸ್ಟೋರ್	ಔಷಧಗಳು
ಹೋರ್ಟಿಕೋರ್ಪ್	ತರಕಾರಿಗಳು
ಸಪ್ಲೈಕೋ ಸೂಪರ್ ಮಾರ್ಕೆಟ್	ಎಲ್ಲಾ ನಿತ್ಯೋಪಯೋಗಿ ವಸ್ತುಗಳು
ನನ್ಮ ಸ್ಟೋರ್	
ನೀತಿ ಸ್ಟೋರ್	
ಲಾಭಂ ಸಪ್ಲೈಕೋ ಮಾರ್ಕೆಟ್	
ಮಾವೇಲಿ ಸ್ಟೋರ್	
ತ್ರಿವೇಣಿ ಸೂಪರ್ ಮಾರ್ಕೆಟ್	
ತ್ರಿವೇಣಿ ಫ್ಲೋಟಿಂಗ್ ಸೂಪರ್ ಮಾರ್ಕೆಟ್	

ನಿಮ್ಮ ಪ್ರದೇಶದಲ್ಲಿರುವ ಈ ರೀತಿಯ ಒಂದು ಸಂಸ್ಥೆಯನ್ನು ಸಂದರ್ಶಿಸಿ ನ್ಯಾಯವಾದ ಬೆಲೆಗೆ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದೆಯೇ ಎಂಬುದನ್ನು ಕಂಡುಹಿಡಿಯಿರಿ.

ಆಹಾರದ ಉತ್ಪಾದನೆಯು ಎದುರಿಸುತ್ತಿರುವ ಸವಾಲುಗಳು

ಆಹಾರದ ಉತ್ಪಾದನೆಯನ್ನು ಹೆಚ್ಚಿಸಿ, ಕಾರ್ಯದಕ್ಷತೆಯಿಂದ ಕೂಡಿದ ಸಾರ್ವಜನಿಕ ವಿತರಣ ವ್ಯವಸ್ಥೆಯ ಮೂಲಕ ವಿತರಣೆಯನ್ನು ನಡೆಸಿ, ಆಹಾರ ಭದ್ರತೆ ಎಂಬ ಉದ್ದೇಶವನ್ನು ಈಡೇರಿಸುವಲ್ಲಿ ಆಹಾರ ಉತ್ಪಾದನ ರಂಗವು ಕೆಲವು ಸವಾಲುಗಳನ್ನು ಎದುರಿಸುತ್ತಾ ಇದೆ. ಭಾರತದ ಆಹಾರ ಉತ್ಪಾದನಾ ಕ್ಷೇತ್ರವು ಎದುರಿಸುತ್ತಿರುವ ಪ್ರಧಾನ ಸವಾಲುಗಳು ಯಾವುವು ಎಂದು ನೋಡೋಣ.

ಕೆಳಗೆ ನೀಡಿರುವ ವಾರ್ತೆಗಳ ಕೊಲಾಷ್‌ನ್ನು ನೋಡಿರಿ.

ಆಹಾರ ಭದ್ರತೆಯ ನಿಯಮ
(Food Security Law)

2013ರಲ್ಲಿ ಪಾರ್ಲಿಮೆಂಟ್ ಅಂಗೀಕರಿಸಿತು.

ವಿಶೇಷತೆಗಳು

- ಆಹಾರಭದ್ರತೆಯು ಸರಕಾರದ ಕಾನೂನುಬದ್ದವಾದ ಜವಾಬ್ದಾರಿಯಾಗಿದೆ.
- ಆವಶ್ಯವಾಗಿರುವಷ್ಟು ಮತ್ತು ಪೋಷಕಾಂಶಯುಕ್ತವಾದ, ಗುಣಮಟ್ಟದ ಆಹಾರ ವಸ್ತುಗಳು ಮಿತವಾದ ಬೆಲೆಗೆ ಎಲ್ಲರಿಗೂ ಲಭಿಸುವಂತೆ ಖಚಿತಪಡಿಸುವುದು.
- ಆಹಾರ ವಸ್ತುಗಳ ಲಭ್ಯತೆಯು ಪೌರರ ನ್ಯಾಯಯುತವಾದ ಹಕ್ಕು ಆಗಿದೆ.

ಆಹಾರ ಉತ್ಪಾದನ ರಂಗವು ಎದುರಿಸುತ್ತಿರುವ ಪ್ರಧಾನ ಸವಾಲುಗಳಲ್ಲಿ ಕೆಲವನ್ನು ಮೇಲಿನ ಕೊಲಾಷ್‌ನಲ್ಲಿ ಕಾಣಬಹುದು. ವಾರ್ತಾ ಕೊಲಾಷ್‌ನಿಂದ ಯಾವೆಲ್ಲಾ ಸವಾಲುಗಳನ್ನು ಕಂಡುಕೊಳ್ಳಬಹುದು.

- ಪ್ರಾಕೃತಿಕ ವಿಕೋಪಗಳಿಂದ ಉಂಟಾಗುವ ಕೃಷಿನಾಶ
- ಕೃಷಿಭೂಮಿಯನ್ನು ಇತರ ಅಗತ್ಯಗಳಿಗೆ ಉಪಯೋಗಿಸುವುದು
- ಸಬ್ಸಿಡಿಯನ್ನು ಕಡಿತಗೊಳಿಸಿದುದು
- ಯಂತ್ರಗಳನ್ನು ಕೊಂಡುಕೊಳ್ಳಲು ಸಾಧ್ಯವಾಗದ ಸ್ಥಿತಿ
- ಹವಾಮಾನದಲ್ಲಿ ಉಂಟಾದ ಬದಲಾವಣೆ
- ವಿಮಾ ಸೌಲಭ್ಯವನ್ನು ಖಚಿತಪಡಿಸಲು ಸಾಧ್ಯವಾಗದೇ ಇರುವುದು
- ರಾಸಾಯನಿಕ ಗೊಬ್ಬರಗಳ ಅಮಿತವಾದ ಉಪಯೋಗವು ಕೃಷಿಭೂಮಿಯ ಫಲವತ್ತತೆಯನ್ನು ಕಡಿಮೆ ಮಾಡುತ್ತದೆ.

ಈ ಸವಾಲುಗಳನ್ನು ಎದುರಿಸಲು ಸಾಧ್ಯವಾದರೆ ಮಾತ್ರವೇ ಆಹಾರ ಉತ್ಪಾದನೆಯನ್ನು ಹೆಚ್ಚಿಸಲೂ ಆವಶ್ಯಕತೆಗೆ ತಕ್ಕಂತೆ ವಿತರಿಸಲೂ ಆ ಮೂಲಕ ಆಹಾರದ ಭದ್ರತೆಯ ಉದ್ದೇಶವನ್ನು ಈಡೇರಿಸಲೂ ಸಾಧ್ಯವಾಗಬಹುದು.

ಕ್ರೋಡೀಕರಣ

- ಪ್ರಾಥಮಿಕ, ದ್ವಿತೀಯ, ತೃತೀಯ ವಲಯಗಳಲ್ಲಿರುವ ಪರಸ್ಪರ ಸಂಬಂಧವು ಆರ್ಥಿಕ ಅಭಿವೃದ್ಧಿಗೆ ಆಧಾರವಾಗಿದೆ.
- ಆರ್ಥಿಕ ವ್ಯವಸ್ಥೆಯ ವಿವಿಧ ವಲಯಗಳಲ್ಲಿ ಒಂದಾದ ಕೃಷಿ ವಲಯವು ಭಾರತದಲ್ಲಿ ಅತೀ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸುತ್ತದೆ.
- ದ್ವಿತೀಯ ಮತ್ತು ತೃತೀಯ ವಲಯಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗುತ್ತಿರುವುದನ್ನು ಮತ್ತು ಪ್ರಾಥಮಿಕ ವಲಯದಲ್ಲಿ ಉದ್ಯೋಗಾವಕಾಶಗಳು ಕಡಿಮೆಯಾಗುತ್ತಿರುವುದನ್ನು ಇಂದು ನಾವು ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಕಾಣುತ್ತೇವೆ.
- ಆಹಾರದ ಉತ್ಪಾದನೆಯು ಹೆಚ್ಚಾದರೂ ಆಹಾರ ಭದ್ರತೆ ಎಂಬ ಉದ್ದೇಶವು ಈಡೇರಬೇಕಾದರೆ ಭಾರತವು ಇನ್ನೂ ಮುಂದುವರಿಯಬೇಕು.
- ಫಲಪ್ರದವಾದ ಸಾರ್ವಜನಿಕ ವಿತರಣ ವ್ಯವಸ್ಥೆಯೂ ಸರಕಾರದ ಕ್ಷೇಮಯೋಜನೆಗಳೂ ಆಹಾರದ ಭದ್ರತೆ ಎಂಬ ಉದ್ದೇಶವನ್ನು ಈಡೇರಿಸಲು ಸಹಾಯಕವಾಗುತ್ತವೆ.

ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಆರ್ಥಿಕ ವ್ಯವಸ್ಥೆಯನ್ನು ವಿವಿಧ ವಲಯಗಳಾಗಿ (ಪ್ರಾಥಮಿಕ, ದ್ವಿತೀಯ, ತೃತೀಯ) ವರ್ಗೀಕರಿಸಲು ಸಾಧ್ಯವಾಗುವುದು.
- ಪ್ರತಿಯೊಂದು ವಲಯದ ಉದ್ಯೋಗ ಸಾಧ್ಯತೆಗಳ, ಸ್ಥಿತಿಗತಿಗಳ ವಿವರಣೆಗಳನ್ನು ಉಪಯೋಗಿಸಿ ಸ್ಪಷ್ಟವಾದ ತಿಳುವಳಿಕೆಯನ್ನು ಹೊಂದಲು ಸಾಧ್ಯವಾಗುವುದು.
- ಆಹಾರ ಉತ್ಪಾದನೆಯ ರಂಗದಲ್ಲಿ ಉಂಟಾಗುತ್ತಿರುವ ಬದಲಾವಣೆಯನ್ನು ವಿವರಿಸಲು ಸಾಧ್ಯವಾಗುವುದು.
- ಆಹಾರ ಭದ್ರತೆಯನ್ನು ಒದಗಿಸುವುದಕ್ಕೆ ಕಾರಣವಾದ ಸನ್ನಿವೇಶಗಳನ್ನು ವಿವರಿಸಲು ಸಾಧ್ಯವಾಗುವುದು.
- ಬಡತನ ನಿರ್ಮೂಲನಕ್ಕಾಗಿ ಸರಕಾರ ಜಾರಿಗೊಳಿಸಿದ ಯೋಜನೆಗಳು, ಕಾರ್ಯಕ್ರಮಗಳು ಮತ್ತು ಅವುಗಳ ವಿಶೇಷತೆಗಳನ್ನು ತಿಳಿದುಕೊಳ್ಳುವುದು.
- ಸಾರ್ವಜನಿಕ ವಿತರಣ ವ್ಯವಸ್ಥೆಯ ಆವಶ್ಯಕತೆಯನ್ನು ತಿಳಿದುಕೊಳ್ಳುವುದು.
- ಕೇರಳದಲ್ಲಿರುವ ನ್ಯಾಯ ಬೆಲೆಯ ಅಂಗಡಿಗಳ ಬಗ್ಗೆ ತಿಳಿದುಕೊಳ್ಳಲು ಹಾಗೂ ಅವುಗಳ ಪ್ರಾಧಾನ್ಯವನ್ನು ವಿವರಿಸಲು ಸಾಧ್ಯವಾಗುವುದು.
- ಆಹಾರೋತ್ಪಾದನೆಯ ರಂಗವು ಇಂದು ಎದುರಿಸುತ್ತಿರುವ ಸವಾಲುಗಳನ್ನು ತಿಳಿದುಕೊಳ್ಳಲು, ಪರಿಹಾರ ಮಾರ್ಗಗಳನ್ನು ಸೂಚಿಸಲು ಸಾಧ್ಯವಾಗುವುದು.

ಮೌಲ್ಯನಿರ್ಣಯ ಮಾಡುವ

- ಪ್ರಾಥಮಿಕ, ದ್ವಿತೀಯ, ತೃತೀಯ ವಲಯಗಳ ಪರಸ್ಪರ ಸಂಬಂಧವನ್ನು ತಿಳಿಸುವ ಉದಾಹರಣೆಯನ್ನು ಬರೆಯಿರಿ.
- ಕೆಳಗೆ ನೀಡಿರುವ ಆರ್ಥಿಕ ಚಟುವಟಿಕೆಗಳು ಯಾವ ವಲಯಗಳಲ್ಲಿ ಒಳಪಡುತ್ತವೆ ಎಂದು ವರ್ಗೀಕರಿಸಿರಿ.
  - ಮೀನುಗಾರಿಕೆ
  - ಅಧ್ಯಾಪನ ವೃತ್ತಿ
  - ಬ್ಯಾಂಕಿಂಗ್
  - ಕಾರ್ಖಾನೆ ಉದ್ಯೋಗ
  - ಗಣಿಗಾರಿಕೆ
  - ಕಟ್ಟಡ ನಿರ್ಮಾಣ
  - ರಿಯಲ್ ಎಸ್ಟೇಟ್
  - ವಿದ್ಯುತ್ ಉತ್ಪಾದನೆ
- ತೃತೀಯ ರಂಗವು ಉಳಿದ ಎರಡು ವಲಯಗಳಿಗಿಂತ ಹೆಚ್ಚು ಅಭಿವೃದ್ಧಿಯಾಗುತ್ತಿದೆ ಎನ್ನುವುದನ್ನು ಉದಾಹರಣೆಯ ಮೂಲಕ ಸಮರ್ಥಿಸಿರಿ.
- ಕೇರಳದಲ್ಲಿ ನ್ಯಾಯಬೆಲೆಗೆ ನಿತ್ಯೋಪಯೋಗಿ ವಸ್ತುಗಳನ್ನು ಒದಗಿಸುವ ಸಂಸ್ಥೆಗಳು ಯಾವುವು?
- ಪ್ರಾಥಮಿಕ ವಲಯವು ಭಾರತದಲ್ಲಿ ಇಂದಿಗೂ ಪ್ರಾಧಾನ್ಯ ಹೊಂದಿರುವ ವಲಯವಾಗಿದೆ. ಉತ್ಪಾದನೆ, ಉದ್ಯೋಗ ಲಭ್ಯತೆ ಇತ್ಯಾದಿಗಳ ಆಧಾರದಲ್ಲಿ ಈ ಹೇಳಿಕೆಯನ್ನು ವಿಶ್ಲೇಷಿಸಿರಿ.
- ಸರಕಾರದ ಕೆಲವು ಯೋಜನೆಗಳನ್ನು ಕೆಳಗೆ ನೀಡಲಾಗಿದೆ. ಇವುಗಳಲ್ಲಿ ಒಟ್ಟು ಫಲಾನುಭವಿಗಳಲ್ಲಿ $\frac{1}{3}$ ಭಾಗ ಮಹಿಳೆಯರಾಗಿರಬೇಕೆಂಬ ನಿಬಂಧನೆಯಿರುವ ಯೋಜನೆ ಯಾವುದು?
  - ಅಂತ್ಯೋದಯ ಅನ್ನ ಯೋಜನೆ
  - ಅನ್ನಪೂರ್ಣ ಯೋಜನೆ
  - ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
  - ಸ್ವರ್ಣ ಜಯಂತಿ ಶಹಾರಿ ರೋಜ್‌ಗಾರ್ ಯೋಜನೆ
- 'ಆಹಾರ ಭದ್ರತೆಯನ್ನು ಕಾರ್ಯಗತಗೊಳಿಸಲು ಸಾರ್ವಜನಿಕ ವಿತರಣ ವ್ಯವಸ್ಥೆಯು ಸಹಾಯಕವಾಗಿದೆ' ಈ ಹೇಳಿಕೆಯನ್ನು ವಿಶ್ಲೇಷಿಸಿರಿ.
- 'ಸಾರ್ವಜನಿಕ ವಿತರಣ ಕೇಂದ್ರವು ಸಾಮಾನ್ಯ ಜನರಿಗಾಗಿ ಇರುವುದಾಗಿದೆ.' ಈ ಹೇಳಿಕೆಯನ್ನು ಸಮರ್ಥಿಸಿರಿ.
- 'ಆಹಾರ ಉತ್ಪಾದನೆ ಎನ್ನುವುದು ಇಂದು ಅನೇಕ ಸವಾಲುಗಳನ್ನು ಎದುರಿಸುತ್ತಿದೆ' ಸಮರ್ಥಿಸಿರಿ.
- ಕೇಂದ್ರ ಸರಕಾರದ ಯಾವುದಾದರೊಂದು ಬಡತನ ನಿರ್ಮೂಲನ ಯೋಜನೆಯ ಕುರಿತು ಟಿಪ್ಪಣಿ ತಯಾರಿಸಿರಿ.

ಮುಂದುವರಿದ ಚಟುವಟಿಕೆಗಳು

- ನಿಮ್ಮ ಪ್ರದೇಶದಲ್ಲಿ ಆಹಾರೋತ್ಪಾದನ ರಂಗವು ಎದುರಿಸುತ್ತಿರುವ ಪ್ರಧಾನ ಸವಾಲುಗಳನ್ನು ಕಂಡುಕೊಂಡು ಪರಿಹಾರ ಮಾರ್ಗಗಳನ್ನು ಸೂಚಿಸಿರಿ.
- ನಿಮ್ಮ ಪ್ರದೇಶದಲ್ಲಿ ಹೆಚ್ಚು ಉದ್ಯೋಗ ಅವಕಾಶಗಳು ಯಾವ ವಲಯದಿಂದ ಬರುವುದೆಂದು ಅನ್ವೇಷಣೆ ಮಾಡಿರಿ.

6 ಭೂಪಟಗಳ ಅರ್ಥವನ್ನು ಹುಡುಕಿ

ವಿವಿಧ ಕಾಲಘಟ್ಟಗಳಲ್ಲಿ ಮಾನವನು ನಡೆಸಿದ ಕೆಲವು ಸಾಗರಯಾನಗಳ ಕುರಿತಾದ ವಿವರಣೆಗಳನ್ನು ಕೆಳಗೆ ನೀಡಲಾಗಿದೆ. ಅವುಗಳನ್ನು ಗಮನವಿಟ್ಟು ಓದುವಿರಲ್ಲವೆ?

ಕ್ರಿಸ್ಟೋಫರ್ ಕೊಲಂಬಸ್

ಕೊಲಂಬಸನು 15ನೇ ಶತಮಾನದಲ್ಲಿ ರಿಪಬ್ಲಿಕ್ ಆಫ್ ಜನೋವದಲ್ಲಿ (ಈಗಿನ ವಾಯವ್ಯ ಇಟೆಲಿ) ಜನಿಸಿದನು. ಇವನು ನಾವಿಕನಾಗಿಯೂ ಪರ್ಯಟಕನಾಗಿಯೂ ಪ್ರಸಿದ್ಧಿಯನ್ನು ಪಡೆದ ವ್ಯಕ್ತಿ. ಪ್ರಾಕೃತಿಕ ಸಂಪನ್ಮೂಲಗಳಿಂದ ಸುಮೃದ್ಧವಾದ ಭಾರತದ ಕುರಿತು ಕೇಳಿ ತಿಳಿದುಕೊಂಡ ಅವನು ಅಟ್ಲಾಂಟಿಕ್ ಸಾಗರದ ಮೂಲಕ ಭಾರತವನ್ನು ಹುಡುಕಿಕೊಂಡು ತನ್ನ ಚೊಚ್ಚಲ ಸಾಗರಯಾನವನ್ನು ಕ್ರಿ.ಶ. 1492ರಲ್ಲಿ ಕೈಗೊಂಡನು. ಈ ಯಾತ್ರೆಯಲ್ಲಿ ಹಾದಿಯನ್ನು ತಿಳಿಯಲು ದೊಡ್ಡದಾದ ಗೋಳವೊಂದಕ್ಕೆ ಚರ್ಮವನ್ನು ಸುತ್ತಿ ಅದರ ಮೇಲೆ ಸ್ಥಳಗಳನ್ನು ಗುರುತಿಸಿ, ಕೊಲಂಬಸ್ ಮತ್ತು ಅವನ ಸಂಗಡಿಗರು ಸಂಚರಿಸಿದರು. ನಕ್ಷತ್ರಗಳ ಸ್ಥಾನವನ್ನು ಗುರುತಿಸುವುದಕ್ಕಾಗಿ ಇದೇ ರೀತಿಯ ಇನ್ನೊಂದು ಗೋಲವನ್ನು ಇವರು ಉಪಯೋಗಿಸಿದ್ದರು. ಆದರೆ ಕೊಲಂಬಸ್‌ನ ಪ್ರಯಾಣ ದಿಕ್ಕು ತಪ್ಪಿ ಇಂದಿನ ಉತ್ತರ ಅಮೇರಿಕಾ ಭೂಖಂಡದ ಸಮೀಪದಲ್ಲಿರುವ ಕೆಲವು ದ್ವೀಪಗಳಿಗೆ ಬಂದು ಮುಟ್ಟಿತು. ದಾರಿ ತೋರಿಸಲು ಸರಿಯಾದ ಭೂಪಟಗಳೋ ಇತರ ವ್ಯವಸ್ಥೆಗಳೋ ಇಲ್ಲದಿರುವುದು ಇದಕ್ಕೆ ಕಾರಣವಾಗಿತ್ತು.

ಫೆರ್ಡಿನಾಂಡ್ ಮೆಗಲನ್

16ನೇ ಶತಮಾನದಲ್ಲಿ ಯುರೋಪಿನ ಪೋರ್ಚುಗಲ್ಲಿನ ಉತ್ತರ ಭಾಗದಲ್ಲಿ ಮೆಗಲನ್ ಜನಿಸಿದನು. ಜಗತ್ತನ್ನು ಸುತ್ತುವ ಮಹತ್ತರ ಬಯಕೆಯೊಂದಿಗೆ 1519 ಸೆಪ್ಟಂಬರ್‌ನಲ್ಲಿ ಯುರೋಪ್‌ನಿಂದ ಪೋರ್ಚ್‌ಗೀಸ್ ಪರ್ಯಟಕನಾಗಿ ಮೆಗಲನ್ ಮತ್ತು ತಂಡ ಸಾಗರಯಾನವನ್ನು ಆರಂಭಿಸಿತು. ಅಟ್ಲಾಂಟಿಕ್ ಸಾಗರದಲ್ಲಿ ಸಂಚರಿಸಿ ಫೆಸಿಫಿಕ್ ಸಾಗರದ ಮೂಲಕ ಯುರೋಪಿಗೆ ಹಿಂತಿರುಗಬೇಕು ಎನ್ನುವುದು ಇವರ ಉದ್ದೇಶವಾಗಿತ್ತು. ಭೂಖಂಡಗಳ ಸ್ಥಾನವನ್ನು ಗುರುತಿಸುವುದಕ್ಕಾಗಿ 16ನೇ ಶತಮಾನದಲ್ಲಿ ತಯಾರಿಸಿದ ಭೂಪಟಗಳನ್ನು ಇವರು ಉಪಯೋಗಿಸಿದ್ದರು. ಆದರೆ ಪ್ರಯಾಣವು ಹಲವು ವರ್ಷಗಳ ತನಕ ಮುಂದುವರಿದ ಕಾರಣ ಹಡಗಿನಲ್ಲಿ ಕಲಹವೇರ್ಪಟ್ಟಿತು. ಫೆಸಿಫಿಕ್ ಸಾಗರವನ್ನು ದಾಟಿ ಫಿಲಿಪ್ಪೈನ್ಸ್ ದ್ವೀಪ ಸಮೂಹಗಳಿಗೆ ತಲುಪಿದ ಇವರು ಅಲ್ಲಿನ ಮೆಕ್ಟನ್ (Mactan) ದ್ವೀಪವಾಸಿಗಳೊಂದಿಗೆ ಯುದ್ಧಮಾಡಿದರು. ಇದರಲ್ಲಿ ಮೆಗಲನ್ ಕೊಲ್ಲಲ್ಪಟ್ಟನು. ಹಡಗಿನಲ್ಲಿ ಉಳಿದವರು 1522ರ ಸೆಪ್ಟಂಬರ್‌ನಲ್ಲಿ ಯುರೋಪಿಗೆ ಹಿಂದಿರುಗಿದರು. ವಿವರವಾದ ಭೂಪಟಗಳೋ ದಾರಿಯನ್ನು ತಿಳಿಸಲು ಇತರ ಸೌಕರ್ಯಗಳೋ ಇಲ್ಲದ ಆ ಕಾಲದಲ್ಲಿ ಇವರಿಗೆ ಲೋಕವನ್ನು ಸುತ್ತಿ ಸಂಚರಿಸಲು ಮೂರು ವರ್ಷ ಬೇಕಾಯಿತು.

ಲೆಫ್ಟಿನೆಂಟ್ ಕಮಾಂಡರ್ ಅಭಿಲಾಷ್ ಟೋಮಿ

ಭಾರತದ ನಾವಿಕನಾದ ಅಭಿಲಾಷ್ ಟೋಮಿ ಕೇರಳದ ಎರ್ನಾಕುಳಂ ಜಿಲ್ಲೆಯ ತೃಪ್ಪಣಿತ್ತುರ ಎಂಬಲ್ಲಿ ಜನಿಸಿದರು. 2012ರ ನವೆಂಬರಿನಲ್ಲಿ ಸಮುದ್ರ ಮಾರ್ಗದ ಮೂಲಕ ಜಗತ್ತನ್ನು ಸುತ್ತಿ ಸಂಚರಿಸಲು ಮುಂಬೈನಿಂದ ಪ್ರಯಾಣವನ್ನು ಆರಂಭಿಸಿದರು. ಸಂಚಾರದಲ್ಲಿ ಎದುರಾದ ಎಲ್ಲ ಎಡರು ತೊಡರುಗಳನ್ನು ಸಮರ್ಥವಾಗಿ ಎದುರಿಸಿ 2013 ಮಾರ್ಚ್ 31ರಂದು ಮುಂಬೈಗೆ ಹಿಂದಿರುಗಿದರು. ಸರಿಯಾದ ಭೂಪಟಗಳು ಮತ್ತು ಆಧುನಿಕ ಉಪಕರಣಗಳ ಸಹಾಯದಿಂದ ದಿಕ್ಕು ತಪ್ಪದೆ ಸುಮಾರು 150 ದಿನಗಳಲ್ಲಿ ಜಗತ್ತನ್ನು ಸುತ್ತಿ ಬರಲು ಅವರಿಗೆ ಸಾಧ್ಯವಾಯಿತು.

ಆಧುನಿಕ ಕಾಲದಲ್ಲಿರುವಂತಹ ಭೂಪಟಗಳೋ ಆಧುನಿಕ ವ್ಯವಸ್ಥೆಗಳೋ ಇಲ್ಲದಿದ್ದ ಆ ಕಾಲದಲ್ಲಿ ಸಾವಿರಾರು ಕಿಲೋಮೀಟರ್ ದೂರದ ಪ್ರಯಾಣವನ್ನು ಕೈಗೊಂಡ ಕೊಲಂಬಸ್ ಮತ್ತು ಮೆಗಲನ್‌ನ ಹಲವಾರು ವರ್ಷಗಳಷ್ಟು ದೀರ್ಘವಾದ ಈ ಸಾಗರಯಾನವು ಎಲ್ಲರನ್ನು ಚಕಿತಗೊಳಿಸಿತು. ಜಗತ್ತಿನ ಕುರಿತಾದ ವಿವರವಾದ ಮಾಹಿತಿಗಳನ್ನು ನೀಡುವ ಭೂಪಟಗಳು ಮತ್ತು ಆಧುನಿಕ ತಂತ್ರಜ್ಞಾನದ ಸಹಾಯದಿಂದ ಅಲ್ಪಕಾಲದಲ್ಲಿ ದಿಕ್ಕು ತಪ್ಪದೆ ಜಗತ್ತನ್ನು ಸುತ್ತಿ ಬರಬಹುದೆಂದು ತಿಳಿಯಿತಲ್ಲವೇ.

ಭೂಪಟಗಳ ಪ್ರಾಧಾನ್ಯ

ಭೂಪಟವು ಭೂಗೋಳ ಶಾಸ್ತ್ರದ ಪ್ರಧಾನ ಉಪಕರಣವಾಗಿದೆ. ನಿಮ್ಮ ತರಗತಿ ಕೋಣೆ, ಶಾಲಾಪರಿಸರ, ನೀವು ವಾಸಿಸುವ ಪರಿಸರ ಇತ್ಯಾದಿಗಳನ್ನು ಒಂದು ಕಾಗದದಲ್ಲಿ ಚಿತ್ರಿಸಲು ಸಾಧ್ಯ. ಈ ರೀತಿಯಲ್ಲಿ ಭೂಮಿಯ ಮೇಲಿನ ಎಲ್ಲ ಪ್ರದೇಶಗಳನ್ನು ಚಿತ್ರಿಸಬಹುದಾಗಿದೆ. ಭೂಪ್ರದೇಶಗಳ ಈ ರೀತಿಯ ಚಿತ್ರಗಳನ್ನು ಭೂಪಟಗಳು ಎಂದು ಕರೆಯುತ್ತೇವೆ. ಶತಮಾನಗಳ ಹಿಂದೆಯೇ ಭೂಪಟಗಳನ್ನು ಉಪಯೋಗಿಸುತ್ತಿದ್ದರು ಎಂದು ಊಹಿಸಲಾಗಿದೆ. ಆದರೆ ಅವುಗಳು ಇಂದು ಇರುವಂತೆ ಸ್ಪಷ್ಟ ಮತ್ತು ನಿಖರವಾದ ಭೂಪಟಗಳಾಗಿರಲಿಲ್ಲ. ಭೂಮಿಯ ವಿವರವಾದ ಮಾಹಿತಿಗಳು ಲಭ್ಯವಾಗುವ ರೀತಿಯ ಭೂಪಟಗಳು ಆಧುನಿಕ ಜಗತ್ತಿನ ಅವಿಭಾಜ್ಯ ಘಟಕಗಳಾಗಿವೆ. ವಿವಿಧ ರೀತಿಯ ಭೂಪಟಗಳನ್ನು ವಿವಿಧ ಕ್ಷೇತ್ರಗಳಲ್ಲಿ ಉಪಯೋಗಿಸುತ್ತಾರೆ.

ಆಧುನಿಕ ಕಾಲದಲ್ಲಿ ಯಾವೆಲ್ಲಾ ಕ್ಷೇತ್ರಗಳಲ್ಲಿ ಭೂಪಟಗಳನ್ನು ಉಪಯೋಗಿಸುತ್ತಾರೆ ಎಂದು ನಿಮಗೆ ಕಂಡುಹಿಡಿಯಬಹುದೇ?

- ಭೂಗೋಳ ಶಾಸ್ತ್ರ ಅಧ್ಯಯನದಲ್ಲಿ
- ರಕ್ಷಣ ವಲಯದಲ್ಲಿ
- ಪ್ರವಾಸೋದ್ಯಮ ವಲಯದಲ್ಲಿ
- ಆಡಳಿತ ನಿರ್ವಹಣ ವಲಯದಲ್ಲಿ
- ಸಾರಿಗೆ ವಲಯದಲ್ಲಿ
-

ನಿಮ್ಮ ಪಾಠ ಪುಸ್ತಕಗಳಲ್ಲಿ ವಿವಿಧ ಪಾಠಭಾಗಗಳ ಅಧ್ಯಯನಕ್ಕಾಗಿ ಎಷ್ಟು ಭೂಪಟಗಳನ್ನು ಉಪಯೋಗಿಸಲಾಗಿದೆ ಎಂದು ಪರಿಶೀಲಿಸಿರಿ.

ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಅಲ್ಲದೆ ಬೇರೆ ಯಾರೆಲ್ಲಾ ತಮ್ಮ ನಿತ್ಯ ಜೀವನದಲ್ಲಿ ಭೂಪಟಗಳನ್ನು ಉಪಯೋಗಿಸುತ್ತಾರೆಂದು ನಾವು ನೋಡುವ.

- ಕೈಗಾರಿಕೋದ್ಯಮಿಗಳು
- ಇತಿಹಾಸಗಾರರು
- ಪೈಲೆಟ್‌ಗಳು
- ನಾವಿಕರು
-

ಮೇಲೆ ಸೂಚಿಸಿದವರು ಯಾಕಾಗಿ ಭೂಪಟವನ್ನು ಉಪಯೋಗಿಸುವರು? ಇವರು ವಿವಿಧ ಆವಶ್ಯಕತೆಗಳಿಗಾಗಿ ಒಂದೇ ರೀತಿಯ ಭೂಪಟಗಳನ್ನು ಉಪಯೋಗಿಸುತ್ತಾರೆಯೇ?

ತರಗತಿಯಲ್ಲಿ ಒಂದು ಚರ್ಚೆ ನಡೆಸಿರಿ.

ವಿವಿಧ ಆವಶ್ಯಕತೆಗಳಿಗಾಗಿ ವಿವಿಧ ರೀತಿಯ ಭೂಪಟಗಳನ್ನು ತಯಾರಿಸಲಾಗಿದೆ. ಇಷ್ಟೆಲ್ಲಾ ಪ್ರಾಧಾನ್ಯವಿರುವ ಭೂಪಟಗಳ ಚರಿತ್ರೆಯನ್ನು ನಾವೊಮ್ಮೆ ಪರಿಶೀಲಿಸೋಣ.

ಭೂಪಟಗಳ ಚರಿತ್ರೆ

15 ಮತ್ತು 16ನೇ ಶತಮಾನಗಳಲ್ಲಿದ್ದ ಭೂಪಟಗಳು ನಿಖರವಾದ ಸ್ಥಾನ ನಿರ್ಣಯಕ್ಕೋ ದಿಕ್ಕುಗಳ ನಿರ್ಣಯಕ್ಕೋ ಸಹಾಯಕವಾಗಿರಲಿಲ್ಲ. ಆದ್ದರಿಂದ ಕೊಲಂಬಸ್, ಮೆಗಲನ್ ಮುಂತಾದವರ ಸಾಗರಯಾನಗಳು ದಾರಿತಪ್ಪಲು ಮತ್ತು ದೀರ್ಘಕಾಲ ಮುಂದುವರಿಯಲು ಕಾರಣವಾಯಿತು ಎಂದು ತಿಳಿದುಕೊಂಡಿರಲ್ಲವೇ.

ಈ ಕಾಲಘಟ್ಟಗಳಿಗಿಂತ ಮೊದಲು ಭೂಪಟಗಳನ್ನು ನಿರ್ಮಿಸಿದ್ದರೇ?

ಆರಂಭಕಾಲದ ಭೂಪಟಗಳು ಈಗಿನ ಭೂಪಟಗಳಂತೆ ಸ್ಪಷ್ಟ ಮತ್ತು ನಿಖರವಾಗಿದ್ದುವೇ?

ವಿವಿಧ ಕಾಲಘಟ್ಟದಲ್ಲಿ ಭೂಪಟಗಳಲ್ಲುಂಟಾದ ಬದಲಾವಣೆಗಳನ್ನು ಕ್ರಮವಾಗಿ 1 ರಿಂದ 6ರ ವರೆಗಿನ ಚಿತ್ರಗಳಲ್ಲಿ ಕೊಡಲಾಗಿದೆ.

1

ಮೆಸೋಪೊಟೇಮಿಯನ್ ಭೂಪಟ
(ಆವೆಮಣ್ಣಿನ ಫಲಕ)

2

ಅನೆಕ್ಸಿಮಾಂಡರ್ ಬಿಡಿಸಿದನೆನ್ನಲಾದ ಜಾಗತಿಕ ಭೂಪಟ
ಮಾದರಿ

3



ಹಿಪ್ಪಾರ್ಕಸ್ ತಯಾರಿಸಿದ ಜಾಗತಿಕ ಭೂಪಟ

4

ಟೋಲಮಿ ತಯಾರಿಸಿದ ಜಾಗತಿಕ ಭೂಪಟ

5

ಮರ್ಕೆಟರ್ ತಯಾರಿಸಿದ ಜಾಗತಿಕ ಭೂಪಟ

6

ಓರ್ಟಿಲಿಯಸ್ ತಯಾರಿಸಿದ ಜಾಗತಿಕ ಭೂಪಟ

ಮೇಲೆ ನೀಡಿರುವ ಚಿತ್ರಗಳನ್ನು ನೋಡಿದಿರಲ್ಲವೇ. ನಿಮ್ಮ ಶಾಲೆಯ ಸಮಾಜ ವಿಜ್ಞಾನ ಪ್ರಯೋಗ ಶಾಲೆಯಲ್ಲಿರುವ ಜಾಗತಿಕ ಭೂಪಟ ಮತ್ತು ಮೇಲಿನ ಭೂಪಟಗಳನ್ನು ಹೋಲಿಸಿರಿ. ಯಾವೆಲ್ಲ ಬದಲಾವಣೆಗಳನ್ನು ನೀವು ಕಂಡುಕೊಳ್ಳುವಿರಿ ?

ಶತಮಾನಗಳಿಂದ ಭೂಪಟಗಳಲ್ಲಿ ಯಾವೆಲ್ಲ ಬದಲಾವಣೆಗಳು ಉಂಟಾಗಿವೆ ಎಂದು ಪರಿಶೀಲಿಸೋಣ.

ಭೂಪಟಗಳ ಚರಿತ್ರೆಯು ಮಾನವ ನಾಗರಿಕತೆಯಷ್ಟು ಪ್ರಾಚೀನತೆಯನ್ನು ಹೊಂದಿದೆ ಎಂದು ನಂಬಲಾಗಿದೆ. ಸುಮಾರು 5000 ವರ್ಷಗಳ ಹಿಂದೆ ಮೆಸೋಪೊಟೇಮಿಯಾದಲ್ಲಿ ಆವೆ ಮಣ್ಣನ್ನು ಸುಟ್ಟು ಫಲಕಗಳನ್ನು ನಿರ್ಮಿಸುತ್ತಿದ್ದರು. ಇವುಗಳು ಇಂದಿನವರೆಗೆ ಕಂಡುಹಿಡಿದವುಗಳಲ್ಲಿ ಅತ್ಯಂತ ಪ್ರಾಚೀನ ಭೂಪಟಗಳಾಗಿವೆ. ಇವುಗಳಲ್ಲಿ ಬಹಳ ಸಣ್ಣ ಪ್ರದೇಶಗಳ ವಿಶೇಷತೆಗಳನ್ನು ತೋರಿಸಲು ಸಹಾಯಕವಾಗುವ ಪ್ರತ್ಯೇಕ ರೀತಿಯ ಗೆರೆಗಳು ಮತ್ತು ಚಿಹ್ನೆಗಳು ಇದ್ದುವು. ಮೊದಲ ಭೂಪಟವನ್ನು ರಚಿಸಿದವನೆಂದು ನಂಬಲಾದ ಗ್ರೀಕ್ ತತ್ವ ಚಿಂತಕನಾದ ಅನೆಕ್ಸಿಮಾಂಡರ್‌ನ ಕಾಲಘಟ್ಟದಲ್ಲಿ ಭೂಪಟಗಳನ್ನು ಚರ್ಮ ಮತ್ತು ತಾಮ್ರದ ಫಲಕಗಳಿಂದ ತಯಾರಿಸಲಾಗುತ್ತಿತ್ತು. ಗ್ರೀಕ್ ಗಣಿತ ಶಾಸ್ತ್ರಜ್ಞನಾದ ಇರಾತೋಸ್ತನೀಸ್‌ನ ಸಂಶೋಧನೆಗಳು, ಹಿಪ್ಪಾರ್ಕಸ್, ಟೋಲಮಿ ಎಂಬೀ ಖಗೋಳಶಾಸ್ತ್ರಜ್ಞರ ಕೊಡುಗೆಗಳು ಭೂಪಟ ರಚನೆಗೆ ಹೆಚ್ಚು ಸಹಾಯಕವಾದವು. ಕೊಲಂಬಸ್, ಮೆಗಲನ್ ಮೊದಲಾದ ನಾವಿಕರ ಮತ್ತು ಪರ್ಯಟಕರ ಜಾಗತಿಕ ಯಾನವು ಸ್ಪಷ್ಟ ಮತ್ತು ನಿಖರವಾದ ಭೂಪಟ ನಿರ್ಮಾಣಕ್ಕೆ ದಾರಿ ಮಾಡಿಕೊಟ್ಟಿತು. ಆಧುನಿಕ ಭೂಪಟ ನಿರ್ಮಾಣದ ಪಿತಾಮಹನೆಂದು ತಿಳಿಯಲ್ಪಡುವ ಮರ್ಕೆಟರ್, ಆರಂಭದಲ್ಲಿ ವಿವಿಧ ಭೂಪಟಗಳನ್ನು ಸೇರಿಸಿ 'ಅಟ್ಲಾಸ್' ತಯಾರಿಸಿದ ಎಬ್ರಹಾಂ ಓರ್ಟಿಲಿಯಸ್‌ರು ಆಧುನಿಕ ಭೂಪಟ ನಿರ್ಮಾಣದಲ್ಲಿ ಹೊಸ ದೃಷ್ಟಿಕೋನವನ್ನು ನೀಡಿದವರಾಗಿದ್ದಾರೆ.

ಮೊದಲ ಭೂಪಟ ತಯಾರಿಸಿದ್ದು?

ಗ್ರೀಕ್ ತತ್ವ ಚಿಂತಕನಾಗಿದ್ದ ಅನೆಕ್ಸಿಮಾಂಡರ್ (Anaximander) ಮೊದಲ ಭೂಪಟವನ್ನು ತಯಾರಿಸಿದವನು ಎಂದು ನಂಬಲಾಗಿದೆ. ಇವನು ಕ್ರಿ.ಪೂ. 610 ರಲ್ಲಿ ಏಷ್ಯಾಮೈನರ್‌ನ ಮಿಲೇಟೈಸಿಯಲ್ಲಿ ಜನಿಸಿದನು.

ಆಧುನಿಕ ಭೂಪಟ ಶಾಸ್ತ್ರದ ಬೆಳವಣಿಗೆಯಲ್ಲಿ ಗ್ರೀಕ್, ರೋಮನ್, ಅರೇಬಿಯನ್, ಭಾರತೀಯ ಭೂಗೋಳ ಶಾಸ್ತ್ರಜ್ಞರು ಗಣನೀಯವಾದ ಕೊಡುಗೆಗಳನ್ನು ನೀಡಿದ್ದಾರೆ. ಭೂಪಟಗಳ ಚರಿತ್ರೆಯು ಆವೆಮಣ್ಣಿನ ಫಲಕದಿಂದ ಮೊದಲ್ಗೊಂಡು ಇಂದು ಕಂಪ್ಯೂಟರ್ ಆಧಾರಿತ ಭೂಪಟಗಳ ವರೆಗೆ ತಲುಪಿದೆ. ಅತಿ ವೇಗದಿಂದ ಪ್ರಗತಿಯತ್ತ ಸಾಗುತ್ತಿರುವ ಜಗತ್ತಿನಲ್ಲಿ ಭೂಪಟಗಳೂ ಕಾಲದೊಂದಿಗೆ ಬದಲಾಗುತ್ತಿವೆ. ಕಂಪ್ಯೂಟರ್ ಮತ್ತು ಇತರ ಆಧುನಿಕ ವ್ಯವಸ್ಥೆಗಳ ಸಹಾಯದಿಂದ ಭೂ ಪ್ರದೇಶಗಳ ನಿಖರವಾದ ಸ್ಥಾನ, ತ್ರಿಮಾನ ದೃಶ್ಯ ಇತ್ಯಾದಿಗಳು ಒಂದು ಮೌಸ್‌ಕ್ಲಿಕ್ ಮಾತ್ರದಿಂದ ಕಂಪ್ಯೂಟರ್ ಪರದೆಯಲ್ಲಿ ಕಾಣುವ ಸ್ಥಿತಿಗೆ ಇಂದು ಭೂಪಟ ನಿರ್ಮಾಣವು ಬೆಳವಣಿಗೆ ಹೊಂದಿದೆ.

ಭೂಪಟಶಾಸ್ತ್ರ (Cartography)

ಕಾರ್ಟೆ (Carte) ಗ್ರಾಫಿಕ್ (Graphic) ಎಂಬೀ ಫ್ರೆಂಚ್ ಪದಗಳಿಂದ ಕಾರ್ಟೋಗ್ರಾಫಿ ಎಂಬ ಇಂಗ್ಲಿಷ್ ಪದ ಉಗಮವಾಗಿದೆ. ಕಾರ್ಟೆ ಎಂದರೆ ಭೂಪಟ (Map) ವೆಂದೂ ಗ್ರಾಫಿಕ್ ಎಂದರೆ ಚಿತ್ರಿಸುವು (Drawing) ದೆಂದೂ ಅರ್ಥವಿದೆ. ಭೂಪಟಗಳನ್ನು ತಯಾರಿಸುವ ವಿಜ್ಞಾನ ಶಾಖೆಯು ಭೂಪಟ ಶಾಸ್ತ್ರ ಅಥವಾ ಕಾರ್ಟೋಗ್ರಾಫಿ ಆಗಿದೆ. ಭೂಪಟಗಳನ್ನು ತಯಾರಿಸುವ ವ್ಯಕ್ತಿಯನ್ನು ಕಾರ್ಟೋಗ್ರಾಫರ್ (Cartographer) ಎಂದು ಕರೆಯುತ್ತಾರೆ.

ರೇಖಾ ಚಿತ್ರ ಮತ್ತು ರೂಪುರೇಖೆ (Sketch and Plan)

ಕೆಳಗೆ ನೀಡಿರುವ ಚಿತ್ರಗಳನ್ನು ಗಮನಿಸಿರಿ.



ಚಿತ್ರ ಎ

ಚಿತ್ರ ಬಿ

ಒಂದೇ ಪ್ರದೇಶದ ಎರಡು ಚಿತ್ರಗಳನ್ನು ನೀಡಲಾಗಿದೆ. ಈ ಚಿತ್ರಗಳ ನಡುವೆ ಯಾವೆಲ್ಲಾ ವ್ಯತ್ಯಾಸಗಳನ್ನು ಕಂಡುಹಿಡಿಯಲು ಸಾಧ್ಯ?

- ಚಿತ್ರ ಎ ಯಲ್ಲಿ ಉದ್ದೇಶಿತ ಸ್ಥಳಕ್ಕೆ ತಲುಪಲು ಬಾಣದ ಗುರುತನ್ನು ನೀಡಲಾಗಿದೆ. ಆದರೆ ಬಿ ಚಿತ್ರದಲ್ಲಿ ಅದು ಕಾಣುವುದಿಲ್ಲ.
- ಚಿತ್ರ ಬಿ ಯಲ್ಲಿ ಉತ್ತರ ದಿಕ್ಕನ್ನು ತೋರಿಸಲು ದಿಕ್ಸೂಚಿಯನ್ನು, ಮಾನವನ್ನು (Scale) ನೀಡಲಾಗಿದೆ. ಆದರೆ ಚಿತ್ರ ಎ ಯಲ್ಲಿ ಇದು ಇಲ್ಲ.
- ಚಿತ್ರ ಎ ಯಲ್ಲಿ ಉದ್ದೇಶಿತ ಸ್ಥಳಕ್ಕೆ ತಲುಪಲು ಅಗತ್ಯವಾದ ಮಾಹಿತಿಗಳನ್ನು ನೀಡಲಾಗಿದೆ. ಆದರೆ ಚಿತ್ರ ಬಿ ಯಲ್ಲಿ ಆ ಪ್ರದೇಶದ ಎಲ್ಲಾ ಪ್ರಧಾನ ಮಾಹಿತಿಗಳನ್ನೂ ನೀಡಲಾಗಿದೆ.
-

ಚಿತ್ರ ಎ ಯು ರಾಮುವಿನ ಶಾಲೆಗಿರುವ ದಾರಿಯನ್ನು ತಿಳಿಸುವ ರೇಖಾ ಚಿತ್ರವಾಗಿದೆ. ಇನ್ನೊಂದು ಶಾಲೆಯಲ್ಲಿ ಕಲಿಯುವ ರಾಮುವಿನ ಸ್ನೇಹಿತನಾದ ಗೋಪುವಿಗೆ ರಾಮುವಿನ ಶಾಲೆಗೆ ತಲುಪಬೇಕಾಗಿರುವ ದಾರಿಯನ್ನು ಈ ಚಿತ್ರದಲ್ಲಿ ಸೇರಿಸಲಾಗಿದೆ. ಬಿ ಚಿತ್ರದಲ್ಲಿರುವ ಹಾಗೆ ದೂರವನ್ನು ತಿಳಿದುಕೊಳ್ಳಲು ನಿಖರವಾದ ಅಳತೆಗಳು, ದಿಕ್ಕುಗಳನ್ನು ಸೂಚಿಸುವ ಮಾಹಿತಿಗಳು ಯಾವುದೂ ಈ ಚಿತ್ರದಲ್ಲಿಲ್ಲ. ಹಾಗಿದ್ದರೂಸಹ ಈ ಚಿತ್ರವನ್ನು ಉಪಯೋಗಿಸಿ ಸ್ನೇಹಿತನಾದ ಗೋಪುವನ್ನು ತನ್ನ ಶಾಲೆಗೆ ತಲುಪಿಸುವುದರಲ್ಲಿ ರಾಮು ಯಶಸ್ವಿಯಾದನು. ಈ ರೀತಿಯಲ್ಲಿ ಅತಿ ಕಡಿಮೆ ಮಾಹಿತಿಗಳು ಮಾತ್ರ ಒಳಗೊಂಡು, ಒಬ್ಬರ ನೆನಪನ್ನು ಆಧರಿಸಿ ಅಥವಾ ಒಂದು ಪ್ರದೇಶವನ್ನು ವೀಕ್ಷಿಸಿ ರಚಿಸುವ ಚಿತ್ರಗಳು ರೇಖಾಚಿತ್ರಗಳಾಗಿವೆ.

ರಾಮು ತಯಾರಿಸಿದ ಹಾಗೆ ಒಂದು ರೇಖಾಚಿತ್ರವನ್ನು ನೀವೂ ರಚಿಸಬಹುದಲ್ಲವೇ.

ಮನೆಯ ಹತ್ತಿರದ ಬಸ್ ನಿಲ್ದಾಣದಿಂದಲೋ ರೈಲ್ವೇಸ್ಟೇಶನ್‌ನಿಂದಲೋ ನಿಮ್ಮ ಶಾಲೆಗೆ ತಲುಪಲು ಸಹಾಯಕವಾಗುವ ರೇಖಾ ಚಿತ್ರವೊಂದನ್ನು ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.

ಒಂದು ಪ್ರದೇಶದ ಮಾಹಿತಿಗಳಿಗೆ ಸಂಬಂಧಿಸಿದ ನಿಖರವಾದ ಅಳತೆಗಳು, ಅವುಗಳ ಸ್ಥಾನ ಎಂಬಿವುಗಳನ್ನು ಕ್ರಮಬದ್ಧವಾಗಿಸಿ ಮಾನ ಮತ್ತು ದಿಕ್ಕಿನ ಆಧಾರದಲ್ಲಿ ರೂಪುರೇಖೆಗಳನ್ನು ತಯಾರಿಸುವರು. ರಾಮುವಿನ ಶಾಲೆ ಇರುವ ಪ್ರದೇಶದ ರೂಪುರೇಖೆಯನ್ನು ಚಿತ್ರ ಬಿ ಯಲ್ಲಿ ನೀಡಲಾಗಿದೆ. ಕೆಲವು ಸಂಸ್ಥೆಗಳ ಮುಂಭಾಗದಲ್ಲಿ ಆ ಸಂಸ್ಥೆಗೆ ಸಂಬಂಧಿಸಿದ ಮಾಹಿತಿಗಳನ್ನೊಳಗೊಂಡ ರೂಪುರೇಖೆಗಳನ್ನು ಪ್ರದರ್ಶಿಸಿರುವುದನ್ನು ಗಮನಿಸಿರುವಿರಲ್ಲವೇ?

ನಾವೊಂದು ರೂಪುರೇಖೆ ತಯಾರಿಸಿದರೋ? ನಿಮ್ಮ ತರಗತಿ ಕೋಣೆಯ ಸರಿಯಾದ ಅಳತೆಯನ್ನು ತೆಗೆದು ಅಧ್ಯಾಪಕರ ಸಹಾಯದಿಂದ ಒಂದು ರೂಪುರೇಖೆಯನ್ನು ತಯಾರಿಸಿರಿ.

ಹೆಚ್ಚು ವಿಶಾಲವಾದ ಪ್ರದೇಶಗಳ ಸ್ಪಷ್ಟ ಮತ್ತು ನಿಖರವಾದ ಚಿತ್ರವು ಭೂಪಟಗಳಾಗಿವೆ. ಇವುಗಳ ಕುರಿತು ನಾವು ಮತ್ತಷ್ಟು ತಿಳಿದುಕೊಳ್ಳೋಣ.

ಭೂಪಟದಲ್ಲಿ ಇರಬೇಕಾದ ಪ್ರಧಾನ ಘಟಕಗಳು

ಕೆಳಗೆ ನೀಡಿರುವ ಭೂಪಟ (ಚಿತ್ರ 6.1) ವನ್ನು ನೋಡಿರಿ.



ಭೂಪಟಗಳ ಪ್ರಧಾನ ಘಟಕಗಳು
(ಚಿತ್ರ 6.1)

ಇದು ಭೂಪಟಗಳಲ್ಲಿ ಇರಬೇಕಾದ ಪ್ರಧಾನ ಘಟಕಗಳನ್ನು ಗುರುತಿಸಿ ರಚಿಸಿದ ಭೂಪಟ. ಇದರಲ್ಲಿ A,B,C,D,E,F ಎಂದು ಗುರುತಿಸಿರುವವುಗಳು ಭೂಪಟದಲ್ಲಿರಬೇಕಾದ ಪ್ರಧಾನ ಘಟಕಗಳಾಗಿವೆ. ಭೂಪಟದ (ಚಿತ್ರ 6.1) ಮತ್ತು ಕೆಳಗೆ ನೀಡಿರುವ ಪಟ್ಟಿ (ಪಟ್ಟಿ 6.1)ಯ ಸಹಾಯದಿಂದ ಭೂಪಟದಲ್ಲಿರಬೇಕಾದ ಪ್ರಧಾನ ಘಟಕಗಳು ಯಾವುವೆಂದು ಕಂಡುಕೊಳ್ಳುವಿರಲ್ಲವೇ.

ಅಕ್ಷರಗಳು	ಭೂಪಟದ ಪ್ರಧಾನ ಘಟಕಗಳು
A	ಶೀರ್ಷಿಕೆ
B	ಮಾನ (ಸ್ಕೇಲ್)
C	ದಿಕ್ಕು
D	ಅಕ್ಷಾಂಶ – ರೇಖಾಂಶ ಸ್ಥಾನ
E	ಅಂಗೀಕೃತ ಬಣ್ಣ ಮತ್ತು ಚಿಹ್ನೆಗಳು
F	ಸೂಚಿಕೆ

ಪಟ್ಟಿ 6.1

ಇವುಗಳಲ್ಲಿ ಪ್ರತಿಯೊಂದರ ಪ್ರಾಧಾನ್ಯವೇನೆಂಬುದನ್ನು ಪರಿಶೀಲಿಸುವ.

ಶೀರ್ಷಿಕೆ

ಭೂಪಟದಲ್ಲಿ ಚಿತ್ರಿಸಿರುವ ಪ್ರದೇಶಗಳು ಯಾವುವೆಂದೂ ಭೂಪಟದಲ್ಲಿರುವ ವಿಷಯಗಳು ಯಾವುವೆಂದೂ ಶೀರ್ಷಿಕೆಯಲ್ಲಿ ಸೂಚಿಸಲಾಗುತ್ತದೆ. ಸಾಮಾನ್ಯವಾಗಿ ಇವುಗಳನ್ನು ಭೂಪಟದ ಮೇಲ್ಭಾಗದಲ್ಲಿ ನೀಡುತ್ತಾರೆ.

ಶಾಲೆಯ ಸಮಾಜ ವಿಜ್ಞಾನ ಪ್ರಯೋಗಾಲಯದಲ್ಲಿರುವ ಭೂಪಟವನ್ನು ಪರಿಶೀಲಿಸಿ ಯಾವೆಲ್ಲಾ ಪ್ರದೇಶಗಳ ಭೂಪಟಗಳಿವೆ ಎಂದು ಕಂಡುಕೊಂಡು ತಖ್ತೆಯನ್ನು ತಯಾರಿಸಿರಿ.

ಮಾನ (ಸ್ಕೇಲ್)

ನಮ್ಮ ಶಾಲಾ ಕಟ್ಟಡಗಳ ರೂಪುರೇಖೆ ರಚಿಸಿದರೋ? ಇದಕ್ಕೆ ನಾವು ಆರಂಭದಲ್ಲಿ ಅಳತೆಯ ಟೇಪ್ ಉಪಯೋಗಿಸಿ ಕಟ್ಟಡದ ಉದ್ದ ಮತ್ತು ಅಗಲವನ್ನು ಅಳೆಯಬೇಕು. ಅಳತೆ ಮಾಡಿದಾಗ ಸಿಕ್ಕಿದ್ದು 30 ಮೀಟರ್ ಉದ್ದ ಮತ್ತು 10 ಮೀಟರ್ ಅಗಲವೆಂದಾಗಿರಲಿ. ಈ ಅಳತೆಯನ್ನು ಉಪಯೋಗಿಸಿ ಶಾಲಾ ಕಟ್ಟಡದ ರೂಪುರೇಖೆ ರಚಿಸಬಹುದೇ? ಈ ಚಟುವಟಿಕೆಯನ್ನು ಈ ಕೆಳಗಿನ ಹಂತಗಳಂತೆ ಮಾಡಿನೋಡುವ.

ಹಂತ 1

ಕಟ್ಟಡದ ಉದ್ದ ಮತ್ತು ಅಗಲವನ್ನು ಅದೇ ರೀತಿ ಕಾಗದದಲ್ಲಿ ಬಿಡಿಸಲು ನೋಡಿರಿ. ಉದ್ದ ಮತ್ತು ಅಗಲ ಕಾಗದದಲ್ಲಿ ಹಿಡಿಯಲಾರದು. ಅಲ್ಲವೇ?

ಹಂತ 2

30 ಮೀಟರ್ ಉದ್ದ ಎನ್ನುವುದನ್ನು 30 ಸೆ.ಮೀ. ಆಗಿ ರಚಿಸಿದಿರಲ್ಲವೇ. ಈಗ ದೊಡ್ಡದೊಂದು ಪೇಪರ್‌ನಲ್ಲಿ ಈ ಉದ್ದವನ್ನು ಗುರುತಿಸಲು ಸಾಧ್ಯ. ಅಲ್ಲವೇ? ಇದೇ ರೀತಿಯಲ್ಲಾದರೆ ಕಟ್ಟಡದ ಅಗಲವನ್ನು ಎಳೆಯಲು ಎಷ್ಟು ಸೆಂಟಿಮೀಟರ್ ಬೇಕು? 10 ಸೆ.ಮೀ. ಬೇಕಾಗಬಹುದೆಂದು ತಿಳಿದಿರಲ್ಲವೇ.

ಹಂತ 3

ಇನ್ನು ಕಟ್ಟಡದ ಉದ್ದ ಮತ್ತು ಅಗಲವನ್ನು ಎಳೆಯಿರಿ.

ಶಾಲಾ ಕಟ್ಟಡದ ಪ್ರತಿಯೊಂದು ಮೀಟರ್ ಉದ್ದ ಮತ್ತು ಅಗಲವನ್ನು ಕಾಗದದಲ್ಲಿ ಬಿಡಿಸುವಾಗ ಒಂದು ಸೆಂಟಿಮೀಟರ್ ಎಂಬ ಅನುಪಾತವನ್ನು ನೀವು ಆಯ್ಕೆಮಾಡಿದ್ದೀರಿ. ಮಾನ ಎಂದರೆ ಉದ್ದ ಮತ್ತು ಅಗಲವನ್ನು ಅನುಕೂಲಕ್ಕೆ ತಕ್ಕಂತೆ ಬಿಡಿಸಲು ನಾವು ಇಲ್ಲಿ ಉಪಯೋಗಿಸಿದ ತಂತ್ರವಾಗಿದೆ. ನೀವು ಉದ್ದ ಮತ್ತು ಅಗಲ ಮುಂತಾದುವನ್ನು ಬರೆದದ್ದು 1 ಸೆಂಟಿಮೀಟರ್‌ಗೆ ಒಂದು ಮೀಟರ್ ಎಂಬ ಮಾನದಲ್ಲಿ ಆಗಿದೆ.

ಭೂಮಿಯಲ್ಲಿರುವ ಎರಡು ಸ್ಥಳಗಳೊಳಗಿನ ದೂರವನ್ನು ಭೂಪಟದಲ್ಲಿ ಅನುಪಾತದಲ್ಲಿ ಸೂಚಿಸುವುದನ್ನು ಮಾನ ಎನ್ನುತ್ತಾರೆ.

ಮಾನವನ್ನುಪಯೋಗಿಸಿ ಮಾತ್ರವೇ ಭೂಪಟವನ್ನು ರಚಿಸಲು ಸಾಧ್ಯ. ಇದರಿಂದ ವಿಶಾಲವಾದ ಭೂ ಪ್ರದೇಶಗಳನ್ನು ಅಗತ್ಯಕ್ಕೆ ತಕ್ಕಂತೆ ನಿಖರತೆಯಿಂದ ಕುಗ್ಗಿಸಿ ಬಿಡಿಸಲು ಸಾಧ್ಯವಾಗುವುದು. ಅಲ್ಲದೆ ಭೂಪಟದಲ್ಲಿರುವ ವಿವಿಧ ಸ್ಥಳಗಳ ನಡುವಿನ ಸರಿಯಾದ ದೂರವನ್ನು ಕಂಡುಕೊಳ್ಳಲು ಮಾನದ ಮೂಲಕ ಸಾಧ್ಯವಾಗುವುದು.

ಭೂಪಟದಲ್ಲಿರುವ ಮಾನಗಳು ಹಲವು ವಿಧ

ಹೇಳಿಕಾ ರೀತಿ, ಭಿನ್ನರಾಶಿ ರೀತಿ ಮತ್ತು ರೇಖಾ ರೀತಿ ಎಂಬೀ ಮೂರು ವಿಧಗಳಲ್ಲಿ ಮಾನವನ್ನು ಸೂಚಿಸಲಾಗುತ್ತದೆ.

ಹೇಳಿಕಾ ರೀತಿ – ಉದಾ – 1 ಸೆಂಟಿ ಮೀಟರ್‌ಗೆ 10 ಕಿಲೋ ಮೀಟರ್

ಭಿನ್ನರಾಶಿ ರೀತಿ – ಉದಾ – 1:10,00,000

ರೇಖಾ ರೀತಿ – ಉದಾ



ದಿಕ್ಕು

ದಿಕ್ಕು ಭೂಪಟದಲ್ಲಿರುವ ಇನ್ನೊಂದು ಪ್ರಧಾನ ಘಟಕವಾಗಿದೆ. ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಎಂಬಿವುಗಳು ನಾಲ್ಕು ಪ್ರಧಾನ ದಿಕ್ಕುಗಳಾಗಿವೆ.

ದಿಕ್ಸೂಚಿ (Magnetic Compass) ದಿಕ್ಕುಗಳನ್ನು ಕಂಡುಹಿಡಿಯುವ ಉಪಕರಣವಾಗಿದೆ. (ಚಿತ್ರ 6.2) ಪ್ರಧಾನ ದಿಕ್ಕುಗಳನ್ನು ಈಶಾನ್ಯ, ಆಗ್ನೇಯ, ನೈಋತ್ಯ ಮತ್ತು ವಾಯವ್ಯಗಳೆಂಬ ನಾಲ್ಕು ಉಪದಿಕ್ಕುಗಳಾಗಿ ವಿಂಗಡಿಸಲಾಗಿದೆ. ಕೆಳಗೆ ನೀಡಿರುವ ಚಿತ್ರ (ಚಿತ್ರ 6.3) ವನ್ನು ನೋಡಿ ಅವುಗಳು ಯಾವುವು ಎಂದು ಕಂಡುಹಿಡಿಯಿರಿ.

ದಿಕ್ಸೂಚಿ
(ಚಿತ್ರ6.2)

ದಿಕ್ಕುಗಳು
(ಚಿತ್ರ 6.3)

ದಿಕ್ಕುಗಳು ಭೂಪಟಗಳಲ್ಲಿ ಸ್ಥಳಗಳ ನಿಖರವಾದ ಸ್ಥಾನವನ್ನು ಗುರುತಿಸುವುದಕ್ಕೆ ಅಗತ್ಯವಾಗಿವೆ.

ಅಕ್ಷಾಂಶ ಮತ್ತು ರೇಖಾಂಶ ರೇಖೆಗಳು

ಚಿತ್ರ 6.4 ನ್ನು ನೋಡಿರಿ. ಇದರಲ್ಲಿ ನೀಟಕ್ಕೂ ಅಡಕ್ಕೂ ಎಳೆದಿರುವ ರೇಖೆಗಳನ್ನು ನೋಡಿದಿರಲ್ಲವೇ. ಸಮಾಜವಿಜ್ಞಾನ ಪ್ರಯೋಗಾಲಯದಲ್ಲಿರುವ ಭೂಗೋಳ ಮತ್ತು ಭೂಪಟಗಳನ್ನು ಪರಿಶೀಲಿಸಿರಿ. ಈ ರೀತಿಯ ರೇಖೆಗಳನ್ನು ನೋಡಿದಿರಲ್ಲವೇ?

ಭೂಗೋಳ ಮತ್ತು ಭೂಪಟಗಳಲ್ಲಿ ಅಡ್ಡವಾಗಿ ಎಳೆದಿರುವ ರೇಖೆಗಳನ್ನು ಅಕ್ಷಾಂಶ ರೇಖೆಗಳೆನ್ನುವರು.

ಭೂಮಧ್ಯರೇಖೆಗೆ ಸಮಾನಾಂತರವಾಗಿ ವೃತ್ತಾಕಾರದಲ್ಲಿ ಎಳೆದಿರುವ ಕಾಲ್ಪನಿಕ ರೇಖೆಗಳು ಅಕ್ಷಾಂಶರೇಖೆಗಳಾಗಿವೆ.

ಇವುಗಳನ್ನು ಡಿಗ್ರಿ ಅಳತೆಯಲ್ಲಿ ಸೂಚಿಸಲಾಗಿದೆ. ಭೂಗೋಳದ ಮಧ್ಯದ ಬಿಂದುವಿನ ಮೂಲಕ ಹಾದು ಹೋಗುವ ಅಕ್ಷಾಂಶ ರೇಖೆಯು ಭೂಮಧ್ಯರೇಖೆಯಾಗಿದೆ. ಇದು 0^{o} ಅಕ್ಷಾಂಶವಾಗಿದೆ. ಭೂಮಧ್ಯರೇಖೆಯಿಂದ ದಕ್ಷಿಣಕ್ಕೂ ಉತ್ತರಕ್ಕೂ 90^{o} ಯವರೆಗೆ ಅಕ್ಷಾಂಶ ರೇಖೆಗಳನ್ನು ಎಳೆಯಲಾಗಿದೆ. 90^{o} ಉತ್ತರ ಅಕ್ಷಾಂಶವನ್ನು ಉತ್ತರಧ್ರುವವೆಂದೂ, 90^{o} ದಕ್ಷಿಣ ಅಕ್ಷಾಂಶವನ್ನು ದಕ್ಷಿಣಧ್ರುವವೆಂದೂ ಕರೆಯಲಾಗುವುದು.



ಚಿತ್ರ 6.4

ಭೂಗೋಳವನ್ನು ನೋಡಿ ಪ್ರಧಾನ ಅಕ್ಷಾಂಶ ರೇಖೆಗಳನ್ನು ಹಾಗೂ ಅವುಗಳ ಡಿಗ್ರಿಗಳನ್ನು ಕಂಡುಹಿಡಿಯಿರಿ.

ಅಕ್ಷಾಂಶ ರೇಖೆಗಳಿಗೆ ಲಂಬವಾಗಿ ಉತ್ತರಧ್ರುವ ಮತ್ತು ದಕ್ಷಿಣಧ್ರುವಗಳನ್ನು ಜೋಡಿಸಿ ಎಳೆದ ರೇಖೆಗಳನ್ನು ನೋಡಿದಿರಲ್ಲವೇ. ಇವುಗಳನ್ನು ರೇಖಾಂಶ ರೇಖೆಗಳೆಂದು ಕರೆಯುವರು. ಇವುಗಳನ್ನು ಡಿಗ್ರಿ ಅಳತೆಯಲ್ಲಿ ನೀಡಲಾಗಿದೆ.

ಭೂಮಿಯ ಉತ್ತರ ಧ್ರುವ ಮತ್ತು ದಕ್ಷಿಣ ಧ್ರುವಗಳನ್ನು ಜೋಡಿಸುವ ಅರ್ಧ ವೃತ್ತಾಕೃತಿಯಲ್ಲಿರುವ ಕಾಲ್ಪನಿಕ ರೇಖೆಗಳು ರೇಖಾಂಶ ರೇಖೆಗಳಾಗಿವೆ.

ಭೂಗೋಳವನ್ನು ನೋಡಿ ಪ್ರಧಾನ ರೇಖಾಂಶರೇಖೆಗಳಾದ 0^{o} ರೇಖಾಂಶ ರೇಖೆ ಮತ್ತು 180^{o} ರೇಖಾಂಶ ರೇಖೆಯನ್ನು ಕಂಡುಹಿಡಿಯಿರಿ.

ಭೂಪಟ, ಭೂಗೋಳ ಇತ್ಯಾದಿಗಳನ್ನು ಉಪಯೋಗಿಸಿ ಅಕ್ಷಾಂಶ ಮತ್ತು ರೇಖಾಂಶ ರೇಖೆಗಳ ಅಧಾರದಲ್ಲಿ ಒಂದು ಸ್ಥಳದ ಸ್ಥಾನ ನಿರ್ಣಯ ಮಾಡಲಾಗುತ್ತದೆ.

ಜಾಗತಿಕ ಭೂಪಟ, ಭೂಗೋಳ ಇತ್ಯಾದಿಗಳನ್ನು ಗಮನಿಸಿ ಭಾರತದ ಸ್ಥಾನವು ಯಾವೆಲ್ಲಾ ಅಕ್ಷಾಂಶ ಮತ್ತು ರೇಖಾಂಶ ರೇಖೆಗಳ ನಡುವೆ ಇದೆಯೆಂದು ಕಂಡುಹಿಡಿಯಿರಿ.

ಅಂಗೀಕೃತ ಗುರುತುಗಳು ಮತ್ತು ಚಿಹ್ನೆಗಳು

ಭೂಮಿಯ ಮೇಲ್ಮೈಯ ವಿವಿಧ ವಿಶೇಷತೆಗಳಾದ ಪರ್ವತಗಳು, ಪೀಠಭೂಮಿಗಳು, ಸಮತಲಗಳು, ಜಲಾಶಯಗಳು, ಸಾರಿಗೆ ಶೃಂಖಲೆಗಳು, ವಸತಿಗಳು, ಕೃಷಿ ಭೂಮಿಗಳು ಮುಂತಾದವುಗಳನ್ನು ಭೂಪಟಗಳಲ್ಲಿ ಗುರುತಿಸುವಾಗ ಅಂತಾರಾಷ್ಟ್ರೀಯವಾಗಿ ಅಂಗೀಕರಿಸಲಾಗಿರುವ ಬಣ್ಣಗಳು ಮತ್ತು ಚಿಹ್ನೆಗಳನ್ನು ಉಪಯೋಗಿಸಲಾಗುತ್ತದೆ.

ಸಮಾಜ ವಿಜ್ಞಾನ ಪ್ರಯೋಗಾಲಯದಲ್ಲಿರುವ ಭೂಪಟಗಳನ್ನು ನೋಡಿ ಅವುಗಳಲ್ಲಿರುವ ಬಣ್ಣಗಳನ್ನು ಮತ್ತು ಚಿಹ್ನೆಗಳನ್ನು ತಿಳಿದುಕೊಂಡಿರಲ್ಲವೇ.

ಸೂಚಿಕೆ (ಇಂಡೆಕ್ಸ್)

ಭೂಪಟವನ್ನು ಸುಲಭದಲ್ಲಿ ಓದಲು ಇರುವ ಮಾರ್ಗವು ಸೂಚಿಕೆ (Index/Key) ಆಗಿದೆ. ಭೂಪಟದಲ್ಲಿರುವ ಬಣ್ಣಗಳು ಮತ್ತು ಚಿಹ್ನೆಗಳು ಏನನ್ನು ಸೂಚಿಸುತ್ತವೆ ಎಂಬುದನ್ನು ತೋರಿಸಲು ಸೂಚಿಕೆಯನ್ನು ಉಪಯೋಗಿಸಲಾಗುತ್ತದೆ. ಈ ಸೂಚಿಕೆಯನ್ನು ಉಪಯೋಗಿಸಿ ಭೂಮಿಯ ವಿಶೇಷತೆಗಳ ಕುರಿತು ತಿಳಿದುಕೊಳ್ಳಬಹುದು.

ಸಮಾಜ ವಿಜ್ಞಾನ ಪ್ರಯೋಗಾಲಯದಲ್ಲಿರುವ ಭೂಪಟಗಳಲ್ಲಿರುವ ಸೂಚಿಕೆಯನ್ನು ವಿಶ್ಲೇಷಿಸಿ ಭೂಪಟದ ವಿಶೇಷತೆಗಳನ್ನು ತಿಳಿದುಕೊಳ್ಳುವಿರಲ್ಲವೇ?

ಮೇಲೆ ವಿವರಿಸಿರುವ ಭೂಪಟದಲ್ಲಿರಬೇಕಾದ ಘಟಕಗಳನ್ನು ಒಳಗೊಂಡಂತೆ ತಯಾರಿಸಲಾದ ಭೂಪಟಗಳು ಸ್ಪಷ್ಟವೂ ನಿಖರವೂ ಆದ ಭೂಪಟಗಳಾಗಿವೆ.

ಭೂಪಟಗಳ ಉಪಯೋಗ, ಚರಿತ್ರೆ, ಅಗತ್ಯವಾದ ಘಟಕಗಳು ಎಂಬೀ ಕಾರ್ಯಗಳನ್ನು ಈ ಅಧ್ಯಾಯದಲ್ಲಿ ನಾವು ಚರ್ಚಿಸಿದ್ದೇವೆ. ನಿತ್ಯ ಜೀವನದ ವಿವಿಧ ಸಂದರ್ಭಗಳಲ್ಲಿ ಈ ತಿಳುವಳಿಕೆಯನ್ನು ನೀವು ಉಪಯೋಗಿಸುವಿರಲ್ಲವೇ?

ಕ್ರೋಡೀಕರಣ

- ಆಧುನಿಕ ಯುಗದಲ್ಲಿ ಭೂಪಟಗಳಿಗೆ ಅತಿ ಹೆಚ್ಚು ಪ್ರಾಧಾನ್ಯವಿದೆ.
- ವಿವಿಧ ತರದ ಭೂಪಟಗಳನ್ನು ವಿವಿಧ ಕ್ಷೇತ್ರಗಳಲ್ಲಿ ಉಪಯೋಗಿಸಲಾಗುತ್ತದೆ.
- ಇಂದು ನಾವು ನೋಡುವ ಭೂಪಟಗಳು ವಿವಿಧ ಘಟ್ಟಗಳನ್ನು ದಾಟಿ ವಿಕಾಸಗೊಂಡದ್ದಾಗಿವೆ. ಭೂಪಟಗಳ ಚರಿತ್ರೆಯು ಮಾನವ ನಾಗರಿಕತೆಗಳಷ್ಟೇ ಪ್ರಾಚೀನತೆಯನ್ನು ಹೊಂದಿವೆ.
- ಶೀರ್ಷಿಕೆ, ಮಾನ, ದಿಕ್ಕು, ಅಕ್ಷಾಂಶಗಳು, ಅಂಗೀಕೃತ ಗುರುತುಗಳು, ಚಿಹ್ನೆಗಳು, ಸೂಚಿಕೆ ಮುಂತಾದವುಗಳು ಭೂಪಟದಲ್ಲಿರಬೇಕಾದ ಅವಶ್ಯಕ ಘಟಕಗಳಾಗಿವೆ.

ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಭೂಪಟಗಳ ಚರಿತ್ರೆ ಮತ್ತು ಭೂಪಟಗಳ ಪ್ರಾಧಾನ್ಯದ ಕುರಿತು ತಿಳುವಳಿಕೆಯನ್ನು ಗಳಿಸುವುದು.

- ರೇಖಾ ಚಿತ್ರ, ರೂಪುರೇಖೆ, ಭೂಪಟಗಳ ನಡುವಿನ ವ್ಯತ್ಯಾಸಗಳನ್ನು ತಿಳಿದುಕೊಳ್ಳುವುದು.
- ತರಗತಿಯಲ್ಲಿ ಗಳಿಸಿದ ತಿಳುವಳಿಕೆಯ ಆಧಾರದಲ್ಲಿ ತನ್ನ ಪರಿಸರದ ರೇಖಾ ಚಿತ್ರ, ರೂಪುರೇಖೆಗಳನ್ನು ತಯಾರಿಸಲು ಸಾಧ್ಯವಾಗುವುದು.
- ಭೂಪಟಗಳ ಪ್ರಧಾನ ಘಟಕಗಳ ಕುರಿತು ತಿಳುವಳಿಕೆಯನ್ನು ಗಳಿಸುವುದು.

ಮೌಲ್ಯನಿರ್ಣಯ ಮಾಡುವ

1. "ಭೂಪಟಗಳನ್ನು ಉಪಯೋಗಿಸುವವರು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಮಾತ್ರವಲ್ಲ" ಈ ಹೇಳಿಕೆಯನ್ನು ಸಮರ್ಥಿಸಿರಿ.
2. ಭೂಪಟಗಳ ಪ್ರಧಾನ ಘಟಕಗಳು ಯಾವುವು ಎಂಬುದನ್ನು ತಿಳಿಸಿರಿ.
3. ರೇಖಾ ಚಿತ್ರ ಮತ್ತು ರೂಪುರೇಖೆಯ ನಡುವಿನ ವ್ಯತ್ಯಾಸಗಳನ್ನು ಬರೆಯಿರಿ.
4. ಭೂಪಟವೊಂದರ ಮಾನ 1 ಸೆಂಟೀಮೀಟರ್‌ಗೆ 15 ಕಿಲೋ ಮೀಟರ್ ಆಗಿದೆ. ಆ ಭೂಪಟದ ಎರಡು ಸ್ಥಳಗಳ ನಡುವಿನ ದೂರವು 10 ಸೆಂಟೀಮೀಟರ್ ಎಂದಿರಲಿ. ಭೂಮಿಯಲ್ಲಿ ಈ ಸ್ಥಳಗಳ ನಡುವಿನ ನಿಜವಾದ ದೂರವನ್ನು ಕಂಡು ಹಿಡಿಯಿರಿ.

ಮುಂದುವರಿದ ಚಟುವಟಿಕೆಗಳು

1. ರಾಮುವಿನ ಮನೆಯಿರುವ ವಾರ್ಡಿನ ವಿವರಣೆಯನ್ನು ಕೆಳಗೆ ನೀಡಲಾಗಿದೆ. ಈ ಮಾಹಿತಿಗಳ ಆಧಾರದಲ್ಲಿ ಆ ಪ್ರದೇಶದ ರೂಪುರೇಖೆಯನ್ನು ರಚಿಸಿರಿ.

- ವಾರ್ಡಿನ ಉದ್ದ 7 ಕಿಲೋ ಮೀಟರ್ ಮತ್ತು ಅಗಲ 4 ಕಿಲೋ ಮೀಟರ್.
- ಈ ವಾರ್ಡಿನ ಉತ್ತರದಿಂದ ದಕ್ಷಿಣಕ್ಕೆ ನದಿಯೊಂದು ಹರಿದು ಹೋಗುತ್ತದೆ.
- ಈ ಪ್ರದೇಶದ ಪಶ್ಚಿಮ ಮತ್ತು ವಾಯವ್ಯ ಭಾಗದಲ್ಲಿ ವಿಶಾಲವಾದ ಕೃಷಿ ಭೂಮಿ ಇದೆ.
- ಕೃಷಿ ಭೂಮಿ ಮತ್ತು ನದಿಯ ನಡುವಿನ ಪ್ರದೇಶದಲ್ಲಿ ರಾಮುವಿನ ಮನೆ ಒಳಗೊಂಡಂತೆ ಹಲವಾರು ಮನೆಗಳು ಇವೆ.
- ರಾಮುವಿನ ಮನೆಯು ಒಳಗೊಂಡಿರುವ ವಸತಿ ಸಮುಚ್ಚಯದಿಂದ ನದಿಗೆ ಸಮಾನಾಂತರವಾಗಿ ಡಾಮರು ರಸ್ತೆಯೊಂದು ಹಾದುಹೋಗುವುದು.
- ಈ ವಾರ್ಡಿನ ನೈಋತ್ಯ ಭಾಗದಲ್ಲಿ ಒಂದು ಆರಾಧನಾಲಯ ಮತ್ತು ಅದಕ್ಕೆ ಹೊಂದಿಕೊಂಡಂತೆ ಒಂದು ಬಾವಿಯಿದೆ.

ಇದಕ್ಕಾಗಿ ಕೆಳಗೆ ನೀಡಿರುವ ಬಣ್ಣ ಮತ್ತು ಚಿಹ್ನೆಗಳನ್ನು ಉಪಯೋಗಿಸುವಿರಲ್ಲವೇ.

	ಮನೆಗಳು
	ಡಾಮರು ರಸ್ತೆ
	ನದಿ
	ಆರಾಧನಾಲಯ
	ಬಾವಿ
ಹಳದಿ ಬಣ್ಣ	ಕೃಷಿಭೂಮಿ

2. ಒಂದು ಚಾರ್ಟಿನಲ್ಲಿ ಭಾರತದ ರೂಪುರೇಖೆಯನ್ನು ರಚಿಸಿ ಅದರಲ್ಲಿ ದಿಕ್ಕುಗಳನ್ನು ಗುರುತಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.

7 ಭೂಮಿ ಹಾಗೂ ಜೀವ ಜಗತ್ತು

ಸುಮಾರು 450 ಕೋಟಿ ವರ್ಷಗಳ ಹಿಂದೆ ಆ ಘಟನೆ ನಡೆದಿತ್ತು. ಸೂರ್ಯನ ಒಂದು ಭಾಗವು ತುಂಡಾಗಿ ಬೇರ್ಪಟ್ಟಿತ್ತು. ಅದು ಸ್ಫೋಟಗೊಂಡು ಹಲವು ತುಂಡುಗಳಾಗಿ ವಿಭಜನೆಗೊಂಡು, ಭೂಮಿಯನ್ನು ಒಳಗೊಂಡ ಎಂಟು ಗ್ರಹಗಳೂ ಅವುಗಳ ಉಪಗ್ರಹಗಳೂ ಉಂಟಾದುವು. ಈ ರೀತಿ ಉಂಟಾದ ಗ್ರಹಗಳಲ್ಲಿ ಭೂಮಿಯೂ ಒಂದಾಗಿದೆ. ನಿರಂತರವಾಗಿ ನಡೆದ ಕುದಿಯುವಿಕೆಯ ಪರಿಣಾಮವಾಗಿ ಭಾರವಾಗಿರುವ ವಸ್ತುಗಳು ಭೂಮಿಯ ಕೇಂದ್ರ ಭಾಗಕ್ಕೂ, ಹಗುರವಾದ ವಸ್ತುಗಳು ಭೂಮಿಯ ಮೇಲೆಯೂ ಕ್ರಮೀಕರಿಸಲ್ಪಟ್ಟುವು. ಹಗುರವಾದ ಅನಿಲಗಳು ಭೂಮಿಯ ಆವರಣವಾಗಿ ಬದಲಾದುವು. ದಶಲಕ್ಷ ವರ್ಷಗಳ ವರೆಗೆ ಈ ಪ್ರಕ್ರಿಯೆಯು ಮುಂದುವರಿಯಿತು. ಆ ಸಮಯದಲ್ಲೆಲ್ಲಾ ಭೂಮಿಯ ಮೇಲ್ಮೈಯು ಕುದಿಯುತ್ತಲೇ ಇತ್ತು.

ನಿರಂತರ ಮತ್ತು ವ್ಯಾಪಕವಾದ ಅಗ್ನಿ ಪರ್ವತ ಸ್ಫೋಟಗಳಿಂದ ಭೂಮಿಯ ಅಂತರಾಳದಲ್ಲಿದ್ದ ನೀರಾವಿಯೂ ಅನಿಲಗಳೂ ಹೊರಬಂದವು. ಈ ನೀರಾವಿ ತಣಿದು ಮೋಡಗಳಾಗಿ ಹಲವಾರು ವರ್ಷಗಳ ವರೆಗೆ ನಿರಂತರವಾಗಿ ಮಳೆ ಸುರಿಯಿತು. ಭೂಮಿಯ ಮೇಲ್ಮೈಯಲ್ಲಿರುವ ತಗ್ಗಾದ ಪ್ರದೇಶಗಳೆಲ್ಲ ಜಲಾವೃತಗೊಂಡವು. ಈ ರೀತಿಯಲ್ಲಿ ಸಾಗರಗಳುಂಟಾದುವು. ಭೂಮಿಯಲ್ಲಿ ಜೀವದ ಮಿಡಿತವುಂಟಾಗಲು ಮತ್ತೆ ಲಕ್ಷಗಟ್ಟಲೆ ವರ್ಷಗಳು ಬೇಕಾದುವು. ಕೊನೆಯಲ್ಲಿ ನಾವು ಈಗ ಕಾಣುತ್ತಿರುವ ಜೀವಿಗಳ, ಸಸ್ಯಜಾಲಗಳ, ಜಂತುಗಳ ಸಾವಿರಾರು ವಿಧಗಳು ವಿಕಾಸಗೊಂಡವು... ಕೊನೆಯಲ್ಲಿ ಮಾನವನೂ..



ಚಿತ್ರ 7.1

ನೆಲ, ಜಲ ಮತ್ತು ವಾಯು, ಕೊನೆಯಲ್ಲಿ ಜೀವಜಾಲಗಳು ನಾವಿಂದು ಕಾಣುವ ರೀತಿಯಲ್ಲಿ ವಿಕಾಸಗೊಂಡು ಉಂಟಾಯಿತೆಂಬ ವಿಜ್ಞಾನಿಗಳ ನಿಗಮನವನ್ನು ಓದಿದಿರಲ್ಲವೆ. ಭೂಮಿಯಲ್ಲಿ ನೆಲ, ಜಲ, ವಾಯು ಎಂಬಿವುಗಳನ್ನು ಒಳಗೊಂಡಿರುವ ಮಂಡಲವು ಜೈವ ಮಂಡಲದ ಅಸ್ತಿತ್ವಕ್ಕೆ ಆಧಾರವಾಗಿದೆ. ಈ ನಾಲ್ಕು ಮಂಡಲಗಳ ಕುರಿತು ಇನ್ನೂ ಹೆಚ್ಚು ತಿಳಿಯಬೇಡವೇ?

ಶಿಲಾಮಂಡಲ

ಉನ್ನತವಾದ ಪರ್ವತಗಳು, ವಿಶಾಲವಾದ ಪೀಠಭೂಮಿಗಳು, ಕರಾವಳಿ ಪ್ರದೇಶಗಳು, ಮರುಭೂಮಿಗಳು, ಸಮತಲಗಳು, ದ್ವೀಪಗಳು ಸಮುದ್ರದ ಅಡಿಭಾಗದ ವಿವಿಧ ಭೂಸ್ವರೂಪಗಳು.. ಹೀಗೆ ಎಷ್ಟೊಂದು ವೈವಿಧ್ಯದಿಂದಿದೆ ಈ ಭೂಮಿಯ ಮೇಲ್ಮೈ! ಈ ಭೂಸ್ವರೂಪಗಳನ್ನೆಲ್ಲಾ ಒಳಗೊಂಡಿರುವುದೂ ಶಿಲೆಗಳು ಮತ್ತು ಮಣ್ಣುಗಳಿಂದ ರೂಪುಗೊಂಡಿರುವುದೂ ಆದ ಘನ ಭಾಗವು ಶಿಲಾಮಂಡಲವಾಗಿದೆ. ಭೂಮಿಯ ಮೇಲ್ಮೈಯ ಅತಿ ಉನ್ನತ ಭಾಗವಾದ ಎವರೆಸ್ಟ್ ಶಿಖರ ಹಾಗೂ ಸಮುದ್ರದಲ್ಲಿ ಅತ್ಯಂತ ಆಳವಾದ ಫೆಸಿಫಿಕ್ ಸಾಗರದ ಚಾಲೆಂಜರ್ ಡೀಪ್ ಮೊದಲಾದುವುಗಳು ಶಿಲಾಮಂಡಲದ ಭಾಗವೆ ಆಗಿವೆ!

ಶಿಲಾಮಂಡಲದ ಪ್ರಧಾನ ಭೂಸ್ವರೂಪಗಳನ್ನು ನಾವು ಪರಿಚಯಿಸೋಣ (ಚಿತ್ರ 7.2)

ಪ್ರಧಾನ ಭೂಸ್ವರೂಪಗಳು

ಪರ್ವತಗಳು



ಸಮುದ್ರಮಟ್ಟದಿಂದ 900 ಮೀಟರ್‌ಗಿಂತ ಹೆಚ್ಚು ಎತ್ತರವಿರುವ ಕಡಿದಾದ ಬದಿಗಳಿರುವ ಭೂಸ್ವರೂಪಗಳು

ಪೀಠ ಭೂಮಿಗಳು



ಮೇಲ್ಭಾಗವು ಹೆಚ್ಚುಕಡಿಮೆ ಸಮತಟ್ಟಾಗಿದ್ದು, ಸುತ್ತುಮುತ್ತಲಿಗಿಂತ ಎತ್ತರವಾಗಿರುವ ಭೂಸ್ವರೂಪಗಳು

ಸಮತಲಗಳು

ತುಲನಾತ್ಮಕವಾಗಿ ತಗ್ಗಾಗಿಯೂ ಸಮತಟ್ಟಾಗಿಯೂ ಇರುವ ವಿಶಾಲವಾದ ಪ್ರದೇಶಗಳು

ಚಿತ್ರ 7.2

ನೆಲ ಭಾಗದಲ್ಲಿ ಕಾಣುವ ಹಾಗೆ ಪರ್ವತಗಳು, ಸಮತಲಗಳು, ಕಂದಕಗಳು, ಅಗ್ನಿಪರ್ವತಗಳು ಇವೆಲ್ಲ ಸಮುದ್ರದ ಅಡಿಭಾಗದಲ್ಲೂ ಇವೆ.

ಚಿತ್ರ 7.3 ನ್ನು ನಿರೀಕ್ಷಣೆ ಮಾಡಿರಿ.

ಚಿತ್ರ 7.3

ಶಿಲಾಮಂಡಲದಿಂದ ಮನುಷ್ಯನು ಯಾವೆಲ್ಲಾ ರೀತಿಯ ಪ್ರಯೋಜನಗಳನ್ನು ಪಡೆಯುವನೆಂದು ಮೇಲಿನ ಉದಾಹರಣೆಗಳಿಂದ ತಿಳಿಯಬಹುದು. ಇದಲ್ಲದೆ ಬೇರೆ ಯಾವೆಲ್ಲಾ ರೀತಿಯಲ್ಲಿ ಶಿಲಾಮಂಡಲವು ಮನುಷ್ಯನಿಗೆ ಪ್ರಯೋಜನಕಾರಿಯಾಗಿದೆ ಎಂದು ಕಂಡುಕೊಳ್ಳುವಿರಲ್ಲವೇ.

ಶಿಲೆಗಳಿಂದಲೂ, ಮಣ್ಣಿನಿಂದಲೂ ಶಿಲಾಮಂಡಲವು ರೂಪುಗೊಂಡಿವೆಯೆಂದು ತಿಳಿದಿರಲ್ಲವೇ? ಮಾನವನ ಮತ್ತು ಸಸ್ಯಜಾಲಗಳ ಅಸ್ತಿತ್ವಕ್ಕೆ ಮಣ್ಣು ಆಧಾರವಾಗಿದೆ.

ಮಣ್ಣನ್ನು ತಿಳಿಯುವ

ಅನೇಕ ವರ್ಷಗಳಿಂದ ಶಿಲೆಗಳ ಮೇಲೆ ಬೀಳುವ ಬಿಸಿಲು, ಮಳೆ ಮತ್ತು ಮಂಜಿನ ಪ್ರಭಾವದಿಂದ ಅವುಗಳು ಹುಡಿಯಾಗುತ್ತವೆ. ಕೆಲವೊಮ್ಮೆ ಅವುಗಳಲ್ಲಿ ರಾಸಾಯನಿಕವಾದ ಬದಲಾವಣೆಯು ಉಂಟಾಗುವುದಿದೆ. ಅದರಲ್ಲಿ ಸಸ್ಯ ಮತ್ತು ಜೀವಿಗಳ ಮೃತ ಅವಶೇಷಗಳು ಕೊಳೆತು ಸೇರಿಕೊಳ್ಳುವುದರಿಂದ ಜೈವಾಂಶವೂ ಇದಕ್ಕೆ ಸೇರ್ಪಡೆಯಾಗುವುದು. ಸಾವಿರಾರು ವರ್ಷಗಳಿಂದ ನಿರಂತರವಾಗಿ ನಡೆಯುವ ಈ ರೀತಿಯ ಪ್ರಕ್ರಿಯೆಯ ಫಲವಾಗಿ ಮಣ್ಣು ಉಂಟಾಗುತ್ತದೆ. ನಿಶ್ಚಿತ ಪ್ರಮಾಣದಲ್ಲಿ ಜಲ, ವಾಯು ಇತ್ಯಾದಿಗಳೊಂದಿಗೆ ಜೈವಾಂಶಗಳೂ ಸೂಕ್ಷ್ಮಜೀವಿಗಳೂ ಮಣ್ಣಿನಲ್ಲಿವೆ. ನಮ್ಮ ವಿವೇಚನಾರಹಿತವಾದ ಚಟುವಟಿಕೆಗಳು ಕೆಲವೊಮ್ಮೆ ಮಣ್ಣಿನ ಫಲವತ್ತತೆಯನ್ನು ನಾಶಮಾಡುತ್ತವೆ.

ಮಣ್ಣಿನ ಫಲವತ್ತತೆಯ ಮೇಲೆ ದುಷ್ಪರಿಣಾಮವನ್ನು ಬೀರುವ ಮಾನವನ ಯಾವೆಲ್ಲಾ ಚಟುವಟಿಕೆಗಳು ನಿಮಗೆ ತಿಳಿದಿದೆ?

- ರಾಸಾಯನಿಕ ಗೊಬ್ಬರಗಳ ಅಮಿತವಾದ ಬಳಕೆ
- ಕೀಟನಾಶಕಗಳ ಅಮಿತವಾದ ಉಪಯೋಗ
-

ನಿಮ್ಮ ಪ್ರದೇಶದ ಕೃಷಿ ಅಧಿಕಾರಿಯನ್ನು ಶಾಲೆಗೆ ಆಹ್ವಾನಿಸಿರಿ. ಮಣ್ಣು ಸಂರಕ್ಷಣೆಯ ಕುರಿತು ಅವರೊಂದಿಗೆ ಸಂದರ್ಶನವನ್ನು ಮಾಡಿರಿ. ಇದಕ್ಕೆ ಅಗತ್ಯವಾದ ಪ್ರಶ್ನಾವಳಿಯನ್ನು ತರಗತಿಯಲ್ಲಿ ಚರ್ಚಿಸಿ ತಯಾರಿಸಿರಿ. ಶತಮಾನಗಳಿಂದ ನಡೆದ ಪ್ರಕ್ರಿಯೆಯಿಂದ ಉಂಟಾದ ಮಣ್ಣು ಇಂದು ಮಾನವನ ವಿವೇಚನ ರಹಿತವಾದ ಹಸ್ತಕ್ಷೇಪದಿಂದ ಎಂದೆಂದಿಗೂ ನಾಶವಾಗುವ ಇಲ್ಲವೇ ನಷ್ಟವಾಗುವ ರೀತಿ ಗೋಚರಿಸುತ್ತಿದೆ. ಮಾನವನ ವಿವೇಚನ ರಹಿತವಾದ ಹಸ್ತಕ್ಷೇಪವು ಮಣ್ಣನ್ನು ಮಾತ್ರವಲ್ಲ ಶಿಲಾಮಂಡಲವನ್ನೇ ನಾಶಮಾಡುತ್ತಿದೆ. ಇದಕ್ಕೆ ಕೆಲವು ಉದಾಹರಣೆಗಳನ್ನು ಕೆಳಗೆ ಕೊಡಲಾಗಿದೆ.

ಪ್ರಕೃತಿಯಲ್ಲಿ ಒಂದಿಂಚು ದಪ್ಪದಲ್ಲಿ ಮಣ್ಣು ಉಂಟಾಗಲು ಸುಮಾರು ಸಾವಿರಕ್ಕಿಂತಲೂ ಹೆಚ್ಚು ವರ್ಷಗಳು ಬೇಕು.

ಕಣ್ಮರೆಯಾಗುತ್ತಿರುವ ಸಮತಲಗಳು

ಒಂದು ಕಾಲದಲ್ಲಿ ವಿಶಾಲವಾದ ಬಯಲುಗಳು ಕೇರಳದ ಸ್ವಂತಿಕೆಯ ವಿಶೇಷತೆಯಾಗಿದ್ದುವು ಎಂಬುದನ್ನು ತಿಳಿದಿರುವಿರಲ್ಲವೇ. ನಮ್ಮ ಬಯಲುಗಳನ್ನು ಮತ್ತು ಇತರ ಜೌಗು ಪ್ರದೇಶಗಳನ್ನು ಮಣ್ಣು ಹಾಕಿ ತುಂಬಿಸುತ್ತಿದ್ದಾರೆ. ಮಳೆಯ ನೀರು ಭೂಮಿಯ ಅಂತರಾಳಕ್ಕೆ ಇಂಗುವ ಈ ರೀತಿಯ ಪ್ರಾಕೃತಿಕ ಸ್ಥಳಗಳನ್ನು ನಾವಿಂದು ಮಣ್ಣು ತುಂಬಿಸುವ ಮೂಲಕ ನಾಶ ಮಾಡುತ್ತಿದ್ದೇವೆ. ಕೆಲವು ಕಡೆಗಳಲ್ಲಿ ಅನೇಕ ಕಾಲದಿಂದ ಬಯಲಿನಲ್ಲಿ ಸಂಗ್ರಹಗೊಂಡಿರುವ ಕೆಸರನ್ನು ಇಟ್ಟಿಗೆ ನಿರ್ಮಾಣಕ್ಕಾಗಿ ಮಾನವರು ಅಗೆದು ಕುಲುಮೆಯಲ್ಲಿ ಸುಡುತ್ತಿದ್ದಾರೆ. ಬಯಲಿನಲ್ಲಿರುವ ಕೆಸರು ಮಣ್ಣು ನೀರು ಸಂಗ್ರಹಗೊಳ್ಳಲು ನೆರವಾಗುವುದು. ಕೆಸರಿಲ್ಲದಿದ್ದರೆ ಬಯಲಿಲ್ಲ.

ಕೆಲವು ಕಡೆ ಬಯಲಿನಲ್ಲಿರುವ ಕೆಸರನ್ನು ಅಗೆದು ಅದರಡಿಯಲ್ಲಿರುವ ಹೊಗೆಯನ್ನು ಮಾನವನು ಖನನ ಮಾಡುತ್ತಾನೆ!

ಚಿತ್ರ 7.4

ಹೊಳೆಯಿಂದ ಹೊಗೆ ಖನನ

ಸಮೃದ್ಧವಾಗಿ ನೀರು ಹರಿದು ಹೋಗುವ ನಮ್ಮ ಬಹುತೇಕ ನದಿಗಳಲ್ಲಿ ಮಳೆಗಾಲ ಕೊನೆಗೊಳ್ಳುವುದರೊಂದಿಗೆ ನೀರಿನ ಮಟ್ಟವು ಕಡಿಮೆಯಾಗುತ್ತದೆ. ನದಿಗಳಿಂದ ಹೊಗೆಯನ್ನು ಖನನ ಮಾಡುವುದರ (Sand mining) ಫಲವಾಗಿ ನದಿಗಳ ಆಳವು ಹೆಚ್ಚಾಗುವುದು. ಇದು ಸಮೀಪದ ಪ್ರದೇಶಗಳ ಬಾವಿಯಲ್ಲಿನ ನೀರಿನ ಮಟ್ಟ ಕಡಿಮೆಯಾಗಲು ಕಾರಣವಾಗುವುದು. ಬಹುತೇಕ ನದಿಗಳ ಆಳವು ಹೆಚ್ಚಾಗಿ ತಳಭಾಗದಲ್ಲಿರುವ ಶಿಲೆಯವರೆಗೆ (Bedrock) ತಲುಪಿರುವುದನ್ನು ಕಾಣಬಹುದು. ಇದು ನದಿಗಳ ಬದಿಗಳು (Bank shelving) ಜರಿದು ಬೀಳಲು ಕಾರಣವಾಗುವುದು.

ಹೊಗೆಗಾಗಿ ಮಾನವರು ನದೀ ತೀರಗಳನ್ನು ವ್ಯಾಪಕವಾಗಿ ಅಗೆಯುತ್ತಿದ್ದಾರೆ. ಫಲವತ್ತಾದ ನದೀ ತೀರಗಳನ್ನು ಈ ರೀತಿಯಲ್ಲಿ ಅಗೆಯುವುದು ಜೀವಿಗಳಿಗೂ ಸೊತ್ತಿಗೂ ವ್ಯಾಪಕವಾದ ಹಾನಿಯನ್ನು ಉಂಟುಮಾಡುವುದು.

ಗುಡ್ಡ ಅಗೆತ

ಸಂಚರಿಸುವ ಗುಡ್ಡಗಳು

ಹಿಂದೆ ಗುಡ್ಡಗಳನ್ನು ಹತ್ತಿ ಇಳಿಯುವ ಲಾರಿಗಳನ್ನು ಸಾಮಾನ್ಯವಾಗಿ ನೋಡಬಹುದಾಗಿತ್ತು. ಇಂದು ಲಾರಿಯಲ್ಲಿ ಹತ್ತಿ ಹೋಗುವ ಗುಡ್ಡಗಳನ್ನು ನೋಡುವುದು ತೀರ ಸಾಮಾನ್ಯವಾಗಿದೆ! ಮಣ್ಣು ಅಗೆಯುವ ಶಕ್ತಿಶಾಲಿ ಯಂತ್ರಗಳ ಬಳಕೆ ವ್ಯಾಪಕವಾಗುವುದರೊಂದಿಗೆ ಗುಡ್ಡಗಳನ್ನು ಕಡಿಮೆ ಸಮಯದಲ್ಲಿ ಅಗೆದು ತೆಗೆದು ಲಾರಿಗಳಲ್ಲಿ ತುಂಬಿಸಿಕೊಂಡು ಹೋಗುವುದನ್ನು ನಾವಿಂದು ಕಾಣುತ್ತೇವೆ.

ಗುಡ್ಡವನ್ನು ಅಗೆಯುವುದು ಕೇರಳದಲ್ಲಿ ಇಂದು ವ್ಯಾಪಕವಾಗಿ ನಡೆಯುವ ಚಟುವಟಿಕೆಯಾಗಿದೆ. ಗುಡ್ಡಗಳು ಪ್ರಕೃತಿಯ ಸ್ವಾಭಾವಿಕ ಜಲ ಸಂಗ್ರಾಹಕ ಕೇಂದ್ರಗಳಾಗಿವೆ. ಗುಡ್ಡಗಳನ್ನು ಅಗೆದು ತೆಗೆಯುವುದು ನೀರಿನ ಲಭ್ಯತೆಯನ್ನು ಯಾವ ರೀತಿಯಲ್ಲಿ ಬಾಧಿಸುತ್ತದೆ? ಚರ್ಚಿಸಿರಿ.

ಇಳಿಜಾರಾದ ಜಾಗಗಳಲ್ಲಿ ಅವೈಜ್ಞಾನಿಕ ರೀತಿಯಲ್ಲಿ ಮಾಡುವ ನಿರ್ಮಾಣ ಕಾರ್ಯಗಳು ಗುಡ್ಡಕುಸಿತದ ಸಾಧ್ಯತೆಯನ್ನು ಹೆಚ್ಚಿಸುತ್ತವೆ.

ಇತರ ಯಾವೆಲ್ಲಾ ಚಟುವಟಿಕೆಗಳು ಮಣ್ಣಿನ ನಾಶಕ್ಕೆ ಕಾರಣವಾಗುತ್ತವೆ?

- ಅರಣ್ಯ ನಾಶ
- ಅವೈಜ್ಞಾನಿಕವಾದ ಕೃಷಿವಿಧಾನಗಳು
-

ಚಿತ್ರ 7.5

ಗುಡ್ಡ ಅಗೆಯುವುದು ಮತ್ತು ಅವೈಜ್ಞಾನಿಕ ನಿರ್ಮಾಣ

ನಿಮ್ಮ ಪ್ರದೇಶದಲ್ಲಿ ಅಥವಾ ಶಾಲೆಯ ಪರಿಸರದಲ್ಲಿ ಈ ರೀತಿಯ ಚಟುವಟಿಕೆಗಳು ನಡೆಯುತ್ತಿವೆಯೇ? ನಡೆಯುತ್ತಿದ್ದರೆ ಅಧ್ಯಾಪಕರೊಂದಿಗೆ ಆ ಪ್ರದೇಶವನ್ನು ಸಂದರ್ಶಿಸಿರಿ. ಸಂದರ್ಶನದ ಮೂಲಕ ತಿಳಿದುಕೊಂಡ ಮಾಹಿತಿಗಳನ್ನು ಸೇರಿಸಿ ವರದಿಯನ್ನು ತಯಾರಿಸಿರಿ.

ಪರ್ಯಾಯವನ್ನು ಹುಡುಕುವ

ಪ್ರಾಕೃತಿಕ ಸಂಪನ್ಮೂಲಗಳು ಇರುವುದು ನಮ್ಮ ಉಪಯೋಗಕ್ಕಾಗಿ. ಆದರೆ ಅವುಗಳನ್ನು ಅನಿಯಂತ್ರಿತವಾಗಿ ಶೋಷಣೆ ಮಾಡುವುದು ಪ್ರಕೃತಿಯ ಅಸಮತೋಲನಕ್ಕೆ ಕಾರಣವಾಗುತ್ತದೆ.

ಅಮಿತವಾದ ಪ್ರಾಕೃತಿಕ ಸಂಪನ್ಮೂಲಗಳ ಶೋಷಣೆಯನ್ನು ತಡೆಯಲು ಪರ್ಯಾಯ ವ್ಯವಸ್ಥೆಯನ್ನು ಹುಡುಕುವುದು ಅವಶ್ಯವಾಗಿದೆ. ಬಯಲುಗಳಲ್ಲಿ ಮಣ್ಣನ್ನುಪಯೋಗಿಸಿ ಇಟ್ಟಿಗೆ ತಯಾರಿಸುವ ಬದಲಿಗೆ, ಅನುಪಯುಕ್ತ ಪ್ಲಾಸ್ಟಿಕ್‌ಗಳು, ಮಣ್ಣಿನ ಪಾತ್ರೆಯ ನಿರ್ಮಾಣ ಕಾರ್ಖಾನೆಗಳಲ್ಲಿ ಉಳಿಯುವ ಅವಶೇಷ ಇತ್ಯಾದಿಗಳನ್ನು ಉಪಯೋಗಿಸಿ ಕಟ್ಟಡ ನಿರ್ಮಾಣಕ್ಕೆ ಅಗತ್ಯವಾದ ಇಟ್ಟಿಗೆಗಳನ್ನು ತಯಾರಿಸುವ ತಂತ್ರಜ್ಞಾನವನ್ನು ಇಲ್ಲಿ ಬಳಸಿಕೊಳ್ಳಬಹುದು. ಇದು ಪರಿಸರ ಮಾಲಿನ್ಯವನ್ನು ಕಡಿಮೆಮಾಡಲು ಸಹಾಯಕವಲ್ಲವೇ. ನಮಗೆ ಈ ರೀತಿಯ ಮಾದರಿಯನ್ನು ಯಾಕೆ ಬಳಸಿಕೊಳ್ಳಬಾರದು? ಹೊಳೆಯಲ್ಲಿರುವ ಹೊಗೆಯ ಬದಲಿಗೆ ಕಗ್ಗಲ್ಲಿನ ಹುಡಿಯನ್ನು ಕಟ್ಟಡ ನಿರ್ಮಾಣಕ್ಕೆ ಬಳಸುವುದರ ಬಗ್ಗೆ ಗಮನಿಸಬಹುದಾಗಿದೆ.

ಗಟ್ಟಿ ಮತ್ತು ದೃಢತೆಯಲ್ಲಿ ಈ ಹುಡಿಯು ಹೊಗೆಗಿಂತ ಕಡಿಮೆಯೇನಲ್ಲ ಎಂದು ಅನುಭವಗಳು ತಿಳಿಸುತ್ತವೆ. ನಿರ್ಮಾಣ ವಸ್ತುವಾಗಿ ಕಗ್ಗಲ್ಲಿಗೆ ಬದಲು ಬೇರೆ ಯಾವುದಾದರೂ ವಸ್ತುವನ್ನು ಕಂಡುಹಿಡಿಯಬೇಡವೇ?

ಶಿಲಾಮಂಡಲವನ್ನು ಅನಿಯಂತ್ರಿತವಾಗಿ ಶೋಷಣೆಗೊಳಪಡಿಸುವುದು ಭೂಮಿಯಲ್ಲಿ ಜೀವಿಗಳ ಅಸ್ತಿತ್ವಕ್ಕೆ ಬೆದರಿಕೆಯಾಗಿದೆ.

ಜಲಮಂಡಲ

ಭೂಮಿಯ ಮೇಲ್ಮೈಯ ಮೂರನೆಯ ಎರಡು ಭಾಗವೂ ಜಲಾವೃತವಾಗಿದೆ ಎಂದು ನೀವು ತಿಳಿದುಕೊಂಡಿರುವಿರಲ್ಲವೇ? ಸಮುದ್ರಗಳು, ನದಿಗಳು, ಸರೋವರಗಳು, ಝರಿಗಳು ಇವುಗಳಲ್ಲದೆ ಭೂಮಿಯ ಅಂತರಾಳದಲ್ಲಿಯೂ ಜಲವು ದ್ರವ ರೂಪದಲ್ಲಿದೆ. ಧ್ರುವ ಪ್ರದೇಶಗಳಲ್ಲಿಯೂ ಉನ್ನತ ಪರ್ವತಗಳ ಮೇಲೆಯೂ ಜಲವು ಘನ ರೂಪದಲ್ಲಿರುವಾಗ, ಅಂತರಿಕ್ಷದಲ್ಲಿ ಇದು ನೀರಾವಿಯಾಗಿಯೂ ಜಲಕಣಗಳಾಗಿಯೂ ಇರುತ್ತದೆ. ಮೇಲೆ ಹೇಳಿದ ಮೂರು ರೂಪಗಳಲ್ಲಿ ಭೂಮಿಯ ಮೇಲಿರುವ ನೀರನ್ನು ಒಟ್ಟಾಗಿ ಜಲಮಂಡಲ ಎನ್ನುತ್ತಾರೆ.

ಅಮೂಲ್ಯವಾದ ಶುದ್ಧ ಜಲ

ಜೀವಜಾಲದ ಅಸ್ತಿತ್ವಕ್ಕೆ ಶುದ್ಧಜಲವು (Fresh water) ಅತ್ಯಂತ ಅಪೇಕ್ಷಣೀಯವಾದುದು. ಭೂಮಿಯ ಮೂರನೇ ಎರಡು ಭಾಗವು ಜಲವಾಗಿದ್ದರೂ ಅದರಲ್ಲಿ ಶುದ್ಧಜಲವು ಕೇವಲ ಮೂರು ಶೇಕಡಾ ಮಾತ್ರವಾಗಿದೆ. ನದಿಗಳು, ಸರೋವರಗಳು, ಬಾವಿಗಳು, ಹಿನ್ನೀರುಗಳು ಮುಂತಾದವುಗಳಿಂದ ಲಭಿಸುವ ಶುದ್ಧ ಜಲದಲ್ಲಿ ಮಾನವನಿಗೆ ಉಪಯೋಗಿಸಲು ಸಾಧ್ಯವಾಗುವ ಜಲವು ಕೇವಲ ಒಂದು ಶೇಕಡಕ್ಕಿಂತಲೂ ಕಡಿಮೆ. ಉಳಿದ ಜಲವು ಧ್ರುವ ಪ್ರದೇಶಗಳಲ್ಲಿಯೂ ಪರ್ವತಗಳ ಮೇಲೂ ಘನೀಕರಣಗೊಂಡು ಇರುತ್ತದೆ (ಚಿತ್ರ 7.6). ಮನುಷ್ಯನು ಭೂಮಿಯ ಅಂತರಾಳದಲ್ಲಿರುವ ಜಲವನ್ನು ಉಪಯೋಗಕ್ಕಾಗಿ ತೆಗೆಯುವಲ್ಲಿಯೂ ಹಲವೆಡೆಗಳಲ್ಲಿ ಇತಿಮಿತಿಗಳಿರುವುದನ್ನು ಕಾಣಬಹುದು.

ಚಿತ್ರ 7.6

ಜಲಕ್ಷಾಮ

ಪ್ರಕೃತಿಯಲ್ಲಿ ಮಾನವನ ವಿವೇಚನಾರಹಿತವಾದ ಹಸ್ತಕ್ಷೇಪವು ಜಲಕ್ಷಾಮಕ್ಕೆ ಕಾರಣವಾಗುತ್ತದೆ ಎಂದು ನೀವು ತಿಳಿದುಕೊಂಡಿರಲ್ಲವೇ. ಸಹಜವಾಗಿಯೇ ದುರ್ಲಭವಾದುವುಗಳಲ್ಲಿ ಶುದ್ಧಜಲವೂ ಒಂದು. ಮಾನವನ ಅವೈಜ್ಞಾನಿಕವಾದ ಹಸ್ತಕ್ಷೇಪದಿಂದಾಗಿ ಶುದ್ಧಜಲದ ಕ್ಷಾಮ ಉಂಟಾಗುತ್ತದೆ.

ಹರಿದು ದೂರಾಗುವ ಮಳೆ ನೀರು

ಪಶ್ಚಿಮಘಟ್ಟದಲ್ಲಿ ಸುರಿಯುವ ಮಳೆನೀರಿನ ಹೆಚ್ಚಿನ ಭಾಗವೂ 2 ದಿನಗಳಲ್ಲಿ ಅರಬೀಸಮುದ್ರವನ್ನು ಸೇರುವುದೆಂದು ತಿಳಿಯಲಾಗಿದೆ.

ನಿಮ್ಮೂರಿನ ಶುದ್ಧ ಜಲ ಮೂಲಗಳು ಮಲಿನವಾಗುತ್ತಿದೆಯೇ? ಇವು ಯಾವ ರೀತಿಯಲ್ಲಿ ಮಲಿನವಾಗುತ್ತಿದೆಯೆಂದು ತಿಳಿಯಬೇಡವೇ? ಇದಕ್ಕಾಗಿ ನಾವೊಂದು ಅಧ್ಯಯನವನ್ನು ನಡೆಸುವ. ಪ್ರೊಜೆಕ್ಟ್‌ನಲ್ಲಿ ಒಳಗೊಳ್ಳಬೇಕಾದ ಅಂಶಗಳು-

- ಊರಿನಲ್ಲಿರುವ ಪ್ರಧಾನ ಶುದ್ಧಜಲಮೂಲಗಳು
- ಮಾಲಿನ್ಯದ ಮೂಲಗಳು
- ಮಾಲಿನ್ಯವು ಮನುಷ್ಯರ ಮತ್ತು ಜೀವಜಾಲದ ಮೇಲೆ ಉಂಟುಮಾಡುವ ಸಮಸ್ಯೆಗಳು
- ಪರಿಹಾರ ಸೂಚನೆಗಳು

ನಮ್ಮನ್ನು ಒಳಗೊಂಡಂತೆ ಸಕಲ ಜೀವಜಾಲಗಳ ಅಸ್ತಿತ್ವಕ್ಕೆ ಶುದ್ಧಜಲ ಮೂಲಗಳನ್ನು ಸಂರಕ್ಷಿಸಬೇಕಾದುದು ಅತ್ಯಂತ ಅಪೇಕ್ಷಣೀಯವಾಗಿದೆ. ಜಲ ಮೂಲಗಳನ್ನು ಸಂರಕ್ಷಿಸುವ ಆವಶ್ಯಕತೆಯ ಕುರಿತು ಸಾಮಾನ್ಯ ಜನರಲ್ಲಿ ಜಾಗೃತಿಯನ್ನು ಉಂಟುಮಾಡಬೇಕು. ಇದಕ್ಕಾಗಿ ಅಧ್ಯಾಪಕರ ನೇತೃತ್ವದಲ್ಲಿ ಒಂದು 'ಜಲಸಂರಕ್ಷಣ ಜಾಥಾ'ವೊಂದನ್ನು ಆಯೋಜಿಸಿರಿ.

ಚಿತ್ರ 7.7 ತಟ್ಟುಕೃಷಿ

ಬೇಕು ನಮಗೊಂದು ವೈಜ್ಞಾನಿಕ ನೆಲ-ಜಲಸಂರಕ್ಷಣೆ

- ಗುಡ್ಡದ ಇಳಿಜಾರನ್ನು ತಟ್ಟುಗಳಾಗಿಸಿ ಕೃಷಿ ಮಾಡಿರಿ.
- ಕಲ್ಲುಗಳಿಂದ ಕೂಡಿದ ಮತ್ತು ಆಳವಾಗಿ ಮಣ್ಣಿಲ್ಲದ ಗುಡ್ಡದ ಇಳಿಜಾರುಗಳಲ್ಲಿ ತೆಂಗು, ಕಂಗು ಮುಂತಾದ ನಾರುಬೇರುಗಳಿರುವ ಮರಗಳ ಬದಲಿಗೆ ತಾಯಿಬೇರಿರುವ ಮರಗಳನ್ನು ನೆಟ್ಟು ಬೆಳೆಸಿರಿ.

ಮಣ್ಣಿನ ದಾಹವನ್ನು ನೀಗಿಸೋಣ

ನಮ್ಮಲ್ಲಿ ಹಲವರು ಅಂಗಳಕ್ಕೆ ಕಾಂಕ್ರೀಟು ಹಾಕುತ್ತಾರೆ. ಕೆಲವರು ಇಟ್ಟಿಗೆಗಳಂತಹ ವಸ್ತುಗಳನ್ನು ಹಾಸುವರು. ಭೂಮಿಯೊಳಗೆ ನೀರು ಇಳಿಯುವ ಅವಕಾಶವನ್ನು ಅವರು ಈ ಮೂಲಕ ಶಾಶ್ವತವಾಗಿ ಮುಚ್ಚುವರು. ಅದರ ಬದಲಿಗೆ ಕಗ್ಗಲ್ಲಿನ ಫಲಕಗಳನ್ನು ಹಾಸಬೇಕು. ಅದರ ನಡುವಿನಲ್ಲಿ ಹುಲ್ಲನ್ನು ಬೆಳೆಸಬಹುದು. ನೋಡಲೂ ಅಂದವಿರುವುದು. ಭೂಮಿಗೆ ನೀರು ಇಂಗಲು ಅಡೆ ತಡೆಗಳಿರುವುದಿಲ್ಲ.

- ಗುಡ್ಡದ ಇಳಿಜಾರುಗಳಲ್ಲಿರುವ ನೀರಿನ ಹರಿವುಗಳ ವೇಗವನ್ನು ಕಡಿಮೆ ಮಾಡಲು ಕಾಂಕ್ರೀಟಿನ ತಡೆಗೋಡೆಗಳ ಬದಲಿಗೆ ಅಲ್ಲಲ್ಲಿಯೇ ಸಿಗುವ ಕಲ್ಲು, ಮರದ ಕಾಂಡಗಳಿಂದ ತಡೆಗಳನ್ನು ನಿರ್ಮಿಸಬೇಕು.
- ಮಣ್ಣಿನ ಸಂರಕ್ಷಣೆಗೆ ಒಡ್ಡುಗಳನ್ನು ನಿರ್ಮಿಸಬೇಕು.
- ಇಳಿಜಾರಾಗಿರುವ ಪ್ರದೇಶದಲ್ಲಿ ನಿರ್ಮಾಣ ಕಾರ್ಯಗಳನ್ನೂ ಮಣ್ಣನ್ನು ಸಡಿಲಗೊಳಿಸುವ ರೀತಿಯ ಬೆಳೆಗಳಾದ ಮರಗೆಣಸು, ಕೆಸುವು, ಸುವರ್ಣಗಡ್ಡೆ ಇತ್ಯಾದಿಗಳನ್ನು ಕೃಷಿಮಾಡುವುದನ್ನು ತ್ಯಜಿಸಬೇಕು.
- ಬಂಜರು ಜಾಗಗಳಲ್ಲಿ ಮರಗಳನ್ನು ನೆಟ್ಟು ಬೆಳೆಸಬೇಕು
- ಮನೆ ಮತ್ತು ಕೈಗಾರಿಕೆಗಳ ತ್ಯಾಜ್ಯಗಳನ್ನು ಜಲಾಶಯಗಳಿಗೆ ಹರಿಯಬಿಡಬಾರದು.
- ಬಯಲುಗಳು, ಕೊಳಗಳು, ಸರೋವರಗಳು, ನದೀತೀರಗಳು ಇತ್ಯಾದಿಗಳನ್ನು ಮಣ್ಣು ಹಾಕಿ ಮುಚ್ಚದೆ ಸಂರಕ್ಷಿಸಬೇಕು.

ಮೇಲೆ ಹೇಳಿದ ರೀತಿಯ ಚಟುವಟಿಕೆಗಳು ನಮ್ಮೂರಿನಲ್ಲಿ ಸಾಧ್ಯವೇ ಎಂದು ನೀವು ಚಿಂತಿಸಬಹುದು. ಮಹಾರಾಷ್ಟ್ರದ ಕಡಿಮೆ ಮಳೆ ಬೀಳುವ ಗ್ರಾಮವಾದ ರಾಲೇಗಾಂವ್ ಸಿದ್ಧಿಯಲ್ಲಿನ ಜನರ ಚಟುವಟಿಕೆಗಳು ಆ ಗ್ರಾಮವನ್ನು ವಾಸಕ್ಕೆ ಯೋಗ್ಯವಾಗಿರಿಸಿದ ಅನುಭವ ಪಾಠ ನಮ್ಮ ಮುಂದಿದೆ.

ರಾಲೇಗಾಂವ್ ಸಿದ್ಧಿಯ ಯಶೋಗಾಥೆ....

ಮಹಾರಾಷ್ಟ್ರದ ಅಹಮ್ಮದ್‌ನಗರ ಜಿಲ್ಲೆಯಲ್ಲಿ ರಾಲೇಗಾಂವ್‌ಸಿದ್ಧಿ ಎಂಬ ಪುಟ್ಟ ಗ್ರಾಮ. ವಾರ್ಷಿಕವಾಗಿ 50 ಸೆ.ಮೀ. ಗಿಂತಲೂ ಕಡಿಮೆ ಮಳೆ. ಅದೂ ಸ್ಥಿರವಾಗಿ ಲಭಿಸುವುದಿಲ್ಲ. ಮೇಲ್ಮೈಯಿಂದ 20 ಮೀಟರ್‌ಗಿಂತಲೂ ಕೆಳಗಿರುವ ಭೂಗರ್ಭ ಜಲಮಟ್ಟ, ಬೇಸಿಗೆಯ ಆರಂಭದೊಂದಿಗೆ ಬತ್ತುವ ಬಾವಿಗಳು, ತೀವ್ರ ಜಲಕ್ಷಾಮ, ಹೆಚ್ಚು ಮಣ್ಣಿನ ಕೊರೆತ, ಸಸ್ಯಾವರಣ ಇಲ್ಲದಿರುವುದು ಮಳೆಯನ್ನೇ ಆಶ್ರಯಿಸಿರುವುದರಿಂದ ಖಾತರಿ ಇಲ್ಲದ ಕೃಷಿ ಉತ್ಪನ್ನಗಳು, ನಿರುದ್ಯೋಗ, ಬಡತನ, ಇವೆಲ್ಲವುಗಳೂ 1975ರ ಮೊದಲಿನ ರಾಲೇಗಾಂವ್‌ಸಿದ್ಧಿಯ ಚರಿತ್ರೆಯಾಗಿದೆ.

1975ರಲ್ಲಿ ಸೈನ್ಯದಿಂದ ನಿವೃತ್ತರಾಗಿ ಊರನ್ನು ಸೇರಿದ ಶ್ರೀ ಬಾಬುರಾವ್ ಹಜಾರೆಯವರು ಗ್ರಾಮೀಣ ಯುವಕರನ್ನು ಸಂಘಟಿಸಿ ಊರಿನ ಅಭಿವೃದ್ಧಿಗಾಗಿ ಮುಂದಡಿಯಿಟ್ಟರು. ಕೃಷಿ ವೃತ್ತಿಯನ್ನು ಪರಿಪೋಷಿಸುವುದಕ್ಕಾಗಿ ಸರಕಾರ ಜಾರಿಗೊಳಿಸಿರುವ ವಿವಿಧ ಯೋಜನೆಗಳ ಕುರಿತು ಅವರು ಜನರಲ್ಲಿ ಜಾಗೃತಿಯನ್ನು ಮೂಡಿಸಿದರು. ಜತೆಯಲ್ಲಿ ಕೃಷಿಯನ್ನು ಉತ್ತಮ ಪಡಿಸುವುದಕ್ಕೆ ಅಗತ್ಯವಾದ ವಿಧಾನಗಳನ್ನು ಅನ್ವೇಷಣೆ ಮಾಡುವುದಕ್ಕೂ ಅವರು ಗುಂಪಾಗಿ ಚರ್ಚಿಸಲು ಆರಂಭಿಸಿದರು.

ಹೆಚ್ಚು ನೀರು ಅಗತ್ಯವಿರುವ ಕಬ್ಬಿನ ಬದಲಿಗೆ ಈರುಳ್ಳಿಯಂತಹ ಬೆಳೆಗಳನ್ನು ಬೆಳೆಸಲು ತೀರ್ಮಾನಿಸಿದರು. ಖಾಸಗಿ ಬಾವಿಗಳನ್ನು ತೋಡುವುದನ್ನು ನಿರುತ್ಸಾಹಗೊಳಿಸಿದರು. ಬದಲಿಗೆ ಸಾರ್ವಜನಿಕ ಬಾವಿಯ ನಿರ್ಮಾಣಕ್ಕೆ ಪ್ರಾಧಾನ್ಯವನ್ನು ನೀಡಿದರು. ಇಂದು ಆ ಹಳ್ಳಿಯಲ್ಲಿ 7 ಸಾರ್ವಜನಿಕ ಬಾವಿಗಳಿವೆ. ಅವುಗಳಲ್ಲಿ ಬೇಕಾದಷ್ಟು ನೀರೂ ಇದೆ. ಇಡೀ ಗ್ರಾಮಕ್ಕೆ ನೀರನ್ನು ತಲುಪಿಸುವುದಕ್ಕೆ ಕಿರು ನೀರಾವರಿ ವ್ಯವಸ್ಥೆ ಇದೆ. ಮಣ್ಣಿನ ಸಂರಕ್ಷಣೆಯು ಅವರ ಜೀವನದ ಭಾಗವಾಗಿ ಬದಲಾಗಿದೆ. ಜನರು ಇಡೀ ಗ್ರಾಮದಲ್ಲಿ ಸಾಕಷ್ಟು ಮರಗಳನ್ನು ನೆಟ್ಟು ಬೆಳೆಸಿದ್ದಾರೆ. ಇಂದು ಈ ಗ್ರಾಮದಲ್ಲಿ ಇಂಟರ್‌ಮೀಡಿಯೇಟ್ ಕಾಲೇಜು, ಶಾಲೆಗಳು, ಸಹಕಾರಿ ಸಂಘಗಳು ಮತ್ತಿತರ ಅಗತ್ಯವಾದ ಸೌಕರ್ಯಗಳು ಎಲ್ಲವೂ ಇವೆ.

ವಾಯು ಮಂಡಲ

ಭೂಮಿಯನ್ನು ಒಂದು ಹೊದಿಕೆಯ ಹಾಗೆ ಆವರಿಸಿ ಸಂರಕ್ಷಿಸುವ ಅನಿಲಗಳ ಪದರವನ್ನು ವಾಯುಮಂಡಲ ಅಥವಾ ವಾತಾವರಣ ಎಂದು ಕರೆಯಲಾಗುತ್ತದೆ. ಓಕ್ಸಿಜನ್, ನೈಟ್ರೋಜನ್‌ನಂತಹ ಅನಿಲಗಳಲ್ಲದೆ ಧೂಳಿನ ಕಣಗಳು, ನೀರಾವಿ ಮೊದಲಾದವು ವಾತಾವರಣದಲ್ಲಿದೆ. ವಾಯುವಿನ ಸ್ವಾಭಾವಿಕ ರಚನೆಯಲ್ಲಿ ಬದಲಾವಣೆಯನ್ನುಂಟುಮಾಡುವ ಯಾವುದೇ ಘಟಕವು ವಾಯು ಮಾಲಿನ್ಯಕ್ಕೆ ಕಾರಣವಾಗುವುದು. ವಾಯುಮಂಡಲವು ಭೂಮಿಯ ಮೇಲೆಯೇ ಆವರಿಸಿಕೊಂಡಿರಲು ಭೂಮಿಯ ಗುರುತ್ವಾಕರ್ಷಣ ಬಲವೇ ಕಾರಣವಾಗಿದೆ. ಭೂಮಿಯಲ್ಲಿ ಜೀವಿಗಳ ಅಸ್ತಿತ್ವಕ್ಕೆ ವಾಯು ಅತಿ ಅಗತ್ಯವಾಗಿದೆ. ವಾತಾವರಣವು ನಮಗೆ ಯಾವೆಲ್ಲ ರೀತಿಯಲ್ಲಿ ಪ್ರಯೋಜನಕಾರಿಯಾಗಿದೆ ಎಂದು ಕೆಳಗೆ ನೀಡಿರುವ ಚಿತ್ರವನ್ನು ನಿರೀಕ್ಷಿಸಿ ತಿಳಿದುಕೊಳ್ಳುವಿರಲ್ಲವೇ.



ಭೂಮಿಯಲ್ಲಿ ವಾತಾವರಣದ ಪ್ರಾಧಾನ್ಯವನ್ನು ತಿಳಿದುಕೊಂಡಿರಲ್ಲವೇ? ಮಾನವನ ಯಾವೆಲ್ಲ ಚಟುವಟಿಕೆಗಳು ವಾತಾವರಣ ಮಾಲಿನ್ಯಕ್ಕೆ ಕಾರಣವಾಗುವುದು?

- ಶೀತಲೀಕರಣ ಯಂತ್ರ (refrigerators) ಗಳಲ್ಲಿ ಉಪಯೋಗಿಸುವ ಅನಿಲಗಳು ವಾತಾವರಣವನ್ನು ಸೇರುವುದು.
-

ಕಾರ್ಖಾನೆಗಳು, ಕೈಗಾರಿಕಾ ಕೇಂದ್ರಗಳು, ವಾಹನಗಳ ಹೊಗೆ ಎಂಬಿವುಗಳಿಂದ ಡೊಡ್ಡ ಪ್ರಮಾಣದಲ್ಲಿ ಹೊರಹೊಮ್ಮುವ ಮಾರಕವಾದ ರಾಸಾಯನಿಕಗಳು, ಅನಿಲಗಳು ವಾಯುವಿನೊಂದಿಗೆ ಸೇರುತ್ತವೆ. ವಾಯುವಿನ ಸ್ವಾಭಾವಿಕ ರಚನೆಯಲ್ಲಿ ಬದಲಾವಣೆಯನ್ನು ಉಂಟುಮಾಡುವ ಮಾನವರ ಈ ರೀತಿಯ ಚಟುವಟಿಕೆಗಳು ಮಾನವರ ಅಸ್ತಿತ್ವಕ್ಕೆ ಬೆದರಿಕೆಯಾಗಿವೆ.

ಓಕ್ಸಿಜನ್ ಪಾರ್ಲರ್‌ಗಳು

ಇದು ಜಪಾನಿನ ಅನೇಕ ನಗರಗಳಲ್ಲಿ ಹಲವಾರು ವರ್ಷಗಳಿಂದ ಇರುವ ವ್ಯವಸ್ಥೆಯಾಗಿದೆ. ಈ ಪಾರ್ಲರಿನೊಳಗೆ ಯಾರಿಗೆ ಬೇಕಾದರೂ ಶುದ್ಧವಾದ ವಾಯುವನ್ನು ಉಸಿರಾಡಬಹುದು. ದೆಹಲಿ ನಗರದಲ್ಲಿ ವಾತಾವರಣಕ್ಕೆ ಶುದ್ಧ ವಾಯುವನ್ನು ಪಂಪ್ ಮಾಡುವ ಘನ ಯಂತ್ರಗಳನ್ನು ಅಳವಡಿಸಲಾಗಿದೆ. ಆಡಳಿತ ವ್ಯವಸ್ಥೆಯು ಈ ರೀತಿಯ ಕ್ರಮಕ್ಕೆ ಮುಂದಾಗಲು ಕಾರಣವೇನಾಗಿರಬಹುದು?

ವಾತಾವರಣದ ಮಾಲಿನ್ಯವನ್ನು ಕಡಿಮೆ ಮಾಡಲು ಅಗತ್ಯವಾದ ಕಾರ್ಯಯೋಜನೆಗಳ ಕುರಿತಾದ ಮಾಹಿತಿಗಳನ್ನು ಸಂಗ್ರಹಿಸಿರಿ. ಈ ಮಾಹಿತಿಗಳನ್ನು ಸೇರಿಸಿಕೊಂಡು ತರಗತಿಯಲ್ಲಿ ಒಂದು ವಿಚಾರಗೋಷ್ಠಿಯನ್ನು ಏರ್ಪಡಿಸಿರಿ.

ಜೈವ ಮಂಡಲ

ಜೈವಮಂಡಲವು ಭೂಮಿಯಲ್ಲಿರುವ ಎಲ್ಲ ಜೀವಜಾಲಗಳನ್ನು ಒಳಗೊಂಡಿದೆ. ಶಿಲಾಮಂಡಲ, ಜಲಮಂಡಲ, ವಾಯು ಮಂಡಲ ಎಂಬೀ ಮೂರು ಮಂಡಲಗಳ ಪರಸ್ಪರ ಕಾರ್ಯ ಚಟುವಟಿಕೆಗಳ ಫಲವಾಗಿ ಜೈವ ಮಂಡಲವು ನೆಲೆನಿಂತಿದೆ. ಚಿತ್ರ 7.9ನ್ನು ನಿರೀಕ್ಷಣೆ ಮಾಡಿರಿ.



ಚಿತ್ರ 7.9

ಮನುಷ್ಯರ ಮತ್ತು ಸಸ್ಯ ಜಾಲಗಳ ಅಸ್ತಿತ್ವಕ್ಕೆ ಶಿಲಾ-ಜಲ-ವಾಯುಮಂಡಲಗಳೇ ಕಾರಣವಾಗಿವೆ. ಶಿಲಾಮಂಡಲ, ಜಲಮಂಡಲ, ವಾಯುಮಂಡಲಗಳಲ್ಲಿ ಉಂಟಾಗುವ ಅತಿ ಚಿಕ್ಕ ಬದಲಾವಣೆಯೂ ಮಾನವನ ಜೀವನಕ್ಕೆ ದೊಡ್ಡ ಆಘಾತವನ್ನು ಉಂಟುಮಾಡುವುದೆಂದು ನೀವು ತಿಳಿದುಕೊಂಡಿರಲ್ಲವೇ. ಇನ್ನು ಸಸ್ಯಜಾಲಗಳ ವಿಷಯವನ್ನು ನೋಡುವ. ಕಾರ್ಬನ್ ಡೈ ಒಕ್ಸೈಡ್, ಜಲ, ಖನಿಜಾಂಶ ಇತ್ಯಾದಿಗಳು ಸಸ್ಯ ಜಾಲಗಳ ಅಸ್ತಿತ್ವಕ್ಕೆ ಅಗತ್ಯವಾದ ಘಟಕಗಳಾಗಿವೆ. ಇದರಲ್ಲಿ ಕಾರ್ಬನ್ ಡೈ ಒಕ್ಸೈಡ್ ವಾತಾವರಣದಿಂದ ಲಭ್ಯವಾಗುತ್ತದೆ. ಅದೇ ರೀತಿಯಲ್ಲಿ ಖನಿಜಾಂಶಗಳು ಶಿಲಾಮಂಡಲದಿಂದಲೂ ಅಗತ್ಯವಾದ ನೀರು ಜಲಮಂಡಲದಿಂದಲೂ ಲಭಿಸುತ್ತದೆ. ಇವುಗಳಲ್ಲಿ ಯಾವುದೇ ಒಂದು ಘಟಕವಿಲ್ಲದಿದ್ದರೆ ಭೂಮಿಯಲ್ಲಿ ಸಸ್ಯ ಜಾಲವನ್ನು ಕಾಣಲು ಸಾಧ್ಯವೇ? ಸಸ್ಯಾವಳಿಯಿಲ್ಲದ ಭೂಮಿಯ ಕುರಿತು ಒಮ್ಮೆ ಆಲೋಚಿಸಿ ನೋಡಿರಿ. ಶಿಲಾಮಂಡಲ, ಜಲಮಂಡಲ, ವಾಯುಮಂಡಲ ಒಳಗೊಂಡಂತೆ ಜೈವ ಮಂಡಲಕ್ಕೆ ಮಾನವನ ವಿವೇಚನಾರಹಿತವಾದ ಚಟುವಟಿಕೆಗಳು ದುಷ್ಪರಿಣಾಮವನ್ನು ಉಂಟುಮಾಡುತ್ತವೆ. ಇದು ಅನೇಕ ಪ್ರಕೃತಿ ವಿಕೋಪಗಳಿಗೆ ಕಾರಣವಾಗುತ್ತದೆ.

ಪ್ರಾಕೃತಿಕ ವಿಕೋಪಗಳು (Natural Disasters)

ಪ್ರಕೃತಿಯಲ್ಲಿ ಸ್ವಾಭಾವಿಕವಾಗಿ ಉಂಟಾಗುವ ಮಾನವ ಜೀವಕ್ಕೂ, ಆಸ್ತಿಪಾಸ್ತಿಗೂ ಅಪಾರ ನಾಶನಷ್ಟ ಉಂಟುಮಾಡುವ ವಿದ್ಯಮಾನಗಳನ್ನು ಪ್ರಾಕೃತಿಕ ವಿಕೋಪಗಳೆನ್ನುತ್ತಾರೆ.

ಪ್ರಾಕೃತಿಕ ವಿಕೋಪಗಳು ಸಂಭವಿಸಿದ ನಂತರ ರಕ್ಷಣಾ ಕಾರ್ಯಗಳನ್ನು, ಪುನರ್ವಸತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಬದಲಿಗೆ ಈ ರೀತಿಯ ಘಟನೆಗಳು ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸುವುದು ಉತ್ತಮವಾಗಿದೆ. ನಮ್ಮ ರಾಜ್ಯದಲ್ಲಿ ಸಾಮಾನ್ಯವಾಗಿ ಉಂಟಾಗುವ ಕೆಲವು ಪ್ರಾಕೃತಿಕ ವಿಕೋಪಗಳ ಕುರಿತೂ ಅಂತಹ ಸಂದರ್ಭಗಳಲ್ಲಿ ನಾವು ಕೈಗೊಳ್ಳಬೇಕಾದ ಕ್ರಮಗಳ ಕುರಿತೂ ತಿಳಿದುಕೊಳ್ಳುವ.

ಭೂಕುಸಿತ (Landslide)

ಕಡಿದಾದ ಇಳಿಜಾರುಳ್ಳ ಪ್ರದೇಶಗಳಿಂದ ಕಲ್ಲುಗಳು, ಕೆಸರು, ಮಣ್ಣು ಇತ್ಯಾದಿಗಳು ಅತಿ ವೇಗದಿಂದ ಕೆಳಗೆ ಸರಿದು ಬರುವ ವಿದ್ಯಮಾನವನ್ನು ಭೂಕುಸಿತ ಎನ್ನಲಾಗುತ್ತದೆ. (ಚಿತ್ರ 7.10)

ಚಿತ್ರ 7.10 ಭೂಕುಸಿತ

ಅಡಿತಪ್ಪಿದರೆ ಮಣ್ಣೂ...

ತಿರುವನಂತಪುರ ಜಿಲ್ಲೆಯಲ್ಲಿ ಅಂಬುರಿ(2001), ಇಡುಕ್ಕಿ ಜಿಲ್ಲೆಯಲ್ಲಿ ವೆಣ್ಣಿಯಾನಿ (2001), ಚೀಯಪ್ಪಾರ (2013), ಕಲ್ಲಿಕೋಟೆ ಜಿಲ್ಲೆಯಲ್ಲಿ ಪುಲ್ಲುರಾಂಬಾರ (2012) ಹೀಗೆ ಪಶ್ಚಿಮ ಘಟ್ಟದಲ್ಲಿ ಭೂಕುಸಿತಗಳು ನಿರಂತರವಾಗಿ ನಡೆಯುತ್ತಿವೆ. ಪ್ರಕೃತಿಯ ಮೇಲೆ ಮಾನವನ ಅವೈಜ್ಞಾನಿಕವಾದ ಹಸ್ತಕ್ಷೇಪವು ಈ ಭೂಕುಸಿತಕ್ಕೆ ಕಾರಣವಾಗಿದೆ.

ಭೂಕುಸಿತ ಉಂಟಾದರೆ...

- ಆದಷ್ಟು ಬೇಗ ಸುರಕ್ಷಿತ ಸ್ಥಳಕ್ಕೆ ಹೋಗಬೇಕು.
- ಸಣ್ಣಮಕ್ಕಳು, ವೃದ್ಧರು, ಶಾರೀರಿಕವಾಗಿ ಅಶಕ್ತರು ಮುಂತಾದವರ ರಕ್ಷಣೆಗೆ ಪ್ರಾಧಾನ್ಯವನ್ನು ನೀಡಬೇಕು.
- ಗಾಯಗೊಂಡವರಿಗೆ ಪ್ರಥಮ ಚಿಕಿತ್ಸೆಯನ್ನು ನೀಡಬೇಕು.
- ಮುಂದೆ ಭೂಕುಸಿತ ಉಂಟಾಗಲು ಸಾಧ್ಯತೆಯಿರುವುದರಿಂದ ಜಾಗ್ರತೆ ವಹಿಸಬೇಕು.
- ಪೋಲೀಸ್, ಆಂಬುಲೆನ್ಸ್ ಮುಂತಾದ ಏಜೆನ್ಸಿಗಳನ್ನು ಸಂಪರ್ಕಿಸಬೇಕು.
- ವಿದ್ಯುತ್ ಆಘಾತ ನಡೆಯದಂತೆ ಮುಂಜಾಗ್ರತೆ ವಹಿಸಬೇಕು.

ನೆರೆ

ಮಳೆಗಾಲದಲ್ಲಿ ನದಿಗಳಲ್ಲಿ ಹಿಡಿಯದಷ್ಟು ನೀರು ಹರಿದು ಬಂದಾಗ ಹೆಚ್ಚಾದ ನೀರು ದಡಮೀರಿ ಹರಿಯುತ್ತದೆ. ಇದನ್ನು ನೆರೆ ಎಂದು ಕರೆಯುತ್ತಾರೆ.

ನೆರೆಯನ್ನು ಎದುರಿಸುವ...

- ನದಿಯ ದಡದಲ್ಲಿ ಮನೆ ನಿರ್ಮಿಸಬಾರದು.
- ಮಳೆಗಾಲದಲ್ಲಿ ನದಿಗೆ ಇಳಿಯಬಾರದು.
- ಬಯಲುಗಳು ಸಾಮಾನ್ಯವಾಗಿ ಮಳೆ ನೀರನ್ನು ಇಂಗಿಸುವ ಸ್ಥಳಗಳಾಗಿವೆ. ಅವುಗಳನ್ನು ಮಣ್ಣು ಹಾಕಿ ಮುಚ್ಚಬಾರದು.
- ತೀರದಲ್ಲಿ ವಾಸಿಸುವವರು ಮಳೆಗಾಲದಲ್ಲಿ ವಿಶೇಷವಾಗಿ ಗಮನಹರಿಸಬೇಕು. ಬೆಲೆಬಾಳುವ ವಸ್ತುಗಳನ್ನು ಸುರಕ್ಷಿತ ಸ್ಥಳಗಳಲ್ಲಿಡಬೇಕು.
- ನೆರೆಯು ಬಂದ ಸಂದರ್ಭದಲ್ಲಿ ವಿದ್ಯುತ್ ಸಂಪರ್ಕವನ್ನು ವಿಚ್ಛೇದಿಸಬೇಕು.

ಪ್ರಾಕೃತಿಕ ದುರಂತಗಳ ನಿರ್ವಹಣೆಗೆ ಮತ್ತು ದುರಂತಗಳನ್ನು ಹಗುರಗೊಳಿಸಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವ ಸರಕಾರಿ ಇಲಾಖೆ ಮತ್ತು ವ್ಯವಸ್ಥೆಗಳಿವೆ.

- ಕೇರಳ ಕಂದಾಯ – ದುರಂತ ನಿರ್ವಹಣ ಇಲಾಖೆ
- ರಾಜ್ಯ ದುರಂತ ನಿರ್ವಹಣ ಮಂಡಳಿ
- ದುರಂತ ಸಾಧ್ಯತೆ ವಿಶ್ಲೇಷಣ ವಿಭಾಗ
- ಲ್ಯಾಂಡ್ ಏಂಡ್ ಡಿಸಾಸ್ಟರ್ ಮ್ಯಾನೇಜ್‌ಮೆಂಟ್ ಇನ್‌ಸ್ಟಿಟ್ಯೂಟ್

ಶಿಲಾಮಂಡಲ, ಜಲಮಂಡಲ, ವಾಯುಮಂಡಲ ಎಂಬಿವುಗಳಲ್ಲಿ ಯಾವುದಾದರೂ ಒಂದು ಮಂಡಲದಲ್ಲಿ ಉಂಟಾಗುವ ದುಷ್ಪರಿಣಾಮಗಳು ಇತರ ಮಂಡಲಗಳನ್ನು ಬಾಧಿಸುತ್ತವೆ. ಪ್ರತಿಯೊಂದು ಮಂಡಲದಲ್ಲಿ ಮಾನವನ ಹಸ್ತಕ್ಷೇಪ, ಚಟುವಟಿಕೆಗಳು ವಿವೇಚನೆಯಿಂದ ನಡೆಯಬೇಕಾಗಿದೆ. ಅಲ್ಲದಿದ್ದರೆ ಪ್ರಕೃತಿಯು ನಮ್ಮನ್ನು ಒಳಗೊಂಡಂತೆ ಸಕಲ ಜೀವಜಾಲಗಳಿಗೂ ಒದಗಿಸಿದ ಈ ಸುಂದರ ಜಗತ್ತು ನಮಗೆ ವಾಸಿಸಲು ಸಾಧ್ಯವಿಲ್ಲದ ಒಂದು ಪ್ರದೇಶವಾಗಿ ಬದಲಾಗುವುದು ಎಂಬ ಅರಿವು ಪ್ರತಿಯೊಬ್ಬರಲ್ಲಿಯೂ ಮೂಡಬೇಕು.

ಕ್ರೋಡೀಕರಣ

- ಭೂಮಿಯ ಮೇಲ್ಮೈಯಲ್ಲಿ ಘನಾವಸ್ಥೆಯಲ್ಲಿರುವ ಭಾಗವು ಶಿಲಾಮಂಡಲವಾಗಿದೆ.
- ಭೂಮಿಯನ್ನು ಆವರಿಸಿರುವ ವಾಯುವಿನ ಆವರಣವು ವಾಯುಮಂಡಲವಾಗಿದೆ.
- ಸಮುದ್ರ, ನೆಲ ಮತ್ತು ವಾಯುವಿನಲ್ಲಿ ಕಂಡುಬರುವ ಜಲವನ್ನು ಒಟ್ಟಾಗಿ ಜಲಮಂಡಲ ಎಂದು ಕರೆಯುತ್ತಾರೆ.
- ಶಿಲಾಮಂಡಲ, ಜಲಮಂಡಲ, ವಾಯುಮಂಡಲ ಎಂಬೀ ಮೂರು ಮಂಡಲಗಳನ್ನು ಆಶ್ರಯಿಸಿ ಜೈವಮಂಡಲವು ನೆಲೆನಿಂತಿದೆ.
- ಮಾನವರು ನಡೆಸುವ ಅವೈಜ್ಞಾನಿಕ ಚಟುವಟಿಕೆಗಳು, ಹಸ್ತಕ್ಷೇಪಗಳು ಭೂಮಿಯ ವಿವಿಧ ಮಂಡಲಗಳನ್ನು ಬಾಧಿಸುತ್ತವೆ.

- ಮಾನವನೂ ಒಳಗೊಂಡಂತೆ ಜೀವಜಾಲಗಳ ಶಾಶ್ವತವಾದ ಅಸ್ತಿತ್ವಕ್ಕೆ ಪ್ರಾಕೃತಿಕ ಸಂಪನ್ಮೂಲಗಳ ವೈಜ್ಞಾನಿಕ ಬಳಕೆ ಅನಿವಾರ್ಯವಾಗಿದೆ.
- ಪ್ರಾಕೃತಿಕ ವಿಕೋಪಗಳನ್ನು ಎದುರಿಸಲು ವಿವಿಧ ವಿಧಾನಗಳು ಜಾರಿಯಲ್ಲಿವೆ.

ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಶಿಲಾಮಂಡಲ, ಜಲಮಂಡಲ ಮತ್ತು ವಾಯುಮಂಡಲಗಳೆಂಬ ಮೂರು ಮಂಡಲಗಳನ್ನು ಆಶ್ರಯಿಸಿ ಜೈವಮಂಡಲವು ನೆಲೆನಿಂತಿದೆ ಎಂದು ತಿಳಿದುಕೊಳ್ಳುವುದು.
- ಜೈವ ಮಂಡಲದ ಇರುವಿಕೆ ಮತ್ತು ವ್ಯಾಪ್ತಿಯನ್ನು ತಿಳಿದುಕೊಳ್ಳುವುದು.
- ಪ್ರಕೃತಿಯ ಸಮತೋಲನವು ಮಾನವನ ಅಸ್ತಿತ್ವಕ್ಕೆ ಆಧಾರವಾಗಿದೆಯೆಂದು ತಿಳಿಯುವುದು.
- ಪರಿಸರ ಸಂರಕ್ಷಣ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಮನೋಭಾವವು ರೂಪುಗೊಳ್ಳುವುದು.
- ಪ್ರಾಕೃತಿಕ ವಿಕೋಪಗಳ ನಿಯಂತ್ರಣ ಮಾರ್ಗಗಳ ಕುರಿತು ತಿಳುವಳಿಕೆಯನ್ನು ಗಳಿಸುವುದು.

ಮೌಲ್ಯ ನಿರ್ಣಯ ಮಾಡುವ

1. ಮಾನವನ ಅವೈಜ್ಞಾನಿಕವಾದ ಹಸ್ತಕ್ಷೇಪವು ಭೂಮಂಡಲವನ್ನು ದೋಷಕರವಾಗಿ ಬಾಧಿಸುತ್ತದೆ. ಉದಾಹರಣೆಯೊಂದಿಗೆ ಸ್ಪಷ್ಟಪಡಿಸಿರಿ.
2. ಜೈವ ಮಂಡಲದ ಆರೋಗ್ಯಕರವಾದ ನೆಲೆನಿಲ್ಲುವಿಕೆಗೆ ಭೂಮಂಡಲದ ವೈಜ್ಞಾನಿಕವಾದ ನಿರ್ವಹಣೆಯು ಅನಿವಾರ್ಯವಾಗಿದೆ. ಇದಕ್ಕೆ ಅಗತ್ಯವಾದ ಮೂರು ಚಟುವಟಿಕೆಗಳನ್ನು ಕಂಡುಕೊಂಡು ಬರೆಯಿರಿ.
3. ನಿಮ್ಮೂರಿನ ಶುದ್ಧಜಲ ಮೂಲಗಳು ಯಾವೆಲ್ಲಾ ರೀತಿಯಲ್ಲಿ ಮಲಿನಗೊಳ್ಳುತ್ತವೆ?
4. ಜಲಮಂಡಲವು ಮೂರು ರೂಪಗಳಲ್ಲಿ ನೆಲೆನಿಂತಿದೆ. ಎಲ್ಲಿ ಮತ್ತು ಯಾವೆಲ್ಲಾ ರೂಪಗಳಲ್ಲಿ ಎಂದು ಕಂಡುಹಿಡಿಯಿರಿ.
5. ವಾಯು ಮಾಲಿನ್ಯವನ್ನು ಕಡಿಮೆ ಮಾಡಲು ನಿಮಗೆ ಏನೆಲ್ಲಾ ಮಾಡಲು ಸಾಧ್ಯವಿದೆ? ಟಿಪ್ಪಣಿ ತಯಾರಿಸಿರಿ.